www.KannadaPrabha.in ಬುಧವಾರ 6.05.2026 • ಬೆಂಗಳೂರು • ಬೆಳಗಾವಿ • ಶಿವಮೊಗ್ಗ • ಹುಬ್ಬಳ್ಳಿ • ಮಂಗಳೂರು • ಕಲಬುರಗಿ Kannada Prabha • Daily • Wednesday • 06.05.2026 • Volume 60 • Issue 125 • Pages 14 • Price ₹7 Bengaluru

ಕನ್ನಡಪ್ರಭ

ನೇರ.ದಿಟ್ಟ.ನಿರಂತರ



ಇಂದಿನ ಸ್ಪೆಷಲ್! ಪುಟದಲ್ಲಿಂದು

ಟಾಕ್ಸಿಕ್ ಚಿತ್ರದ ರೊಮ್ಯಾಂಟಿಕ್ ದೃಶ್ಯಕ್ಕೆ ಕಟ್ ಕೇಳಿಲ್ಲ: ಕಿಯಾರಾ

ಬಹುನಿರೀಕ್ಷಿತ 'ಟಾಕ್ಸಿಕ್' ಸಿನಿಮಾದಲ್ಲಿ ರಾಕಿಂಗ್ ಸ್ಟಾರ್ ಯಶ್ ಜೊತೆಗಿನ ರೊಮ್ಯಾಂಟಿಕ್ ಸೀನ್ ಎಡಿಟ್‌ಗೆ ನಾನು ಬೇಡಿಕೆ ಇಲ್ಲ. ಈ ಕುರಿತ ವದಂತಿ 'ಪಕ್ಕಾ ಅಸಂಬದ್ಧ'. ಚಿತ್ರದ ನಟಿ ಕಿಯಾರಾ ಅಡ್ವಾಣಿ ಸ್ಪಷ್ಟನೆ. 14



ಯುರೋಪ್ ಟು ಆಫ್ರಿಕಾ ಈಜಿ 60 ವರ್ಷದ ಮಿಲಿಂದ್ ಸಾಧನೆ! ↘ 13



ಪಿಐಎಲ್‌ಗಳು ಪ್ರಚಾರದ ಹಿತಾಸಕ್ತಿ ಅರ್ಜಿಗಳಾಗುತ್ತಿವೆ: ಸುಪ್ರೀಂ ↘ 13



ವಾಣಿಜ್ಯ ಎಲ್ಪಿಜಿ ದರ ಏರಿಕೆ ಖಂಡಿಸಿ ಕೇರಳ ಹೋಟೆಲ್ ಬಂದ್ ↘ 13



ಬಿಜೆಪಿ ಸೇರಿದ 6 ಆಪ್ ಸಂಸದರ ಅನರ್ಹತೆಗೆ ರಾಷ್ಟ್ರಪತಿಗೆ ಮನವಿ ↘ 12

ಬಂಗಾಳ ಗೆಲುವಿಗೆ ಮೋದಿಗೆ ಅಧ್ಯಕ್ಷ ಟ್ರಂಪ್ ಅಭಿನಂದನೆ

ವಾಷಿಂಗ್ಟನ್: ಬಂಗಾಳ ಸೇರಿ 3 ರಾಜ್ಯಗಳಲ್ಲಿ ಬಿಜೆಪಿಯ ಚುನಾವಣಾ ಗೆಲುವಿಗಾಗಿ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅಭಿನಂದನೆ ಸಲ್ಲಿಸಿದ್ದಾರೆ ಎಂದು ಶ್ವೇತಭವನ ಮಾಹಿತಿ ನೀಡಿದೆ. ವಿವರ ↘ 13



ಶ್ರೀ ಶ್ರೀ ಕಾರ್ಯಕ್ರಮಕ್ಕೆ ಮೇ 10ಕ್ಕೆ ಮೋದಿ ಬೆಂಗ್ಳೂರಿಗೆ ಆಗಮನ

ಬೆಂಗಳೂರು: ಪ್ರಧಾನಿ ನರೇಂದ್ರ ಮೋದಿ ಮೇ 10ರಂದು ಆರ್ಟ್ ಆಫ್ ಲಿವಿಂಗ್‌ನ 45ನೇ ವಾರ್ಷಿಕೋತ್ಸವ, ರವಿಶಂಕರ್‌ಗುರೂಜಿ 70ನೇ ಹುಟ್ಟುಹಬ್ಬದ ಅಂಗವಾಗಿ ನಡೆಯುವ ಕಾರ್ಯಕ್ರಮಗಳ ಹಿನ್ನೆಲೆಯಲ್ಲಿ ಬೆಂಗಳೂರಿಗೆ ಆಗಮಿಸಲಿದ್ದಾರೆ. ವಿವರ ↘ 7



ಶೃಂಗೇರಿ ಮರು ಎಣಿಕೇಲಿ ವೋಟ್ ಡಕಾಯಿತಿ: ಸಿಎಂ

ಬೆಂಗಳೂರು: ಶೃಂಗೇರಿ ಕ್ಷೇತ್ರದ ಅಂಚೆ ಮತ ಮರು ಎಣಿಕೆ ವೇಳೆ ನಡೆದಿದ್ದು ವೋಟ್ ಚೋರಿ ಅಲ್ಲ, ವೋಟ್ ಡಕಾಯಿತಿ. ಬಿಜೆಪಿಯವರು ಅಂಚೆ ಮತ ಚೀಟಿ ತಿದ್ದಿ ರಾಜೇಗೌಡರ 255 ಮತ ಅಸಿಂಧುಗೊಳಿಸಿದ್ದಾರೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಆರೋಪಿಸಿದ್ದಾರೆ. ವಿವರ ↘ 6

ಕಬ್ಬಿನ ಬೆಂಬಲ ಬೆಲೆ 365 ರು.ಗೆ ಏರಿಕೆ: ಸಂಪುಟ ನಿರ್ಧಾರ

ನವದೆಹಲಿ: ಕಬ್ಬು ಪೂರೈಸುವ ರೈತರಿಗೆ ಮಿಲ್‌ಗಳು ಪಾವತಿಸಬೇಕಾದ ಮೊತ್ತದಲ್ಲಿ 10 ರುಪಾಯಿ ಹೆಚ್ಚಳ ಮಾಡಲಾಗಿದ್ದು, ಕ್ವಿಂಟಾಲ್‌ಗೆ 365 ರುಪಾಯಿ ಆಗಲಿದೆ. ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ನಡೆದ ಕೇಂದ್ರ ಸಚಿವ ಸಂಪುಟ ಸಭೆಯಲ್ಲಿ ಈ ನಿರ್ಧಾರ ಮಾಡಲಾಗಿದೆ. ವಿವರ ↘ 12

ಬಯೋಕಾನ್‌ಗೆ ಕ್ಲೇರ್ ಉತ್ತರಾಧಿಕಾರಿ: ಕಿರಣ್ ಮಜುಂದಾರ್

ನವದೆಹಲಿ: ಬೆಂಗಳೂರು ಮೂಲದ ಬಹುರಾಷ್ಟ್ರೀಯ ಬಯೋಟೆಕ್ ದಿಗ್ಗಜ ಕಂಪನಿ ಬಯೋಕಾನ್‌ನ ಸಂಸ್ಥಾಪಕಿ ಕಿರಣ್ ಮಜುಂದಾರ್ ಅವರು ತಮ್ಮ ಉತ್ತರಾಧಿಕಾರಿಯಾಗಿ ಸಂಬಂಧದಲ್ಲಿ ಸೊಸೆಯಾಗಿರುವ ಕ್ಲೇರ್ ಮಜುಂದಾರ್ (37) ಅವರ ಹೆಸರು ಘೋಷಿಸಿದ್ದಾರೆ. ವಿವರ ↘ 13

ಪುಟ ↘ 12

ಸುಪ್ರೀಂ ಜಡ್ಜ್‌ಗಳ ಸಂಖ್ಯೆ 38ಕ್ಕೇರಿಕೆ: ಕೇಂದ್ರ ಸಂಪುಟ

ಜೀವನಕ್ಕಾಗಿ 4 ಮನೆಗಳಲ್ಲಿ ಮುಸುರೆ ತಿಕ್ಕುತ್ತಿದ್ದ ಕಲಿತಾ ಈಗ ಬಿಜೆಪಿ ಶಾಸಕಿ!

ಬಂಗಾಳದ ಆಸ್ಗ್ರಾಮ್ ಕ್ಷೇತ್ರದಲ್ಲಿ ಜಯ | ಬಿಜೆಪಿ ಟಿಕೆಟ್‌ನಿಂದ ಗೆಲುವು

ಕೋಲ್ಕತಾ: ರಾಜಕೀಯ ಕೇವಲ ಹಣವಂತರಿಗೆ, ಪ್ರಭಾವಿಗಳಿಗೆ ಮಾತ್ರ ಎನ್ನುವ ಹೊತ್ತಿನಲ್ಲಿ ಜೀವನಕ್ಕಾಗಿ ಅವರಿವರ ಮನೆ ಪಾತ್ರೆ ತಿಕ್ಕುತ್ತಿದ್ದ ಬಡ ಮಹಿಳೆಯೊಬ್ಬರು ಪಶ್ಚಿಮ ಬಂಗಾಳ ವಿಧಾನಸಭೆಗೆ ಆಯ್ಕೆಯಾಗುವ ಮೂಲಕ ಎಲ್ಲರ ಅಚ್ಚರಿಗೆ ಕಾರಣವಾಗಿದ್ದಾರೆ.

ಕೆಲವೇ ವರ್ಷಗಳ ಹಿಂದಿನವರೆಗೂ 4 ಮನೆಗಳಲ್ಲಿ ಪಾತ್ರೆ ತಿಕ್ಕಿ ಮಾಸಿಕ ಕೇವಲ 2500 ರು. ಸಂಪಾದಿಸುತ್ತಿದ್ದ ಕಲಿತಾ ಮಾಝಿ ಇದೀಗ ಆಸ್ಗ್ರಾಮ್ ವಿಧಾನಸಭಾ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿ 107692 ಮತಗಳನ್ನು ಪಡೆಯುವ ಮೂಲಕ ಟಿಎಂಸಿಯ ಶ್ಯಾಮಪ್ರಸನ್ನ ಲೋಹರ್ ಅವರನ್ನು 12,535 ಮತಗಳ ಅಂತರದಿಂದ ಸೋಲಿಸಿದ್ದಾರೆ. ↘ 12



ಎಲ್ಲರ ಮನೆ ಕೆಲಸ ಮಾಡುತ್ತಿದ್ದ ನನಗೆ ಜನರ ಸಮಸ್ಯೆ ಅರಿವಿದೆ. ರಸ್ತೆ, ಕುಡಿಯುವ ನೀರು, ಮಹಿಳೆಯರಿಗೆ ಭದ್ರತೆ, ಯುವಕರಿಗೆ ಉದ್ಯೋಗ ನನ್ನ ಆದ್ಯತೆಯಾಗಿರಲಿದೆ.
• **ಕಲಿತಾ ಮಾಝಿ** ಬಿಜೆಪಿ ಶಾಸಕಿ

ಕರ್ನಾಟಕ ಪಿಯು ಪಠ್ಯದ ಭಾಗವಾದ ಬಾಬರ್ ಇದೀಗ ಪ.ಬಂಗಾಳ ಶಾಸಕ!

ಅನಾಥ ಮಕ್ಕಳ ಟೀಚರ್ ಖ್ಯಾತಿ | ಕರ್ನಾಟಕದಲ್ಲೂ ಸರಣಿ ಉಪನ್ಯಾಸ

• **ರಮೇಶ್ ಬಿದರಕೆರೆ**
ಕನ್ನಡಪ್ರಭ ವಾರ್ತೆ ಹಿರಿಯೂರು

ಕರ್ನಾಟಕದ ಪಿಯು ಪಠ್ಯದ ಭಾಗವಾಗಿರುವ ಪಶ್ಚಿಮ ಬಂಗಾಳದ ಮುರ್ಷಿದಾಬಾದ್ ಜಿಲ್ಲೆಯ ಭಾಪ್ಪ ಗ್ರಾಮದ ಶಿಕ್ಷಣ ತಜ್ಞ ಬಾಬರ್‌ಅಲಿ (34), ಈಗ ಪಶ್ಚಿಮ ಬಂಗಾಳ ವಿಧಾನಸಭೆ ಪ್ರವೇಶಿಸಿದ್ದಾರೆ. ಜಲಂಗಿ ವಿಧಾನ ಸಭಾ ಕ್ಷೇತ್ರದಲ್ಲಿ ಟಿಎಂಸಿಯಿಂದ ಸ್ಪರ್ಧಿಸಿ, ಗೆಲುವು ಸಾಧಿಸಿದ್ದಾರೆ.

ತಮ್ಮ 9ನೇ ವಯಸ್ಸಿನಲ್ಲಿಯೇ ಬೀದಿಗಳಲ್ಲಿ ಅಲೆಯುತ್ತಾ ಚಿಂದಿ ಆಯುವ ಮಕ್ಕಳು, ಅಲೆಮಾರಿ, ಅನಾಥ ಮಕ್ಕಳನ್ನು ಮನೆಯ ಹಿತ್ತಲಲ್ಲಿ ಕೂರಿಸಿಕೊಂಡು ಪಾಠ ಹೇಳಲು ಪ್ರಾರಂಭಿಸಿದ ಬಾಬರ್‌ಅಲಿ, ಇಂದು ಸುಮಾರು 2,000 ಮಕ್ಕಳು ಓದುವ ಶಾಲೆಯನ್ನು ನಡೆಸುತ್ತಿದ್ದಾರೆ. ↘ 12



- 2000ಕ್ಕೂ ಹೆಚ್ಚು ಅಲೆಮಾರಿ, ಅನಾಥ ಮಕ್ಕಳಿಗೆ ಶಿಕ್ಷಣ ನೀಡುತ್ತಿರುವ ಬಾಬರ್
- ಕರ್ನಾಟಕ ಸೇರಿ ಹಲವು ರಾಜ್ಯಗಳಲ್ಲಿ ಶಿಕ್ಷಣದ ಉಪನ್ಯಾಸದ ಮೂಲಕ ಖ್ಯಾತಿ
- ಸಾಧನೆ ಮೆಚ್ಚಿ 2013ರಲ್ಲಿ ಕರ್ನಾಟಕ ಪಿಯು ಪಠ್ಯದಲ್ಲಿ ಬಾಬರ್ ಪರಿಚಯ
- ಬಿಬಿಸಿಯಿಂದ ಬಾಬರ್ ಬಗ್ಗೆ 'ವಿಶ್ವದ ಅತಿ ಕಿರಿಯ ಮುಖ್ಯ ಶಿಕ್ಷಕ' ಸಾಕ್ಷ್ಯಚಿತ್ರ ಪ್ರಸಾರ

ನಾವು ಸೋತಿಲ್ಲ, ಸಿಎಂ ಸ್ಥಾನ ಬಿಡಲ್ಲ: ಮಮತಾ

ಬಿಜೆಪಿಯ ಗೆಲುವು ಜನಾದೇಶವಲ್ಲ, ದೊಡ್ಡ ಪಿತೂರಿ ರಾಜೀನಾಮೆ ನೀಡಲ್ಲ, ನನ್ನ ಹೋರಾಟ ನಿಲ್ಲುವುದಿಲ್ಲ ಸಂವಿಧಾನ ಪ್ರಕ್ರಿಯೆಗೇ ಬಂಗಾಳ ಸಿಎಂ ದೀದಿ ಸವಾಲ್

• **ಪಿಟಿಐ** ಕೋಲ್ಕತಾ

ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣಾ ಫಲಿತಾಂಶವು 'ಜನಾದೇಶವಲ್ಲ, ಬದಲಾಗಿ ಪಿತೂರಿ' ಎಂದು ಆರೋಪಿಸಿರುವ ಟಿಎಂಸಿ ಮುಖ್ಯಸ್ಥೆ ಹಾಗೂ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ, ತಾವು ಸಿಎಂ ಸ್ಥಾನದಿಂದ ಕೆಳಗಿಳಿಯುವ ಸಾಧ್ಯತೆಯನ್ನು ತಳ್ಳಿಹಾಕಿದ್ದಾರೆ. ಆದರೆ ಬೀದಿಗಿಳಿದು ವಿರೋಧ ಪಕ್ಷವಾದ ಇಂಡಿಯಾ ಕೂಟವನ್ನು ಬಲಪಡಿಸುವುದಾಗಿ ಪ್ರತಿಜ್ಞೆ ಮಾಡಿದ್ದಾರೆ. ಮಮತಾ ಅವರ ಈ ಹೇಳಿಕೆ ಕಂಡು ಕೇಳರಿಯದ ಹೇಳಿಕೆಯಾಗಿದೆ. ಏಕೆಂದರೆ ಚುನಾವಣೆಯಲ್ಲಿ ಪಕ್ಷ ಸೋತ ಬಳಿಕ ಸಿಎಂಗಳು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡುವುದು ವಾಡಿಕೆ. ↘ 12



ಮುಂದೇನು?

- 5 ವರ್ಷದ ಜನಾದೇಶ ಮುಗಿದ ಬಳಿಕ ಯಾವ ಸರ್ಕಾರಕ್ಕೂ ಮುಂದುವರಿವ ಅಧಿಕಾರವಿಲ್ಲ
- ಇದೇ ನಿಯಮ ಆಧರಿಸಿ 5 ವರ್ಷ ಅವಧಿ ಬಳಿಕ ಸಿಎಂ ರಾಜೀನಾಮೆ ನೀಡ್ಬೇಕು, ಇಲ್ಲದಿದ್ರೆ ವಜಾ
- ಹೊಸ ಸಿಎಂ ಪ್ರಮಾಣ ವಚನ ಸ್ವೀಕಾರದವರೆಗೂ ರಾಜ್ಯಪಾಲರಿಗೆ ಕಾಯುವ ಅವಕಾಶ ಇದೆ
- ಅಲ್ಲಿಯವರೆಗೂ ಸಿಎಂ ರಾಜೀನಾಮೆ ನೀಡದಿದ್ರೆ ರಾಜ್ಯಪಾಲರಿಗೆ ವಜಾದ ಅಧಿಕಾರ ಇದೆ
- ಚುನಾವಣೆ ಪ್ರಕ್ರಿಯೆಯನ್ನೇ ಪ್ರಶ್ನಿಸಿ ಮಮತಾ ಕೋರ್ಟಿಗೆ ಹೋಗುವ ಅಧಿಕಾರವಿದೆ.ಆದಾಗ್ಯೂ ರಾಜೀನಾಮೆ ಕೊಟ್ಟೇ ಹೋರಾಡಬೇಕು


ಮುಂದಿನ ವಾರ ಸಿಎಂ ಸಿದ್ದು, ಡಿಕೆಶಿಗೆ ದೆಹಲಿಗೆ ಬುಲಾವ್?

ಸದ್ಯ ಕೇರಳದಲ್ಲಿ ಹೈಕಮಾಂಡ್ ಬ್ಯುಸಿ | ಸರ್ಕಾರ ರಚನೆ ಬಳಿಕ ರಾಜ್ಯದತ್ತ ಚಿತ್ತ ಬಳಿಕ ಉಭಯ ನಾಯಕರ ಕರೆಸಿ ನಾಯಕತ್ವ, ಸಂಪುಟ ಪುನಾರಚನೆ ಚರ್ಚೆ?

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಕೇರಳದಲ್ಲಿ ಕಾಂಗ್ರೆಸ್ ಪಕ್ಷದ ಸರ್ಕಾರ ರಚನೆ ಪ್ರಕ್ರಿಯೆ ಪೂರ್ಣಗೊಂಡ ನಂತರ ಕಾಂಗ್ರೆಸ್ ಹೈಕಮಾಂಡ್ ರಾಜ್ಯ ರಾಜಕಾರಣದತ್ತ ಗಮನ ಹರಿಸುವ ಸಾಧ್ಯತೆಯಿದ್ದು, ನಂತರವಷ್ಟೇ ರಾಜ್ಯ ನಾಯಕತ್ವ ಹಾಗೂ ಸಚಿವ ಸಂಪುಟ ಪುನಾರಚನೆಯಂಥ ವಿಚಾರಗಳ ಬಗ್ಗೆ ಹೈಕಮಾಂಡ್ ಚರ್ಚೆ ಆರಂಭಿಸಬಹುದು ಎನ್ನಲಾಗುತ್ತಿದೆ.

ಮೂಲಗಳಪ್ರಕಾರಕಾಂಗ್ರೆಸ್ ಹೈಕಮಾಂಡ್ ಮೇ 10ರವರೆಗೂ ಕೇರಳ ಸಿಎಂ ಆಯ್ಕೆ ವಿಚಾರದಲ್ಲಿ ಸಂಪೂರ್ಣ ವ್ಯಸ್ತವಾಗಿರಲಿದೆ. ನಂತರ ಅಂದರೆ ಬಹುತೇಕ ಮೇ 13 ಅಥವಾ 14ರ ವೇಳೆಗೆ ರಾಜ್ಯ ರಾಜಕಾರಣದ ಬಗ್ಗೆ ಗಮನ ಹರಿಸಲು ಮನಸ್ಸು ಮಾಡಬಹುದು. ↘ 14



ಸಚಿವ ಸ್ಥಾನ ಆಕಾಂಕ್ಷಿಗಳ ದಿಲ್ಲಿ ಭೇಟಿ ತಪ್ಪಲ್ಲ. ಈ ಬಗ್ಗೆ ಅವರು ಮಾಹಿತಿ ನೀಡಿದ್ದರು. ಹೋಗುವುದು ನಿಮ್ಮಿಷ್ಟ ಎಂದಿದ್ದೆ. ಆದರೆ ನನಗೆ ದೆಹಲಿ ಕರೆ ಬಂದಿಲ್ಲ. ಬಂದರೆ ಹೋಗುವೆ.
• **ಸಿದ್ದರಾಮಯ್ಯ** ಮುಖ್ಯಮಂತ್ರಿ

ಸರ್ಕಾರಕ್ಕೆ 3 ವರ್ಷ ತುಂಬುವ ಮೊದಲೋ, ನಂತರವೋ?

- ನಾಯಕತ್ವ ಗೊಂದಲ, ಸಂಪುಟ ಪುನಾರಚನೆ ಬಗ್ಗೆ ರಾಜ್ಯ ಕಾಂಗ್ರೆಸ್‌ನಲ್ಲಿ ಗೊಂದಲ ಹಿನ್ನೆಲೆ
- ಈ ಸಮಸ್ಯೆ ಇತ್ಯರ್ಥ ಆಗದಿದ್ದರೆ ಮುಂದಿನ ಎಲೆಕ್ಷನ್‌ನಲ್ಲಿ ಪಕ್ಷಕ್ಕೆ ಹೊಡೆತ ಬೀಳುವ ಆತಂಕ
- ಹೀಗಾಗಿ ಈ ಬಗ್ಗೆ ಸಿಎಂ, ಡಿಸಿಎಂ ಇಬ್ಬರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ನಿರ್ಧಾರ ಸಾಧ್ಯತೆ
- ಪಕ್ಷದ ಒಂದು ಬಣದ ಪ್ರಕಾರ ಸರ್ಕಾರಕ್ಕೆ 3 ವರ್ಷ ತುಂಬುವ ಮೊದಲು ನಿರ್ಧಾರ ಪ್ರಕಟ?
- ಇನ್ನೊಂದು ಬಣದ ಪ್ರಕಾರ ಸರ್ಕಾರಕ್ಕೆ 3 ವರ್ಷ ತುಂಬುವ ಮೇ 20ರ ಬಳಿಕವಷ್ಟೇ ನಿರ್ಧಾರ

ಸರ್ಕಾರ ರಚನೆಗೆ ವಿಜಯ್ ಕಸರತ್ತು: ನಾಳೆ ಪ್ರಮಾಣ?

2 ವಾರದಲ್ಲಿ ವಿಶ್ವಾಸ: ಗೌರ್ನರ್‌ಗೆ ಪತ್ರ ಬಹುಮತದ 10 ಸೀಟಿಗೆ ಮಾತುಕತೆ


ಚೆನ್ನೈ: ತಮಿಳುನಾಡಿನಲ್ಲಿ ಅತಂತ್ರ ವಿಧಾನಸಭೆ ಸೃಷ್ಟಿ ಆಗಿರುವ ಕಾರಣ, ಅತಿದೊಡ್ಡ ಪಕ್ಷವಾಗಿ ಹೊರಹೊಮ್ಮಿರುವ ನಟ ವಿಜಯ್ ಅವರ ಟಿವಿಕೆ ಪಕ್ಷವು ಕಾಂಗ್ರೆಸ್ ಹಾಗೂ ಸಣ್ಣಪುಟ್ಟ ಪಕ್ಷಗಳ ಜತೆ ಮೈತ್ರಿ ಕಸರತ್ತು ಆರಂಭಿಸಿದೆ. ಮೇ 7ಕ್ಕೆ ಪ್ರಮಾಣ ವಚನ ಸ್ವೀಕರಿಸುವ ಇರಾದೆಯನ್ನು ವಿಜಯ್ ವ್ಯಕ್ತಪಡಿಸಿದ್ದಾರೆಂದು ಗೊತ್ತಾಗಿದೆ. ಇದಕ್ಕೆ ಪೂರಕವಾಗಿ ಕಾಂಗ್ರೆಸ್ ನಾಯಕ ಕೆ.ಸಿ. ವೇಣುಗೋಪಾಲ್ ಪ್ರತಿಕ್ರಿಯಿಸಿ, ಮೈತ್ರಿ ಬಗ್ಗೆ ಬುಧವಾರ ಪಕ್ಷ ನಿರ್ಧರಿಸಲಿದೆ ಎಂದಿದ್ದಾರೆ.

ಸೋಮವಾರ ವಿಜಯ್ ಅಧ್ಯಕ್ಷತೆಯಲ್ಲಿ ಟಿವಿಕೆ ಶಾಸಕರ ಸಭೆ ನಡೆಯಿತು. ಈ ವೇಳೆ ಅವರನ್ನು ಶಾಸಕಾಂಗ ನಾಯಕ ಎಂದು ಆಯ್ಕೆ ಮಾಡಲಾಯಿತು. ↘ 14




ಪ.ಬಂಗಾಳ ಸಿಎಂ ಹುದ್ದೆಗಾಗಿ ನಾಲ್ವರ ನಡುವೆ ಸೆಣಸಾಟ

ಸುವೇಂದು, ದಿಲೀಪ್, ಪೌಲ್, ರೂಪಾ ಮೀಸಲು ಚರ್ಚೆ ನಡುವೆ ಸ್ತ್ರೀಗೆ ಪಟ್ಟ?



ಸುವೇಂದು



ದಿಲೀಪ್



ಅಗ್ನಿಮಿತ್ರಾ



ರೂಪಾ ಗಂಗೂಲಿ

ಕೋಲ್ಕತಾ: ಪ.ಬಂಗಾಳದಲ್ಲಿ ಬಿಜೆಪಿ ಸರ್ಕಾರ ರಚನೆ ಪ್ರಕ್ರಿಯೆಗಳು ಆರಂಭವಾಗಿವೆ. ರವೀಂದ್ರನಾಥ ಟ್ಯಾಗೋರ್ ಅವರ ಜನ್ಮದಿನವಾದ ಮೇ 9ರಂದು ಹೊಸ ಸಿಎಂ ಪ್ರಮಾಣವಚನ ಸ್ವೀಕಾರ ಸಾಧ್ಯತೆ ಇದೆ. ಸುವೇಂದು ಅಧಿಕಾರಿ, ಬಿಜೆಪಿ ಮಾಜಿ ರಾಜ್ಯಾಧ್ಯಕ್ಷ ದಿಲೀಪ್ ಘೋಷ್, ಅಗ್ನಿಮಿತ್ರಾ ಪೌಲ್ ಮತ್ತು ಮಹಾಭಾರತದ ದ್ರೌಪದಿ ಖ್ಯಾತಿಯ ರೂಪಾ ಗಂಗೂಲಿ ಹೆಸರು ಸಿಎಂ ಸ್ಥಾನಕ್ಕೆ ಕೇಳಿಬರುತ್ತಿದೆ. ↘ 14

ಖರ್ಗೆ ಹೇಳಿದ ಮೇಲೆ ಸಿಎಂ ಚರ್ಚೆ ಬೇಕಿಲ್ಲ: ಪ್ರಿಯಾಂಕ್

ಸಂದರ್ಭ, ಸನ್ನಿವೇಶ ಬರಲಿ ಅಂತ ಹೇಳಿದ್ದಾರೆ ಖರ್ಗೆ ಹೇಳಿದ ಮೇಲೆ ಮತ್ತೆ ಚರ್ಚೆ ಅಪ್ರಸ್ತುತ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ರಾಜ್ಯದಲ್ಲಿ ಮುಖ್ಯಮಂತ್ರಿ ಸ್ಥಾನ ಖಾಲಿಯಿಲ್ಲ ಎಂದು ಎಐಸಿಸಿ ಅಧ್ಯಕ್ಷರೇ ಹೇಳಿದ್ದಾರೆ. ಅವರೇ ಈ ರೀತಿ ಹೇಳಿದ ಮೇಲೆ ನಾವೆಲ್ಲ ಆ ವಿಚಾರ ಕುರಿತು ಮಾತನಾಡುವುದೇ ಅಪ್ರಸ್ತುತ ಎಂದು ಸಚಿವ ಪ್ರಿಯಾಂಕ್ ಖರ್ಗೆ ಹೇಳಿದ್ದಾರೆ.

ಸದಾಶಿವನಗರದ ತಮ್ಮ ನಿವಾಸದ ಬಳಿ ಮಂಗಳವಾರ ಸುದ್ದಿಗಾರರ ಜತೆ ಮಾತನಾಡಿ, ಸಿಎಂ ಸ್ಥಾನದ ವಿಚಾರವಾಗಿ ಸಂದರ್ಭ ಬಂದಾಗ ತೀರ್ಮಾನ ತೆಗೆದುಕೊಳ್ಳುತ್ತೇವೆಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರೇ ಹೇಳಿದ್ದಾರೆ. ಅವರು ಹೇಳಿದ ಮೇಲೆ ಇನ್ನೇನು ಉಳಿಯಿತು. ಜತೆಗೆ ಮುಖ್ಯಮಂತ್ರಿ ಸ್ಥಾನ ಖಾಲಿಯಿಲ್ಲ ಎಂದಿದ್ದಾರೆ. ↘ 14



- ಎಲೆಕ್ಷನ್ ರಿಸಲ್ಟ್‌ಗೂ ಸಂಪುಟ ಪುನಾರಚನೆಗೂ ಸಂಬಂಧವಿಲ್ಲ
- ಸಿಎಂ ಸ್ಥಾನ ಖಾಲಿ ಇಲ್ಲವೆಂದು ಎಐಸಿಸಿ ಅಧ್ಯಕ್ಷರೇ ಸ್ಪಷ್ಟಪಡಿಸಿದ್ದಾರೆ
- ಸನ್ನಿವೇಶ ಬಂದಾಗ ತೀರ್ಮಾನ ತೆಗೆದುಕೊಳ್ಳುವ ಮಾತಾಡಿದ್ದಾರೆ
- ಆ ಬಗ್ಗೆ ಸ್ಪಷ್ಟನೆ ಬಳಿಕ ನಾವು ಮತ್ತೆ ಚರ್ಚೆ ನಡೆಸುವುದು ಅಪ್ರಸ್ತುತ
- ಸರ್ಕಾರಕ್ಕೆ 3 ವರ್ಷ ಆದಾಗ ಬದಲಾವಣೆ ಸಹಜ. ಸದ್ಯ ಆ ಚರ್ಚೆ ಇಲ್ಲ: ಪ್ರಿಯಾಂಕ್

77 ವರ್ಷದ ಸಿದ್ದು ದೇಶದ ಅತ್ಯಂತ ಹಿರಿಯ ಸಿಎಂ!

ಕೇರಳ ಸಿಎಂ ಸೋಲಿನ ಬಳಿಕ ಸಿದ್ದುಗೆ ಪಟ್ಟ ಪಿಣರಾಯಿ ಸ್ಥಾನವೀಗ ಕರ್ನಾಟಕ ಸಿಎಂಗೆ

ನವದೆಹಲಿ: ಇತ್ತೀಚೆಗಷ್ಟೇ 'ಕರ್ನಾಟಕದಲ್ಲಿ ಸುದೀರ್ಘಾವಧಿ ಮುಖ್ಯಮಂತ್ರಿ' ಎಂಬ ಪಟ್ಟವನ್ನು ಪಡೆದಿದ್ದ ಸಿದ್ದರಾಮಯ್ಯ (77) ಅವರು ಇದೀಗ ದೇಶದ ಅತಿ ಹಿರಿಯ ಸಿಎಂ ಆಗಿ ಹೊರಹೊಮ್ಮಿದ್ದಾರೆ. ಕೇರಳ ಸಿಎಂ ಆಗಿದ್ದ 82 ವರ್ಷದ ಪಿಣರಾಯಿ ವಿಜಯನ್ ರಾಜೀನಾಮೆಯಿಂದಾಗಿ ಅವರ ನಂತರದಲ್ಲಿದ್ದ ಸಿದ್ದರಾಮಯ್ಯ ಮೊದಲ ಸ್ಥಾನಕ್ಕೇರಿದ್ದಾರೆ.

ಈ ಪಟ್ಟಿಯಲ್ಲಿ ನಂತರದ ಸ್ಥಾನಗಳಲ್ಲಿ ಆಂಧ್ರಪ್ರದೇಶ ಸಿಎಂ ಚಂದ್ರಬಾಬು ನಾಯ್ಡು (75), ಮಿಜೋರಂನ ಲಾಲ್‌ದುಹೋಮಾ (74), ನಾಗಾಲ್ಯಾಂಡ್‌ನ ನೆಫ್ಯು ರಿಯೋ (74), ಪುದುಚೇರಿಯ ರಂಗಸಾಮಿ (74) ಇದ್ದಾರೆ. ↘ 14



- ಈವರೆಗೆ ದೇಶದ ಅತಿ ಹಿರಿಯ ಸಿಎಂ ಪಟ್ಟ ವಿಜಯನ್‌ಗಿತ್ತು (82)
- ಚುನಾವಣೆಯಲ್ಲಿ ಕೇರಳ ಸಿಎಂ ಸೋಲಿನ ಬಳಿಕ ಸಿದ್ದುಗೆ ಹಿರಿಮೆ
- ಕರ್ನಾಟಕದ ದೀರ್ಘ ಅವಧಿಯ ಸಿಎಂ ದಾಖಲೆಗೂ ಸಿದ್ದು ಪಾತ್ರ
- ಅರುಣಾಚಲ ಪ್ರದೇಶ ಪೇಮಾ ಖಂಡು (46) ಅತಿ ಕಿರಿಯ ಸಿಎಂ
- ತ.ನಾಡು ಮಾಜಿ ಸಿಎಂ ದಿ.ಕರುಣಾನಿಧಿಗೆ (92) ರಾಜ್ಯ ಆಳಿದ ಅತಿ ಹಿರಿಯ ನಾಯಕ

ಅಚ್ಚರಿ ಕಾಂಗ್ರೆಸ್, ಮಿತ್ರಪಕ್ಷಗಳಿಂದ ಸ್ಪರ್ಧಿಸಿದ್ದ ಮುಸ್ಲಿಂ ಅಭ್ಯರ್ಥಿಗಳ ಗೆಲುವಿನ ದರ ಶೇ.80 | ಮುಸ್ಲಿಮೇತರರು ಸ್ಪರ್ಧಿಸಿದ ಕಡೆ ಸೋಲೇ ಹೆಚ್ಚು

4 ರಾಜ್ಯಗಳಲ್ಲಿ ಕಾಂಗ್ರೆಸ್‌ಗೆ ಮುಸ್ಲಿಂ ಶಾಸಕರದ್ದೇ ಬಲ

ಅಸ್ಸಾಂನಲ್ಲಿ 19ರ ಪೈಕಿ 18, ಬಂಗಾಳದಲ್ಲಿ 2ಕ್ಕೆ 2, ತ.ನಾಡಲ್ಲಿ 1, ಕೇರಳದಲ್ಲಿ 35ರ ಪೈಕಿ 30 ಜನರಿಗೆ ಗೆಲುವು

ಗುವಾಹಟಿ: ಪಂಚರಾಜ್ಯಗಳ ಚುನಾವಣಾ ಫಲಿತಾಂಶ ಪ್ರಕಟವಾದ ಬೆನ್ನಲ್ಲೇ, ಐದೂ ರಾಜ್ಯಗಳಲ್ಲಿ ಕಾಂಗ್ರೆಸ್‌ನಿಂದ ಗೆದ್ದ ಅಭ್ಯರ್ಥಿಗಳಲ್ಲಿ ಬಹುತೇಕರು ಮುಸ್ಲಿಮರು ಎಂಬ ಅಚ್ಚರಿಯ ವಿಚಾರ ಬೆಳಕಿಗೆ ಬಂದಿದೆ.

ಅಸ್ಸಾಂನ 126 ಶಾಸಕ ಸ್ಥಾನಗಳಲ್ಲಿ ಕಾಂಗ್ರೆಸ್ ಕೇವಲ 19 ಸ್ಥಾನಗಳನ್ನು ಗೆದ್ದಿದೆ. ಈ 19 ಮಂದಿಯಲ್ಲಿ 18 ಜನ ಮುಸ್ಲಿಂ ಅಭ್ಯರ್ಥಿಗಳು ಎಂಬುದು ಗಮನಾರ್ಹ. ಪಕ್ಷವು ಒಟ್ಟು 20 ಮುಸ್ಲಿಂ ಅಭ್ಯರ್ಥಿಗಳನ್ನು ಕಣಕ್ಕಿಳಿಸಿತ್ತು. ಇವರಲ್ಲಿ ಇಬ್ಬರು ಮಾತ್ರ ಪರಾಜಿತರಾಗಿದ್ದಾರೆ. ಇದಕ್ಕೆ ವ್ಯತಿರಿಕ್ತವಾಗಿ, ಪಕ್ಷವು ಕಣಕ್ಕಿಳಿಸಿದ 79 ಮುಸ್ಲಿಮೇತರ ಅಭ್ಯರ್ಥಿಗಳಲ್ಲಿ ಒಬ್ಬರು ಮಾತ್ರ ಗೆಲ್ಲುವಲ್ಲಿ ಯಶಸ್ವಿಯಾಗಿದ್ದಾರೆ.

ಇನ್ನು ಕಾಂಗ್ರೆಸ್‌ನ ಮಿತ್ರಪಕ್ಷ ರೈಜೋರ್ ದಳ 2 ಸ್ಥಾನಗಳನ್ನು ಗೆದ್ದಿದೆ. ಅದರ ವಿಜೇತ ಅಭ್ಯರ್ಥಿಗಳಲ್ಲಿ ಒಬ್ಬರು ಮುಸ್ಲಿಂ ಆಗಿದ್ದರೆ, ಮತ್ತೊಬ್ಬರು ಅಖಿಲ್ ಗೊಗೊಯ್. ಇವರು ಮಾವೋವಾದಿಗಳ ಸಂಪರ್ಕದ ಆರೋಪದ ಮೇಲೆ ರಾಷ್ಟ್ರೀಯ ತನಿಖಾ ಸಂಸ್ಥೆಯಿಂದ ತನಿಖೆ ಎದುರಿಸಿದ್ದಾರೆ.

ಕೇರಳ: ಕೇರಳದ 140 ಸ್ಥಾನಗಳ ಪೈಕಿ 35 ಮುಸ್ಲಿಂ ಅಭ್ಯರ್ಥಿಗಳು ವಿಜಯಶಾಲಿಗಳಾಗಿದ್ದಾರೆ. ಇವರಲ್ಲಿ 30 ಜನ ಕಾಂಗ್ರೆಸ್ ನೇತೃತ್ವದ ಯುಡಿಎಫ್‌ನಿಂದ ಸ್ಪರ್ಧಿಸಿದ್ದರು. ಈ ಮಿತ್ರಕೂಟದಲ್ಲಿ 8 ಕಾಂಗ್ರೆಸ್ ಶಾಸಕರು ಮುಸ್ಲಿಮರು, ಉಳಿದ 22 ಶಾಸಕರು ಯುಡಿಎಫ್‌ನ ಮುಖ್ಯ ಮಿತ್ರಪಕ್ಷವಾದ ಇಂಡಿಯನ್ ಯೂನಿಯನ್ ಮುಸ್ಲಿಂ ಲೀಗ್‌ಗೆ ಸೇರಿದವರು. ↘ 12

ಕೇರಳ: ಈ ಸಲ 6 ವಿಧಾನಸಭಾ ಕ್ಷೇತ್ರಗಳಲ್ಲಿ ಬಿಜೆಪಿಗೆ 2ನೇ ಸ್ಥಾನ

ತಿರುವನಂತಪುರಂ: ಕೇರಳದಲ್ಲಿ 3 ಸ್ಥಾನಗಳನ್ನು ತನ್ನದಾಗಿಸಿಕೊಳ್ಳುವ ಮೂಲಕ ಐತಿಹಾಸಿಕ ಜಯವನ್ನು ಗಳಿಸಿರುವ ಬಿಜೆಪಿ, 6 ಕ್ಷೇತ್ರಗಳಲ್ಲಿ 2ನೇ ಸ್ಥಾನ ಪಡೆಯುವಲ್ಲಿ ಯಶಸ್ವಿಯಾಗಿದೆ. ಈ ಮೂಲಕ, ದಶಕದ ಹಿಂದಷ್ಟೇ ರಾಜ್ಯದಲ್ಲಿ ಖಾತೆ ತೆರೆದಿದ್ದ ಪಕ್ಷ ಈ ಬಾರಿ ಉತ್ತಮ ಪ್ರದರ್ಶನ ನೀಡಿದೆ. ಇದು ಮುಂದಿನ ಚುನಾವಣೆಗಳಲ್ಲಿ ಪಕ್ಷ ಮತ್ತಷ್ಟು ಸ್ಥಾನಗಳನ್ನು ಗೆಲ್ಲುವ ಮತ್ತು ರಾಜ್ಯ ಕಾರಣದಲ್ಲಿ ತನ್ನದೇ ಛಾಪು ಮೂಡಿಸುವತ್ತ ಮಹತ್ವದ ಬೆಳವಣಿಗೆ ಎಂದು ವಿಶ್ಲೇಷಿಸಲಾಗಿದೆ. ತಿರುವಳ್ಳ, ಪಾಲಕ್ಕಾಡ್, ಮಲಂಪುಳ, ಅಟ್ಟಿಂಗಲ್, ಕಾಸರಗೋಡು ಮತ್ತು ಮಂಜೇಶ್ವರದಲ್ಲಿ 2ನೇ ಸ್ಥಾನ ಪಡೆದಿರುವ ಬಿಜೆಪಿ, ಕಳೆದ ಚುನಾವಣೆಗೆ ಹೋಲಿಸಿದರೆ ಮತ ಗಳಿಕೆ ಸುಧಾರಣೆ ಕಂಡಿದೆ.

ಪ.ಬಂಗಾಳದ 3 ಮುಸ್ಲಿಂ ಬಾಹುಳ್ಯ ಜಿಲ್ಲೆಗಳಲ್ಲೂ ಬಿಜೆಪಿ ಭಾರೀ ಹವಾ!

ಕೋಲ್ಕತಾ: ಬಂಗಾಳದ ಮುಸ್ಲಿಂ ಪ್ರಾಬಲ್ಯದ ಮುರ್ಷಿದಾಬಾದ್, ಮಾಲ್ಡಾ, ಉತ್ತರ ದಿನಾಜ್‌ಪುರನಲ್ಲಿ ಬಿಜೆಪಿ ಭರ್ಜರಿ ಪ್ರದರ್ಶನ ತೋರಿದೆ. 3 ಜಿಲ್ಲೆಯ 43 ಕ್ಷೇತ್ರಗಳಲ್ಲಿ 2021ರಲ್ಲಿ 8 ಸ್ಥಾನ ಗೆದ್ದಿದ್ದ ಬಿಜೆಪಿ ಬಲ ಈಗ 19ಕ್ಕೆ ಏರಿದೆ. 35 ಸ್ಥಾನ ಹೊಂದಿದ್ದ ಟಿಎಂಸಿ ಬಲ 22ಕ್ಕೆ ಕುಸಿದಿದೆ. ಮುಸ್ಲಿಂ ಮತಗಳ ವಿಭಜನೆ ಬಿಜೆಪಿಗೆ ನೆರವಾಗಿದೆ.

ಬಂಗಾಳದ 23 ಜಿಲ್ಲೆಗಳ ಪೈಕಿ 9 ಕಡೆ ಟಿಎಂಸಿ ಶೂನ್ಯ ಸಂಪಾದನೆ


ಕೋಲ್ಕತಾ: 15 ವರ್ಷಗಳ ಕಾಲ ಪಶ್ಚಿಮ ಬಂಗಾಳ ಆಳಿದ್ದ ಟಿಎಂಸಿ ಈ ಬಾರಿಯ ಬಿಜೆಪಿ ಅಬ್ಬರಕ್ಕೆ ಧೂಳೀಪಟವಾಗಿದೆ. ರಾಜ್ಯದ 23 ಜಿಲ್ಲೆಗಳ ಪೈಕಿ 9 ಜಿಲ್ಲೆಗಳಲ್ಲಿ ಸೊನ್ನೆ ಸುತ್ತಿದೆ. ಈ ಮೂಲಕ 68 ಕ್ಷೇತ್ರಗಳಲ್ಲಿ ತನ್ನ ಅಸ್ತಿತ್ವವನ್ನೇ ಕಳೆದುಕೊಂಡಿದೆ.

ತ.ನಾಡಿನಲ್ಲಿ ಟಿವಿಕೆಯಿಂದ ತುರುವೇಕೆರೆ ವ್ಯಕ್ತಿ ವಿಜಯ!

ಉದ್ಯಮಿ ಎನ್. ಸುನಿಲ್ ಆನಂದ್‌ಗೆ ಜಯ ಮೆಟ್ಟುಪಾಳ್ಯಂನಿಂದ ವಿಧಾನಸಭೆಗೆ ಪ್ರವೇಶ

ಚೆನ್ನೈ/ತುರುವೇಕೆರೆ: ತಮಿಳುನಾಡಿನಲ್ಲಿ ನಟ ವಿಜಯ್ ಅವರ ಟಿವಿಕೆ ಪಕ್ಷ ಜಯಭೇರಿ ಬಾರಿಸಿದ ಬೆನ್ನಲ್ಲೇ, ಕರ್ನಾಟಕದ ತುಮಕೂರು ಜಿಲ್ಲೆಯ ತುರುವೇಕೆರೆಯ ವ್ಯಕ್ತಿಯೊಬ್ಬರು ಟಿವಿಕೆಯಿಂದ ಸ್ಪರ್ಧಿಸಿ ಗೆಲುವು ಸಾಧಿಸಿದ್ದಾರೆ ಎಂಬ ಅಚ್ಚರಿಯ ವಿಷಯ ತಿಳಿದುಬಂದಿದೆ.

ಎನ್. ಸುನೀಲ್ ಆನಂದ್ ಇಂಥ ಗೆಲುವು ಸಾಧಿಸಿದವರು. 75,664 ಮತ ಪಡೆದ ಇವರು ಡಿಎಂಕೆ ಹಾಗೂ ಎಐಎಡಿಎಂಕೆ ಎರಡೂ ಪಕ್ಷದವರನ್ನು ಮಣಿಸಿ, 7778 ಮತಗಳ ಅಂತರದಿಂದ ಮೆಟ್ಟುಪಾಳ್ಯಂನಲ್ಲಿ ವಿಜಯ ಸಾಧಿಸಿದ್ದಾರೆ. ↘ 14



- ಸುನೀಲ್ ಅವರ ತವರೂರು ತುರುವೇಕೆರೆ ತಾಲೂಕಿನ ಹೊಡಿಕೇಘಟ್ಟ ಗ್ರಾಮ
- ಕೆಲ ದಶಕಗಳ ಹಿಂದೆ ಇವರ ಅಜ್ಜ ತಮಿಳುನಾಡಿನ ಮೆಟ್ಟುಪಾಳ್ಯಂಗೆ ವಲಸೆ
- ರಿಯಲ್ ಎಸ್ಟೇಟ್ ಸೇರಿ ಹಲವು ಉದ್ಯಮ ನಡೆಸುತ್ತಿರುವ ಕನ್ನಡಿಗ
- ಮೊದಲಿನಿಂದಲೂ ವಿಜಯ್ ಜತೆ ಗುರುತಿಸಿಕೊಂಡಿದ್ದ ಎನ್.ಸುನೀಲ್ ಆನಂದ್
- ಚುನಾವಣೆಯಲ್ಲಿ 75664 ಮತ ಪಡೆದು ಭರ್ಜರಿ ಜಯ

ಕನ್ನಡಪ್ರಭ
ಬುಧವಾರ 6.05.2026

ಗರಿಷ್ಠ 35°c | ಕನಿಷ್ಠ 23°c

ನಗರದಲ್ಲಿ ಇಂದು **ಪೆಟ್ರೋಲ್-ಡೀಸೆಲ್** ದರ

ಪೆಟ್ರೋಲ್	ಡೀಸೆಲ್
102.96	90.99

ಸುದ್ದಿ ಸಿಂಚನ

ಮದ್ಯದ ಅಮಲಿನಲ್ಲಿ ಯುವಕ ಆತ್ಮಹತ್ಯೆಗೆ ಯತ್ನ

ಬೆಂಗಳೂರು: ಮದ್ಯದ ಅಮಲಿನಲ್ಲಿ ಯುವಕನೊಬ್ಬ ರಾಜಕಾಲುವೆಗೆ ಅಳವಡಿಸಿದ್ದ ಗ್ರಿಲ್ ಮೇಲೆ ಹತ್ತಿ ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ಹುಚ್ಚಾಟ ನಡೆಸಿರುವ ಘಟನೆ ಸುಬ್ರಮಣ್ಯಪುರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ. ಇಸ್ಮಾನ್‌ಗೊಂಡಾ (25) ಹುಚ್ಚಾಟ ನಡೆಸಿದ ಯುವಕ. ಗೋವಾದಲ್ಲಿ ಕೆಲಸ ಮಾಡಿಕೊಂಡಿದ್ದ ಇಸ್ಮಾನ್ ಗೊಂಡಾ ಸೋಮವಾರವಷ್ಟೇ ನಗರಕ್ಕೆ ಬಂದಿದ್ದ. ಆದರೆ ಮನೆಗೆ ಹೋಗಿರಲಿಲ್ಲ. ಮಂಗಳವಾರ ಮನೆಗೆ ಹೋದ ಸಂದರ್ಭದಲ್ಲಿ ಪಾಲಕರು ಬೈದರು ಎಂಬ ಕಾರಣಕ್ಕೆ ಸಂಜೆ ಕಂಠಪೂರ್ತಿ ಮದ್ಯ ಸೇವಿಸಿ, ಉತ್ತರಹಳ್ಳಿ ಬಳಿ ಇರುವ ರಾಜಕಾಲುವೆಗೆ ಅಳವಡಿಸಿದ್ದ ಗ್ರಿಲ್ ಹತ್ತಿ ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ರಂಪಾಟ ಮಾಡಿದ್ದಾನೆ. ಯುವಕನ ಹುಚ್ಚಾಟ ಗಮನಿಸಿದ ಸಾರ್ವಜನಿಕರು ಯುವಕನನ್ನು ಹಿಡಿದು ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಸ್ಥಳಕ್ಕೆ ಬಂದ ಪೊಲೀಸರು ಯುವಕನನ್ನು ಠಾಣೆಗೆ ಕರೆದೊಯ್ದು ವಿಚಾರಣೆ ನಡೆಸಿ ಎಚ್ಚರಿಕೆ ಕೊಟ್ಟು ಬಿಟ್ಟು ಕಳುಹಿಸಿದ್ದಾರೆ.

ಮರ್ಮಾಂಗಕ್ಕೆ ಶಸ್ತ್ರಚಿಕಿತ್ಸೆ ನಡೆಸಿ ಹೊಲಿಗೆ ಹಾಕದ ಆರೋಪ ಸುಳ್ಳು: ವರದಿ

ಬೆಂಗಳೂರು: ವಿಕ್ಟೋರಿಯಾ ಆಸ್ಪತ್ರೆ ವೈದ್ಯರು ಮರ್ಮಾಂಗಕ್ಕೆ ಶಸ್ತ್ರಚಿಕಿತ್ಸೆ ನಡೆಸಿ ಹೊಲಿಗೆ ಹಾಕದೆ ಮನೆಗೆ ಕಳುಹಿಸಿದ್ದರಿಂದ ವ್ಯಕ್ತಿ ಸಾವನ್ನಪ್ಪಿದ್ದ ಆರೋಪ ಸುಳ್ಳು. ಪ್ರಕರಣದಲ್ಲಿ ರೋಗಿಯ ಸಾವಿಗೆ ವೈದ್ಯರ ನಿರ್ಲಕ್ಷ್ಯ ಕಾರಣ ಎಂಬುದಕ್ಕೆ ಯಾವುದೇ ಆಧಾರವಿಲ್ಲ ಎಂದು ವಿಚಾರಣಾ ಸಮಿತಿ ವರದಿ ನೀಡಿದೆ. ಶಾ ನವಾಜ್ ಎಂಬ ಮೃತ ರೋಗಿಯು ಫೆ. 29 ರಂದು ಜನನಾಂಗದ ಪ್ರದೇಶದಲ್ಲಿ ಊತದಿಂದ ಚಿಕಿತ್ಸೆಗೆ ದಾಖಲಾಗಿದ್ದರು. ಜತೆಗೆ ಫೋರ್ನಿಯರ್ಸ್ ಗ್ಯಾಂಗ್ರೀನ್ ಜೊತೆಗೆ ಅನಿಯಂತ್ರಿತ ಮಧುಮೇಹವೂ ವ್ಯಕ್ತಿಗೆ ಇತ್ತು. ಹೀಗಾಗಿ ಗ್ಯಾಂಗ್ರೀನ್ ಭಾಗದಲ್ಲಿ ಶಸ್ತ್ರಚಿಕಿತ್ಸೆ ನಡೆಸಿದ್ದ ವೈದ್ಯರು ಪ್ಲಾಸ್ಟಿಕ್ ಸರ್ಜರಿಗೆ ಸೂಚಿಸಿದ್ದರು. ಆದರೆ, ಶಸ್ತ್ರಚಿಕಿತ್ಸೆ ಮಾಡಿ ಹೊಲಿಗೆ ಹಾಕದೆ ವೈದ್ಯರು ಮನೆಗೆ ಕಳುಹಿಸಿದರು. ಇದರಿಂದ ರಕ್ತಸ್ರಾವದಿಂದ ಪತಿಯು ನರಳಿ ಪ್ರಾಣ ಬಿಟ್ಟರು ಎಂದು ಪತ್ನಿ ದೂರು ನೀಡಿದ್ದರು.

ಇಸ್ರೋ ಕ್ಯಾಂಪಸ್ ಮೇಲೆ ಡ್ರೋನ್ ಹಾರಾಟ: ಕೇಸ್

ಬೆಂಗಳೂರು: ಇಸ್ರೋ ಕ್ಯಾಂಪಸ್ ನೋ ಡ್ರೋನ್ ವಲಯದಲ್ಲಿ ಡ್ರೋನ್ ಹಾರಾಟ ಮಾಡಿರುವ ಅಪರಿಚಿತರ ವಿರುದ್ಧ ಎಚ್‌ಎಎಲ್ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ. ಸಿಐಎಸ್‌ಎಫ್‌ನ ವಿಭಾಗದ ಎಸ್‌ಐ ಸತೀಶ್ ಕುಮಾರ್ ಎಂಬುವರು ನೀಡಿದ ದೂರಿನನ್ವಯ ಪ್ರಕರಣ ದಾಖಲಿಸಿ ತನಿಖೆ ಕೈಗೊಳ್ಳಲಾಗಿದೆ. ಮೇ 2 ರಂದು ಬೆಳಗ್ಗೆ 8.15 ರ ಸುಮಾರಿಗೆ ಇಸ್ರೋ ಐಎಸ್‌ಐಟಿಇ ಕ್ಯಾಂಪಸ್ ಮೇಲ್ಭಾಗದಲ್ಲಿ ನೋ-ಡ್ರೋನ್ ವಲಯದಲ್ಲಿ ಅನುಮತಿ ಇಲ್ಲದೆ ಸುಮಾರು 80 ರಿಂದ 100 ಅಡಿ ಎತ್ತರ ದಲ್ಲಿ 1 ಡ್ರೋನ್ ಸುಮಾರು 10 ರಿಂದ 12 ಸೆಕೆಂಡ್ ಹಾರಾಡಿ ಕಣ್ಮರೆಯಾಗಿದೆ. ಇಸ್ರೋ ಕ್ಯಾಂಪಸ್ ಸಂವೇದನಾಶೀಲ ಪ್ರದೇಶವಾಗಿದ್ದು, ಅನುಮತಿ ಇಲ್ಲದ ಚಟುವಟಿಕೆಗಳು ಭದ್ರತೆಗೆ ಅಪಾಯವನ್ನುಂಟು ಮಾಡುತ್ತದೆ. ಹಾಗಾಗಿ ಅಪರಿಚಿತರ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸಿ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

ಜಿಬಿಎ ಚುನಾವಣೆ ನಿಗದಿಗೆ ಆಯೋಗದಿಂದ ನಾಳೆ ಸಭೆ

ಬೆಂಗಳೂರು: ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ಐದು ನಗರ ಪಾಲಿಕೆಗಳ ಚುನಾವಣೆಗೆ ದಿನಾಂಕ ನಿಗದಿಪಡಿಸುವ ಸಂಬಂಧ ರಾಜ್ಯ ಚುನಾವಣಾ ಆಯೋಗವು ಮೇ 7ರಂದು ಬೆಳಗ್ಗೆ 11 ಗಂಟೆಗೆ ವಿಧಾನಸೌಧದಲ್ಲಿ ಸಭೆ ನಡೆಸಲಿದೆ. ಈ ಸಭೆಯಲ್ಲಿ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್ ಸೇರಿ ಜನಪ್ರತಿನಿಧಿಗಳು ಭಾಗಿಯಾಗುವ ಸಾಧ್ಯತೆಯಿದೆ.



ಜಯನಗರದಲ್ಲಿ ಆಯೋಜಿಸಿದ್ದ ಹೋಮಿಯೋಪತಿ ದಿನಾಚರಣೆಯನ್ನು ಸಸಿಗೆ ನೀರು ಹಾಕಿ ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ಉದ್ಘಾಟಿಸಿದರು. ಶಾಸಕ ಸಿ.ಕೆ.ರಾಮಮೂರ್ತಿ, ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಮೊಹಮ್ಮದ್ ಮೊಹಸಿನ್, ಹೋಮಿಯೋಪತಿ ಮಂಡಳಿ ಅಧ್ಯಕ್ಷ ಡಾ. ರುದ್ರೇಶ್, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನ ವಿವಿ ಕುಲಸಚಿವ ಅರ್ಜುನ್ ಒಡೆಯರ್‌ಇದ್ದರು.

ಹೋಮಿಯೋಪತಿ ದಿನ ಆಚರಣೆ

ಹೋಮಿಯೋಪತಿ ಅಗ್ಗದ ಚಿಕಿತ್ಸಾ ಪದ್ಧತಿ: ರಾಜ್ಯಪಾಲ ಗೆಹಲೋತ್

ರಾಜೀವ್ ಗಾಂಧಿ ಆರೋಗ್ಯ ವಿವಿಯಲ್ಲಿ ಹೋಮಿಯೋಪತಿ ದಿನಾಚರಣೆ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಹೋಮಿಯೋಪತಿ ಚಿಕಿತ್ಸಾ ಪದ್ಧತಿಯು ಕಡಿಮೆ ವೆಚ್ಚದಲ್ಲಿ ಲಭಿಸುವುದರ ಜೊತೆಗೆ ಮಾನವನ ದೇಹದ ರೋಗ ನಿರೋಧಕ ಶಕ್ತಿಯನ್ನೂ ಜಾಗೃತಗೊಳಿಸುತ್ತದೆ ಎಂದು ರಾಜ್ಯಪಾಲ ಥಾವರ್‌ಚಂದ್ ಗೆಹಲೋಥ್ ಅಭಿಪ್ರಾಯಪಟ್ಟರು.

ಹೋಮಿಯೋಪತಿ ಫೌಂಡೇಷನ್ ಮತ್ತು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾಲಯದ ಸಹಯೋಗದಲ್ಲಿ ಜಯನಗರದಲ್ಲಿ ಆಯೋಜಿಸಿದ್ದ ವಿಶ್ವ ಹೋಮಿಯೋಪತಿ ದಿನಾಚರಣೆಯನ್ನು ಉದ್ಘಾಟಿಸಿ ಮಾತನಾಡಿ, ಭಾರತದಲ್ಲಿ ಹೋಮಿಯೋಪತಿಯು ಒಂದು ಶಕ್ತಿಶಾಲಿ ಮತ್ತು ಜನಪ್ರಿಯ ವೈದ್ಯಕೀಯ ಪದ್ಧತಿಯಾಗಿ ರೂಪುಗೊಳ್ಳುತ್ತಿದೆ. ದೇಶಾದ್ಯಂತ ಲಕ್ಷಾಂತರ ಜನರು ಇದರಿಂದ ಪ್ರಯೋಜನ ಪಡೆಯುತ್ತಿದ್ದಾರೆ. ಕಡಿಮೆ ವೆಚ್ಚದಲ್ಲಿ ಹೋಮಿಯೋಪತಿ ಚಿಕಿತ್ಸೆ ದೊರೆಯುತ್ತದೆ. ಸರಿಯಾದ ಪ್ರಮಾಣದಲ್ಲಿ ನೀಡಲಾಗುವ ಔಷಧಿಗಳು ದೇಹದ ನೈಸರ್ಗಿಕ ರೋಗ ನಿರೋಧಕ ಶಕ್ತಿಯನ್ನು ಜಾಗೃತಗೊಳಿಸುತ್ತವೆ. ರೋಗಗಳನ್ನು ಗುಣಪಡಿಸಿಕೊಳ್ಳಲು ಹೋಮಿಯೋಪತಿಯು ಉತ್ತೇಜಿಸುತ್ತದೆ ಎಂದು ವಿವರಿಸಿದರು.

ರೋಗದ ಮೂಲ ಹುಡುಕಿ ಚಿಕಿತ್ಸೆ: ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿವಿ ಕುಲಪತಿ ಡಾ.ಬಿ.ಸಿ.ಭಗವಾನ್ ಮಾತನಾಡಿ, ರೋಗಕ್ಕೆ ಚಿಕಿತ್ಸೆ ನೀಡುವುದು ಮಾತ್ರವಲ್ಲ, ಅದರ ಮೂಲವನ್ನು ಹುಡುಕುವ ಕೆಲಸವನ್ನು ಹೋಮಿಯೋಪತಿ ಮಾಡುತ್ತದೆ. ಇದು ಈ ಆಧುನಿಕ ಯುಗದ ಅಗತ್ಯಗಳಲ್ಲಿ ಒಂದಾಗಿದೆ. ಹೀಗಾಗಿ ಹೋಮಿಯೋಪತಿ ಶಿಕ್ಷಣವನ್ನು ಬಲಪಡಿಸುವುದು ಹಾಗೂ ಅದನ್ನು ಮುಖ್ಯ ಆರೋಗ್ಯ ವ್ಯವಸ್ಥೆಯೊಂದಿಗೆ ಜೋಡಿಸುವುದು ವಿವಿಯ ಬದ್ಧತೆಯಾಗಿದೆ ಎಂದು ಸ್ಪಷ್ಟಪಡಿಸಿದರು. ಶಾಸಕ ಸಿ.ಕೆ.ರಾಮಮೂರ್ತಿ, ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಮೊಹಮ್ಮದ್ ಮೊಹಸಿನ್, ವಿವಿ ಕುಲಸಚಿವ ಅರ್ಜುನ್ ಒಡೆಯರ್, ಮೌಲ್ಯಮಾಪನ ಕುಲಸಚಿವ ಡಾ.ಎಸ್.ರಿಯಾಜ್ ಭಾಷ, ಹಣಕಾಸು ಅಧಿಕಾರಿ ಬಿ.ಕೆ.ಗಂಗಾಧರ ಉಪಸ್ಥಿತರಿದ್ದರು.

ಆಧುನಿಕ ರೋಗಗಳ ಮೂಲ ಸಂಬಂಧ: ಬಹುತೇಕ ಆಧುನಿಕ ರೋಗಗಳ ಮೂಲ ಅಡಗಿರುವುದು ನಮ್ಮ ಸಂಬಂಧಗಳಲ್ಲಿ. ಮನೆ, ಸಮಾಜ ಹಾಗೂ ಕಾರ್ಯಕ್ಷೇತ್ರದಲ್ಲಿ ನಮ್ಮ ಸಂಬಂಧ ಹೇಗಿದೆ ಎನ್ನುವುದರ ಮೇಲೆ ಆರೋಗ್ಯ ತೀರ್ಮಾನವಾಗುತ್ತದೆ ಎಂದು ರಾಜ್ಯ ಹೋಮಿಯೋಪತಿ ಮಂಡಳಿ ಅಧ್ಯಕ್ಷ ಡಾ.ಬಿ.ಟಿ.ರುದ್ರೇಶ್ ಅಭಿಪ್ರಾಯಪಟ್ಟರು.

ಭರ್ಜರಿ ಬೇಟೆ: ₹33 ಕೋಟಿ ಮೌಲ್ಯದ ಡ್ರಗ್ಸ್ ವಶ

ಪೊಲೀಸ್, ಕಸ್ಟಮ್ಸ್ ಅಧಿಕಾರಿಗಳ ಕಾರ್ಯಾಚರಣೆ | 11 ಜನ ಸೆರೆ | ಎಂಡಿಎಂಎ, ಹೈಡ್ರೋಗಾಂಜಾ ಜಪ್ತಿ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಡ್ರಗ್ಸ್ ದಂಧೆ ವಿರುದ್ಧ ಪೊಲೀಸರು ಹಾಗೂ ಕಸ್ಟಮ್ಸ್ ಅಧಿಕಾರಿಗಳ ಕಾರ್ಯಾಚರಣೆ ಮುಂದುವರೆದಿದ್ದು, ರೌಡಿ ಸೇರಿದಂತೆ 11 ಮಂದಿಯನ್ನು ಪ್ರತ್ಯೇಕವಾಗಿ ಬಂಧಿಸಿ ಸುಮಾರು 33.27 ಕೋಟಿ ರು. ಮೌಲ್ಯದ ಡ್ರಗ್ಸ್ ಅನ್ನು ವಶಪಡಿಸಿಕೊಂಡಿದ್ದಾರೆ.

ಯಾರಬ್ ನಗರದ ಸೈಯದ್ ಸುಹೈಲ್, ಆತನ ಸಂಬಂಧಿ ಮೊಹಮ್ಮದ್ ಸಮೀರ್, ಸಾದಿಕ್ ಪಾಷ, ಆರ್.ಟಿ.ನಗರದ ಅಜರುಲ್ ಹಕ್, ಎಲೆಕ್ಟ್ರಾನಿಕ್ ಸಿಟಿಯ ಕೆ.ವಿ.ಸೌಗೇಶ್, ಸಿ.ಎಚ್.ಅಲ್ತಾಫ್ ಹಾಗೂ ಐವರು ಬ್ಯಾಂಕಾಕ್ ಪ್ರಜೆಗಳು ಸಿಕ್ಕಿಬಿದ್ದಿದ್ದು, ಆರೋಪಿಗಳಿಂದ ಪ್ರತ್ಯೇಕವಾಗಿ ಕೆಜಿಗಟ್ಟಲೇ ಎಂಡಿಎಂಎ ಹಾಗೂ ಹೈಡ್ರೋ ಗಾಂಜಾ ಜಪ್ತಿಯಾಗಿದೆ.

ಗುಂಡೇಟು ತಿಂದ್ರು ಬುದ್ಧಿ ಕಲಿಯದ ರೌಡಿ: ನಗರದಲ್ಲಿ ಡ್ರಗ್ಸ್ ದಂಧೆ ನಡೆಸುತ್ತಿದ್ದ ರೌಡಿ ಸೈಯದ್ ಹಾಗೂ ಆತನ ಸೋದರ ಸಂಬಂಧಿಗಳನ್ನು ಯಶವಂತಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ. ಆರೋಪಿಗಳಿಂದ 9.74 ಕೋಟಿ ರು ಮೌಲ್ಯದ 4.978 ಕೆಜಿ ಎಂಡಿಎಂಎ ವಶಪಡಿಸಿಕೊಳ್ಳಲಾಗಿದೆ. ಇತ್ತೀಚಿಗೆ ಯಶವಂತಪುರ ಸಮೀಪ ಡ್ರಗ್ಸ್ ಮಾರಾಟಕ್ಕೆ ಯತ್ನಿಸಿದ್ದಾಗ ರೌಡಿ ತಂಡ ಸಿಕ್ಕಿಬಿದ್ದಿದೆ.

ಕೋಲಾರ ಜಿಲ್ಲೆ ಮಾಲೂರು ತಾಲೂಕಿನ ಸೈಯದ್ ವೃತ್ತಿಪರ ಕ್ರಿಮಿನಲ್ ಆಗಿದ್ದು, ಆತನ ವಿರುದ್ಧ ವಿವಿಧ ಠಾಣೆಗಳಲ್ಲಿ ಪ್ರಕರಣ ದಾಖಲಾಗಿವೆ. ಕೋಲಾರ, ಬೆಂಗಳೂರು ನಗರ ಹಾಗೂ ಗ್ರಾಮಾಂತರ ಜಿಲ್ಲೆಗಳಲ್ಲಿ ಸೈಯದ್ ಹಾವಳಿ ಇದೆ. ಈ ಕ್ರಿಮಿನಲ್ ಚಟುವಟಿಕೆ ಹಿನ್ನಲೆಯಲ್ಲಿ ಆತನ ಮೇಲೆ ಹೊಸಕೋಟೆ ಪೊಲೀಸರು ರೌಡಿಪಟ್ಟಿ ತೆರೆದಿದ್ದರು. ಡ್ರಗ್ಸ್ ಪ್ರಕರಣದಲ್ಲಿ ಆತನನ್ನು ಬಂಧಿಸಿ ಪೊಲೀಸರು ಜೈಲಿಗೆ ಕಳುಹಿಸಿದ್ದರು. ಒಂದು ಬಾರಿಗೆ ಆತನಿಗೆ ಪೊಲೀಸರು ಗುಂಡು ಹೊಡೆದು ಬಂಧಿಸಿದ್ದರು. ಆದರೆ ಜಾಮೀನು ಪಡೆದು ಹೊರ ಬಂದು ಸೈಯದ್ ಮತ್ತೆ ದಂಧೆಗಿಳಿದಿದ್ದ ಎಂದು ಪೊಲೀಸರು ವಿವರಿಸಿದ್ದಾರೆ.

ನೈಜೀರಿಯಾ ಡ್ರಗ್ಸ್ ದಂಧೆಕೋರರ ಸೂಚನೆ ಮೇರೆಗೆ ಸೈಯದ್ ತಂಡ ಕಾರ್ಯನಿರ್ವಹಿಸುತ್ತಿತ್ತು. ವಿದೇಶಿ ಪೆಡ್ಲರ್‌ಗಳಿಂದ ಕೆಜಿ ಗಟ್ಟಲೇ ಡ್ರಗ್ಸ್ ಪಡೆದು ಬಳಿಕ ಸಣ್ಣಸಣ್ಣ ಪೊಟ್ಟಣಗಳಲ್ಲಿ ತುಂಬಿ ಗ್ರಾಹಕರಿಗೆ ಪೂರೈಸುತ್ತಿದ್ದರು. ಸೈಯದ್ ತಂಡಕ್ಕೆ ನೈಜೀರಿಯಾ ಪೆಡ್ಲರ್‌ಗಳು ನಿಗದಿತ ಸ್ಥಳಕ್ಕೆ ಲೋಕೇಷನ್ ಕಳುಹಿಸಿದ್ದರು. ಆ ಸ್ಥಳಕ್ಕೆ ತೆರಳಿ ಗ್ರಾಹಕರಿಗೆ ಆರೋಪಿಗಳು ಡ್ರಗ್ಸ್ ಪೂರೈಸಿ ಬರುತ್ತಿದ್ದರು. ಈ ಪ್ರಕರಣದಲ್ಲಿ ತಪ್ಪಿಸಿಕೊಂಡಿರುವ ಮತ್ತೆ ಕೆಲವರ ಬಂಧನಕ್ಕೆ ಖಾಕಿ ತನಿಖೆ ನಡೆದಿದೆ.

ಇದೇ ರೀತಿ ದಂಧೆ ನಡೆಸುತ್ತಿದ್ದ ಮತ್ತೊಬ್ಬ ಯಶವಂತಪುರ ಪೊಲೀಸರಿಗೆ ಸೆರೆಯಾಗಿದ್ದಾನೆ. ಆರ್.ಟಿ.ನಗರದ ಮೊಹಮ್ಮದ್ ಅಜರುಲ್ ಹಕ್ ಬಂಧಿತನಾಗಿದ್ದು, ಆರೋಪಿಯಿಂದ 6.36 ಕೋಟಿ ರು ಮೌಲ್ಯದ 3 ಕೆ.ಜಿ 180 ಗ್ರಾಂ ಎಂಡಿಎಂಎ ಜಪ್ತಿ ಮಾಡಲಾಗಿದೆ. ಈತ ಸಹ ನೈಜೀರಿಯಾ ಪ್ರಜೆಗಳ ಸೂಚನೆ ಮೇರೆಗೆ ದಂಧೆ ನಡೆಸುತ್ತಿದ್ದ ಎಂದು ಪೊಲೀಸರು ತಿಳಿಸಿದ್ದಾರೆ.



ಪೆಡ್ಲರ್ಸ್‌ಗಳಿಂದ ವಶಪಡಿಸಿಕೊಂಡ ಡ್ರಗ್ಸ್ ಅನ್ನು ಆಯುಕ್ತ ಸೀಮಂತ್ ಕುಮಾರ್ ಸಿಂಗ್ ಪರಿಶೀಲಿಸಿದರು.

ಒಳಾಂಗಣ ವಿನ್ಯಾಸಗಾರ ಸೇರಿ ಇಬ್ಬರ ಬಂಧನ

ನಂದಿನಿ ಲೇಔಟ್ ಠಾಣೆ ಪೊಲೀಸರು ನಡೆಸಿದ ಕಾರ್ಯಾಚರಣೆಯಲ್ಲಿ ಒಳಾಂಗಣ ವಿನ್ಯಾಸಗಾರ ಸೇರಿದಂತೆ ಇಬ್ಬರು ಸಿಕ್ಕಿಬಿದ್ದಿದ್ದಾರೆ. ಕೇರಳ ಮೂಲದ ಕೆ.ವಿ ಸೌಗೇಶ್ ಹಾಗೂ ಅಲ್ತಾಫ್ ಬಂಧಿತರಾಗಿದ್ದು, 4 ಕೋಟಿ ರು. ಮೌಲ್ಯದ 5.7 ಕೆಜಿ ಹೈಡ್ರೋ ಗಾಂಜಾ ಜಪ್ತಿಯಾಗಿದೆ. ನಗರದಲ್ಲಿ ಒಳಾಂಗಣ ವಿನ್ಯಾಸಕಾರನಾಗಿ ನಾಗೇಶ್ ಹಾಗೂ ಕ್ಯಾಬ್ ಚಾಲಕನಾಗಿ ಅಲ್ತಾಪ್ ಕೆಲಸ ಮಾಡುತ್ತಿದ್ದರು. ಎಲೆಕ್ಟ್ರಾನಿಕ್ ಸಿಟಿ ಸಮೀಪ ಆರೋಪಿಗಳು ನೆಲೆಸಿದ್ದರು. ಮೋಜು ಮಸ್ತಿ ಜೀವನಕ್ಕೆ ಡ್ರಗ್ಸ್ ದಂಧೆಯಲ್ಲಿ ಆರೋಪಿಗಳು ತೊಡಗಿದ್ದರು ಎಂದು ಪೊಲೀಸರು ಹೇಳಿದ್ದಾರೆ. ಈ ಆರು ಮಂದಿ ಪೆಡ್ಲರ್‌ಗಳನ್ನು ಉತ್ತರ ವಿಭಾಗದ ಡಿಸಿಪಿ ಬಿ.ಎಸ್.ನೇಮಗೌಡ ಮಾರ್ಗದರ್ಶನದಲ್ಲಿ ಯಶವಂತಪುರ ಉಪ ವಿಭಾಗದ ಎಸಿಪಿ ಮೇರಿ ಶೈಲಜಾ ನೇತೃತ್ವದಲ್ಲಿ ಯಶವಂತಪುರ ಠಾಣೆ ಇನ್ಸ್‌ಪೆಕ್ಟರ್ ಎಸ್.ಮಂಜುನಾಥ್ ಹಾಗೂ ನಂದಿನಿಲೇಔಟ್ ಠಾಣೆಯ ಇನ್ಸ್‌ಪೆಕ್ಟರ್ ಆರ್.ಎಲ್.ಗಣಪತಿ ನೇತೃತ್ವದ ತಂಡ ಬಂಧಿಸಿದೆ.

5 ಬ್ಯಾಂಕಾಕ್ ಪ್ರಜೆಗಳ ಬಳಿ ₹13 ಕೋಟಿ ಡ್ರಗ್ಸ್

ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಪ್ರತ್ಯೇಕವಾಗಿ ಐವರು ಬ್ಯಾಂಕಾಕ್ ಪ್ರಜೆಗಳನ್ನು ಬಂಧಿಸಿ 13.17 ಕೋಟಿ ರು ಮೌಲ್ಯದ ಡ್ರಗ್ಸ್ ಅನ್ನು ಕಸ್ಟಮ್ಸ್ ಅಧಿಕಾರಿಗಳು ಜಪ್ತಿ ಮಾಡಿದ್ದಾರೆ. ವಿದೇಶದಿಂದ ಕಳ್ಳಸಾಗಾಣಿಕೆ ಮೂಲಕ ನಾಡಿಗೆ ಡ್ರಗ್ಸ್ ಸಾಗಾಣಿಕೆಗೆ ಆರೋಪಿಗಳು ಯತ್ನಿಸಿದ್ದರು. ಈ ಬಗ್ಗೆ ಖಚಿತ ಮಾಹಿತಿ ಪಡೆದು ಕಸ್ಟಮ್ಸ್ ಕಾರ್ಯಾಚರಣೆ ನಡೆಸಿದೆ. ಕೆಐಎಗೆ ಪ್ರತ್ಯೇಕವಾಗಿ ಸೋಮವಾರ ರಾತ್ರಿ ಪ್ರವಾಸಿಗರು ಬಂದಿಳಿದರು. ಒಬ್ಬಾತನಿಂದ 1.11 ಕೋಟಿ ರು ಮೌಲ್ಯದ 3.18 ಕೆಜಿ, ಇಬ್ಬರಿಂದ 9.31 ಕೋಟಿ ರು ಮೌಲ್ಯದ 26.62 ಕೆಜಿ ಹಾಗೂ ಮತ್ತಿಬ್ಬರಿಂದ 2.75 ಕೋಟಿ ರು ಬೆಲೆಯ 7.86 ಕೆಜಿ ಸೇರಿದಂತೆ ಒಟ್ಟು 13.17 ಕೋಟಿ ರು ಮೌಲ್ಯದ 37.66 ಕೆಜಿ ಹೈಡ್ರೋ ಗಾಂಜಾ ಜಪ್ತಿಯಾಗಿದೆ ಎಂದು ಕಸ್ಟಮ್ಸ್ ಹೇಳಿದೆ.

ಮನೆಗಳಿಗೆ ಕನ್ನ ಹಾಕಿ ಚಿನ್ನ ಕದ್ದವನ 140 ಕಿ.ಮೀ. ಬೆನ್ನಟ್ಟಿ ಬಂಧಿಸಿದರು

ಬಿ.ಎಂ.ಕಾವಲ್ ಮನೆಯಲ್ಲಿ ಕಳ್ಳತನ | 1 ಕೋಟಿ ರು.ಚಿನ್ನಾಭರಣ ವಶ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ರಾಜಧಾನಿಯಲ್ಲಿ ಬೀಗ ಹಾಕಿದ ಮನೆಗಳಿಗೆ ಕನ್ನ ಹಾಕುತ್ತಿದ್ದ ಕಳ್ಳನೊಬ್ಬನನ್ನು 140 ಕಿ.ಮೀ. ಬೆನ್ನು ಹತ್ತಿ ಇಂದಿರಾ ನಗರ ಪೊಲೀಸರು ಸೆರೆ ಹಿಡಿದಿದ್ದಾರೆ.



ಬೆಂಗಳೂರು ಗ್ರಾ.ಜಿಲ್ಲೆ ದೇವನ ಹಳ್ಳಿ ತಾಲೂಕಿನ ನಾರ್ತ್ ಟೌನ್ ಲೇಔಟ್ ನಿವಾಸಿ ಬಿ.ಪ್ರಕಾಶ್ ಅಲಿ ಯಾಸ್ ಜಂಗ್ಲಿ ಬಂಧಿತ.ಆರೋಪಿ ಯಿಂದ ₹1.15 ಕೋಟಿ ಮೌಲ್ಯದ 855 ಗ್ರಾಂ ಚಿನ್ನ ಜಪ್ತಿ ಮಾಡಲಾಗಿದೆ.

ಕೆಲ ದಿನಗಳ ಹಿಂದೆ ಬಿ.ಎಂ.ಕಾವಲ್‌ನಲ್ಲಿ ಮನೆಯೊಂದರಲ್ಲಿ ಚಿನ್ನಾಭರಣ ಕಳ್ಳತನವಾಗಿತ್ತು. ಈ ಕೃತ್ಯದ ಖದೀಮನ ಬೇಟೆಗಿಳಿದ ಪೊಲೀಸರು, ಸಾಂದರ್ಭಿಕ ಸಾಕ್ಷ್ಯಗಳನ್ನು ಪರಿಶೀಲಿಸಿದಾಗ ಜಂಗ್ಲಿ ಪ್ರಕಾಶ್ ಕೈವಾಡವಿರುವುದು ಗೊತ್ತಾಗಿದೆ. ಕೊನೆಗೆ 140 ಕಿ.ಮೀ ಬೆನ್ನತ್ತಿ ಆರೋಪಿಯನ್ನು ಹಲಸೂರು ಉಪ ವಿಭಾಗದ ಎಸಿಪಿ ರಂಗಪ್ಪ ಹಾಗೂ ಇಂದಿರಾನಗರ ಇನ್ಸ್‌ಪೆಕ್ಟರ್ ಸುದರ್ಶನ್ ನೇತೃತ್ವದ ತಂಡ ಬಂಧಿಸಿದೆ.

66 ಕೃತ್ಯಗಳಲ್ಲಿ ಪ್ರಕಾಶ್ ಪಾತ್ರ: ಕೃಷಿಕ ಎಂದು ಹೇಳಿಕೊಳ್ಳುವ ಪ್ರಕಾಶ್ ವೃತ್ತಿಪರ ಮನೆಗಳ್ಳನಾಗಿದ್ದು, ಆತನ ವಿರುದ್ಧ ಬೆಂಗಳೂರು ನಗರ, ಗ್ರಾಮಾಂತರ, ತಮಿಳುನಾಡು ಹಾಗೂ ಆಂಧ್ರಪ್ರದೇಶದಲ್ಲಿ ಸುಮಾರು 66 ಪ್ರಕರಣಗಳು ದಾಖಲಾಗಿವೆ. ಹಲವು ವರ್ಷಗಳಿಂದ ಮನೆಗಳ್ಳತನ ಕೃತ್ಯದಲ್ಲಿ ಪ್ರಕಾಶ್ ನಿರಂತನಾಗಿದ್ದಾನೆ. ಹಾಗೆ ಹಲವು ಬಾರಿ ಆತ ಜೈಲೂಟ ಸವಿದಿದ್ದಾನೆ. ಆದರೆ ಪ್ರಕಾಶ್ ಚಾಳಿ ಬಿಟ್ಟಿರಲಿಲ್ಲ.

ಕೆಲ ದಿನಗಳ ಹಿಂದೆ ತಮ್ಮ ಕುಟುಂಬ ಸಮೇತ ಕೇರಳಕ್ಕೆ ತೆರಳಿದ್ದಾಗ ಬಿ.ಎಂ.ಕಾವಲ್ ನಿವಾಸಿ ಖಾಸಗಿ ಕಂಪನಿ ಉದ್ಯೋಗಿ ಗೋವಿಂದನ್ ಮನೆಯಲ್ಲಿ ಆತ ಚಿನ್ನಾಭರಣ ದೋಚಿದ್ದ. ಈ ಕೃತ್ಯ ಸಂಬಂಧ 300ಕ್ಕೂ ಹೆಚ್ಚಿನ ಸಿಸಿಟಿವಿ ಪರಿಶೀಲಿಸಿದಾಗ ಆರೋಪಿಯ ಸುಳಿವು ಸಿಕ್ಕಿತು. ಆದರೆ, ನಗರ ತೊರೆದು ಪೊಲೀಸರಿಗೆ ಸಿಗದೆ ಆತ ತಪ್ಪಿಸಿಕೊಳ್ಳುತ್ತಿದ್ದ. ಬೆಂಬಿಡದೆ 140 ಕಿ.ಮೀ ಬೆನ್ನಹಟ್ಟಿದಾಗ ಖಾಕಿ ಬಲೆಗೆ ಬಿದ್ದಿದ್ದಾನೆ.

ಕದ್ದ ಚಿನ್ನ ಸ್ವೀಕರಿಸಿದವರ ಸೆರೆ

ಪ್ರಕಾಶ್‌ನಿಂದ ಕದ್ದ ಚಿನ್ನಾಭರಣ ಸ್ವೀಕರಿಸಿದ ಆರೋಪದ ಮೇರೆಗೆ ಇಬ್ಬರು ಚಿನ್ನಾಭರಣ ವ್ಯಾಪಾರಿಗಳನ್ನು ಇಂದಿರಾನಗರ ಪೊಲೀಸರು ಬಂಧಿಸಿದ್ದಾರೆ. ಚಿಕ್ಕಪೇಟೆಯ ಸುಶಾಂತ್ ದೇಶಮುಖ್ ಹಾಗೂ ಭಾಗಿರಥ್ ದೇವಾಸಿ ಬಂಧಿತರು. ಕಳ್ಳತನ ಕೃತ್ಯದಲ್ಲಿ ಪ್ರಕಾಶ್ ದೋಚಿದ್ದ ಚಿನ್ನಾಭರಣ ವಿಲೇವಾರಿಗೆ ಇಬ್ಬರು ನೆರವಾಗಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ಕೆಲಸಕ್ಕಿದ್ದ ಮನೇಲಿ ₹43 ಲಕ್ಷದ ಚಿನ್ನ ಕದ್ದ ದಂಪತಿ

ಕತ್ರಿಗುಪ್ಪೇಲಿ ಘಟನೆ: ಆರೋಪಿಗಳ ಸೆರೆ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ತಾವು ಕೆಲಸ ಮಾಡುತ್ತಿದ್ದ ರಿಯಲ್ ಎಸ್ಟೇಟ್ ಉದ್ಯಮಿ ಮನೆಯಲ್ಲಿ ಚಿನ್ನಾಭರಣ ಕಳವು ಮಾಡಿದ್ದ ದಂಪತಿಯನ್ನು ಚನ್ನಮ್ಮನಕೆರೆ ಅಚ್ಚುಕಟ್ಟು ಠಾಣೆ ಪೊಲೀಸರು ಬಂಧಿಸಿದ್ದಾರೆ.





ಕತ್ರಿಗುಪ್ಪೆ ನಿವಾಸಿಗಳಾದ ಎಂ.ಐಶ್ವರ್ಯ ಹಾಗೂ ಮಣಿಕಂಠ ಬಂಧಿತರಾಗಿದ್ದು, ಆರೋಪಿಗಳಿಂದ 199 ಗ್ರಾಂ ಚಿನ್ನಾಭರಣ, 730 ಗ್ರಾಂ ಬೆಳ್ಳಿ ವಸ್ತುಗಳು ಹಾಗೂ 13.20 ಲಕ್ಷ ಹಣ ಸೇರಿದಂತೆ 42.89 ಲಕ್ಷ ರು. ಮೌಲ್ಯದ ವಸ್ತುಗಳನ್ನು ಜಪ್ತಿ ಮಾಡಲಾಗಿದೆ.

ಇತ್ತೀಚಿಗೆ ಉದ್ಯಮಿ ಜಿ.ಮಲ್ಲಿಕಾರ್ಜುನ್ ಮನೆಯಲ್ಲಿ ಚಿನ್ನಾಭರಣ ಕಳ್ಳತನವಾಗಿತ್ತು. ಈ ಕೃತ್ಯದಲ್ಲಿ ತಮ್ಮ ಮನೆ ಕೆಲಸಗಾರರ ಕೈವಾಡ ಬಗ್ಗೆ ಅವರು ಶಂಕೆ ವ್ಯಕ್ತಪಡಿಸಿದ್ದರು. ಈ ಮಾಹಿತಿ ಮೇರೆಗೆ ತನಿಖೆಗಿಳಿದ ಪೊಲೀಸರು, ಮಣಿಕಂಠ ದಂಪತಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ಕೊನೆಗೆ ತಪ್ಪೊಪ್ಪಿಕೊಂಡಿದ್ದಾರೆ.

ದಾವಣಗೆರೆ ಜಿಲ್ಲೆ ಚನ್ನಗಿರಿ ತಾಲೂಕಿನ ಬಸವಪಟ್ಟಣದ ದಾಗಿನಕಟ್ಟೆ ಗ್ರಾಮದ ಮಣಿಕಂಠ ಹಾಗೂ ಐಶ್ವರ್ಯ ಕೆಲಸ ಅರಸಿಕೊಂಡು ನಗರಕ್ಕೆ ಬಂದಿದ್ದರು. 6 ತಿಂಗಳ ಹಿಂದೆ ಉದ್ಯಮಿ ಮಲ್ಲಿಕಾರ್ಜುನ್ ಮನೆಯಲ್ಲಿ ಕಾರು ಚಾಲಕನಾಗಿ ಮಣಿಕಂಠ ಸಹಾಯಕಿಯಾಗಿ ಐಶ್ವರ್ಯ ಸೇರಿದ್ದರು. ಆದರೆ, ಹಣದಾಸೆಗೆ ಬಿದ್ದು ಚಿನ್ನಾಭರಣವನ್ನು ಆರೋಪಿಗಳು ಕಳವು ಮಾಡಿದ್ದರು.

ಬೈಕ್ ಕದ್ದು ನಕಲಿ ಆರ್.ಸಿ ಮಾಡಿ ಮಾರುತ್ತಿದ್ದವರ ಸೆರೆ

ಆಂಧ್ರದವರ ಕೃತ್ಯ | ₹41 ಲಕ್ಷದ ವಸ್ತು ವಶ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಬೈಕ್ ಕಳವು ಮಾಡಿ ಬಳಿಕ ಆ ವಾಹನಗಳಿಗೆ ನಕಲಿ ನೋಂದಣಿ ಪ್ರಮಾಣ ಪತ್ರ ಸೃಷ್ಟಿಸಿ ಮಾರಾಟ ಮಾಡುತ್ತಿದ್ದ ಇಬ್ಬರು ಚಾಲಾಕಿ ಕಳ್ಳರನ್ನು ಹೆಬ್ಬಗೋಡಿ ಪೊಲೀಸರು ಬಂಧಿಸಿದ್ದಾರೆ.

ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯ ಚಿತ್ತಪ್ಪ ಆನಂದ್ ಹಾಗೂ ಶೇಖ್ ಶಫೀರ್‌ಬಾಷ ಅಲಿಯಾಸ್ ಶೇಖ್ ಬಾಷ ಬಂಧಿತನಾಗಿದ್ದು, ಆರೋಪಿಗಳಿಂದ 51 ಬೈಕ್‌ಗಳು ಹಾಗೂ 501 ನಕಲಿ ಆರ್.ಸಿ.ಕಾರ್ಡ್‌ಗಳು ಸೇರಿದಂತೆ 41.67 ಲಕ್ಷ ರು. ಮೌಲ್ಯದ ವಸ್ತುಗಳನ್ನು ಜಪ್ತಿ ಮಾಡಲಾಗಿದೆ. ಕೆಲ ದಿನಗಳ ಹಿಂದೆ ಗೊಲ್ಲಹಳ್ಳಿಯಲ್ಲಿ ಮನೆ ಮುಂದೆ ನಿಲ್ಲಿಸಿದ್ದ ಮೆಹಬೂಬ್ ಎಂಬುವರಿಗೆ ಸೇರಿದ ಬೈಕ್ ಕಳ್ಳತನವಾಗಿತ್ತು. ಈ ಬಗ್ಗೆ ತನಿಖೆ ನಡೆಸಿದ ಇನ್ಸ್‌ಪೆಕ್ಟರ್ ಸೋಮಶೇಖರ್‌ಹಾಗೂ ಸಬ್ ಇನ್ಸ್‌ಪೆಕ್ಟರ್‌ಸಂಜೀವ್ ನಾಯ್ಕ್ ತಂಡವು, ಸಿಸಿಟಿವಿ ಕ್ಯಾಮೆರಾ ಪರಿಶೀಲಿಸಿ ಆರೋಪಿಗಳನ್ನು ಬಂಧಿಸಿದೆ.

ಸೈಬರ್‌ಸೆಂಟರ್‌ನಲ್ಲಿ ನಕಲಿ ಆರ್‌ಸಿ: ಯಶವಂತಪುರದಲ್ಲಿ ನೆಲೆಸಿದ್ದ ಆಂಧ್ರಪ್ರದೇಶದ ಚಿತ್ತಪ್ಪ ವೃತ್ತಿಪರ ಕ್ರಿಮಿನಲ್ ಆಗಿದ್ದು, ಆತನ ವಿರುದ್ಧ ವಿವಿಧ ಠಾಣೆಗಳಲ್ಲಿ 10ಕ್ಕೂ ಹೆಚ್ಚಿನ ಪ್ರಕರಣಗಳು ದಾಖಲಾಗಿವೆ. ಎಸ್‌ಎಲ್‌ಎಲ್‌ಸಿ ವಿದ್ಯಾರ್ಹತೆ ಪಡೆದಿರುವ ಚಿತ್ತಪ್ಪ ಬೈಕ್ ಕಳ್ಳತನ ಕೃತ್ಯದಲ್ಲಿ ಮಾಸ್ಟರ್‌ಆಗಿದ್ದ. ಮೊದಲು ಸಣ್ಣಪುಟ್ಟ ಕೆಲಸ ಮಾಡಿಕೊಂಡು ಹೊಟ್ಟೆ ಹೊರೆಯುತ್ತಿದ್ದ ಆತ, ತರುವಾಯ ಸುಲಭವಾಗಿ ಹಣ ಸಂಪಾದನೆಗೆ ಅಡ್ಡದಾರಿ ತುಳಿದಿದ್ದಾನೆ. ಅಂತೆಯೇ ಮನೆ ಮುಂದೆ ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ನಿಲ್ಲುತ್ತಿದ್ದ ಬೈಕ್ ಗಳನ್ನು ಕಳವು ಮಾಡಿ ಕಡಿಮೆ ಬೆಲೆಗೆ ಆತ ಮಾರಾಟ ಮಾಡಿ ಹಣ ಸಂಪಾದಿಸುತ್ತಿದ್ದ ಎಂದು ಪೊಲೀಸರು ತಿಳಿಸಿದ್ದಾರೆ.

ವಾಪಸ್ | ವಿವಿಧ ಠಾಣೆಗಳ ಪೊಲೀಸರ ಕಾರ್ಯಕ್ಕೆ ಆಯುಕ್ತರ ಪ್ರಶಂಸೆ

ಕಳವಾಗಿದ್ದ 692 ಮೊಬೈಲ್‌ಗಳು ಮರಳಿ ಮಾಲೀಕರಿಗೆ ಹಸ್ತಾಂತರ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಕಳೆದ ತಿಂಗಳು ಸಾರ್ವಜನಿಕರು ಕಳೆದುಕೊಂಡಿದ್ದ 1.75 ಕೋಟಿ ರು. ಮೌಲ್ಯದ 692 ಮೊಬೈಲ್‌ಗಳನ್ನು ಪತ್ತೆ ಹಚ್ಚಿ ಈಶಾನ್ಯ ವಿಭಾಗದ ಪೊಲೀಸರು ಮರಳಿಸಿದ್ದಾರೆ.

ಯಲಹಂಕ-83, ಯಲಂಹಕ ನ್ಯೂ ಟೌನ್-76, ಕೊಡಿಗೇಹಳ್ಳಿ-66, ವಿದ್ಯಾರಣ್ಯಪುರ-86, ಸಂಪಿಗೆಹಳ್ಳಿ -107, ಕೊತ್ತನೂರು-70, ಬಾಗಲೂರು-85, ಅಮೃತಹಳ್ಳಿ -66, ಚಿಕ್ಕಜಾಲ-34, ದೇವನಹಳ್ಳಿ-12 ಹಾಗೂ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ-07 ಸೇರಿದಂತೆ ಒಟ್ಟು ಈಶಾನ್ಯ ವಿಭಾಗದ 11 ಠಾಣೆಗಳ ಪೊಲೀಸರು ಒಟ್ಟು 692 ಮೊಬೈಲ್ ಪತ್ತೆ ಹಚ್ಚಿದ್ದಾರೆ ಎಂದು ನಗರ ಪೊಲೀಸ್ ಆಯುಕ್ತ ಸೀಮಂತ್ ಕುಮಾರ್‌ಸಿಂಗ್ ತಿಳಿಸಿದ್ದಾರೆ.

ಮೊಬೈಲ್ ಪತ್ತೆ ತಂಡ ರಚನೆ: ಮೊಬೈಲ್‌ಗಳ ಕಳ್ಳತನ ಪತ್ತೆಗೆ ಪ್ರತಿ ವಿಭಾಗದಲ್ಲಿ ತಂಡ ರಚಿಸಲಾಗಿದೆ. ಮೊಬೈಲ್ ಕಣ್ಮರೆ ಬಗ್ಗೆ ಸಿಇಐಆರ್‌ಪೋರ್ಟಲ್‌ನಲ್ಲಿ ದೂರು ದಾಖಲಾದ ಕೂಡಲೇ ಪೊಲೀಸರು ಕಾರ್ಯಾಚರಣೆಗಿಳಿಯುತ್ತಾರೆ. ಅಂತೆಯೇ ಏಪ್ರಿಲ್ ತಿಂಗಳಲ್ಲಿ ಈಶಾನ್ಯ ವಿಭಾಗದ ಪೊಲೀಸರು ಉತ್ತಮ ಕಾರ್ಯನಿರ್ವಹಣೆ ತೋರಿದ್ದಾರೆ ಎಂದು ಆಯುಕ್ತರು ಶ್ಲಾಘಿಸಿದರು. ರಾಜ್ಯ ಹಾಗೂ ಹೊರ ರಾಜ್ಯಗಳಲ್ಲಿ ಸಹ ಕಳವು ಮೊಬೈಲ್‌ಗಳಿಗೆ ಪೊಲೀಸರು ಹುಡುಕಾಟ ನಡೆಸಿದ್ದಾರೆ. ಮೊಬೈಲ್ ಕಳ್ಳತನ ಕೃತ್ಯಗಳನ್ನು ಗಂಭೀರವಾಗಿ ಪರಿಗಣಿಸಲಾಗಿದ್ದು, ಮೊಬೈಲ್ ಕಳ್ಳತನವಾದ ಕೂಡಲೇ ಸಿಇಐಆರ್‌ಪೋರ್ಟಲ್‌ನಲ್ಲಿ ಸಾರ್ವಜನಿಕರು ದೂರು ದಾಖಲಿಸಿದರೆ ತನಿಖೆಗೆ ಅನುಕೂಲವಾಗಲಿದೆ ಎಂದು ತಿಳಿಸಿದರು.



ಮೊಬೈಲ್ ಪರಿಶೀಲಿಸಿದ ನಗರ ಪೊಲೀಸ್ ಆಯುಕ್ತ.

ಕಿಡಿ | ಸಾ.ರಾ.ಗೋವಿಂದು ನೇತೃತ್ವದಲ್ಲಿ ಧರಣಿ | ನಟನ ವಿರುದ್ಧ ಆಕ್ರೋಶ

ಡಾ.ರಾಜ್‌ಗೆ ನಿಂದಿಸಿದ ಚೇತನ್ ಗಡೀಪಾರಿಗೆ ಅಭಿಮಾನಿಗಳ ಪಟ್ಟು

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಡಾ.ರಾಜ್‌ಕುಮಾರ್ ಸಮಾಧಿ ಕುರಿತು ವಿವಾದಾತ್ಮಕ ಹೇಳಿಕೆ ನೀಡಿದ ನಟ ಚೇತನ್‌ರನ್ನು ಗಡೀಪಾರು ಮಾಡುವಂತೆ ಆಗ್ರಹಿಸಿ ಅಖಿಲ ಕರ್ನಾಟಕ ಡಾ.ರಾಜ್‌ಕುಮಾರ್ ಅಭಿಮಾನಿಗಳ ಸಂಘದಿಂದ ಸಾ.ರಾ.ಗೋವಿಂದು ನೇತೃತ್ವದಲ್ಲಿ ನಗರದ ಫ್ರೀಡಂ ಪಾರ್ಕ್‌ನಲ್ಲಿ ಮಂಗಳವಾರ ಪ್ರತಿಭಟನೆ ನಡೆಯಿತು.

ಪ್ರತಿಭಟನೆಯಲ್ಲಿ ರಾಜ್‌ಕುಮಾರ್ ಅವರ ನೂರಾರು ಅಭಿಮಾನಿಗಳು ಪಾಲ್ಗೊಂಡಿದ್ದು, ನಟ ಚೇತನ್ ವಿರುದ್ಧ ಧಿಕ್ಕಾರ ಘೋಷಣೆಗಳನ್ನು ಕೂಗಿದರು. ಕರ್ನಾಟಕದ ಸಾಂಸ್ಕೃತಿಕ ರಾಯಭಾರಿ ಡಾ.ರಾಜ್‌ಕುಮಾರ್ ಪುಣ್ಯಭೂಮಿ ಮತ್ತು ಅಭಿಮಾನಿಗಳ ಬಗ್ಗೆ ನಟ ಚೇತನ್ ಇಲ್ಲಸಲ್ಲದ ಮಾತುಗಳನ್ನಾಡಿದ್ದಾರೆ. ಅಣ್ಣಾವ್ರ ಬಗ್ಗೆ ಮಾತನಾಡಲು ಅವರಿಗೆ ಎಷ್ಟು ಧೈರ್ಯ ಎಂದು ಸಾ.ರಾ.ಗೋವಿಂದು ಆಕ್ರೋಶ ವ್ಯಕ್ತಪಡಿಸಿದರು. ಚೇತನ್ ನನ್ನ ವಿರುದ್ಧವೂ ಮೊಕದ್ದಮೆ ಹೂಡಿದ್ದಾರೆ. ಇದಕ್ಕೆಲ್ಲ ಹೆದರಲ್ಲ. ಕನ್ನಡ ಹೋರಾಟದಲ್ಲಿ ರಾಜಿಯಾಗಲ್ಲ ಎಂದರು. ನಿರ್ಮಾಪಕ ಎಂ.ನರಸಿಂಹಲು, ಎನ್.ಎಂ. ಸುರೇಶ್ ಇದ್ದರು.



ಪ್ರತಿಭಟನೆಯಲ್ಲಿ ಭಾಗಿಯಾಗಿದ್ದ ಅಭಿಮಾನಿಗಳು.

ಚೇತನ್ ವಿರುದ್ಧ ಗೋವಿಂದು ದೂರು: ಡಾ.ರಾಜ್ ಸ್ಮಾರಕದ ಬಗ್ಗೆ ಅವಹೇಳನಕಾರಿ ಹೇಳಿಕೆ ನೀಡಿರುವ ನಟ ಚೇತನ್ ವಿರುದ್ಧ ಕ್ರಮ ಕೈಗೊಳ್ಳುವಂತೆ ಅಖಿಲ ಕರ್ನಾಟಕ ಡಾ.ರಾಜ್‌ಕುಮಾರ್ ಅಭಿಮಾನಿ ಸಂಘದ ಅಧ್ಯಕ್ಷ ಸಾ.ರಾ.ಗೋವಿಂದು, ಕನ್ನಡ ಹೋರಾಟಗಾರರಾದ ಪ್ರವೀಣ್ ಕುಮಾರ್ ಶೆಟ್ಟಿ, ಕೆ.ಆರ್.ಕುಮಾರ್ ಮತ್ತಿತರರ ಜತೆ ಮಂಗಳವಾರ ಶೇಷಾದ್ರಿಪುರ ಪೊಲೀಸ್ ಠಾಣೆಗೆ ತೆರಳಿ ದೂರು ನೀಡಿದ್ದಾರೆ.

2ನೇ ಸಂಸಾರ ಪೋಷಿಸುವ ವ್ಯಕ್ತಿ ತನ್ನ ತಾಯಿ ಪೋಷಣೆ ನಿರಾಕರಿಸುವಂತಿಲ್ಲ

ಮೊದಲ ಪತ್ನಿ, ತಾಯಿಗೆ ಜೀವನಾಂಶ ಕಡ್ಡಾಯ: ಕೋರ್ಟ್

ಬೆಂಗಳೂರು: ಎರಡನೇ ಪತ್ನಿ ಹಾಗೂ ಆಕೆಗೆ ಜನಿಸಿದ ಮಕ್ಕಳನ್ನು ಪೋಷಣೆ ಮಾಡುವ ಸಾಮರ್ಥ್ಯ ಹೊಂದಿರುವ ವ್ಯಕ್ತಿ, ತನ್ನ ಮೊದಲ ಪತ್ನಿ, ಮತ್ತವರ ಮಕ್ಕಳು ಹಾಗೂ ವೃದ್ಧ ತಾಯಿಗೆ ಜೀವನಾಂಶ ನೀಡಲು ಹಣವಿಲ್ಲ ಎಂಬುದಾಗಿ ಹೇಳಲು ಕಾನೂನಿನಲ್ಲಿ ಅವಕಾಶವಿಲ್ಲ ಎಂದು ಹೈಕೋರ್ಟ್ ಅಭಿಪ್ರಾಯ ವ್ಯಕ್ತಪಡಿಸಿದೆ.

ಮೊದಲ ಪತ್ನಿ ಮತ್ತವರ ಮಕ್ಕಳಿಗೆ ಮಾಸಿಕ 30 ಸಾವಿರ ರು. ಜೀವನಾಂಶವಾಗಿ ನೀಡಬೇಕು ಎಂದು ಕೌಟುಂಬಿಕ ನ್ಯಾಯಾಲಯ ನೀಡಿದ್ದ ಆದೇಶ ರದ್ದು ಕೋರಿ ವ್ಯಕ್ತಿಯೋರ್ವ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಕೆ.ಬಿ. ಗೀತಾ ಅವರಿದ್ದ ನ್ಯಾಯಪೀಠ ಈ ಆದೇಶ ನೀಡಿದೆ. ಪ್ರಕರಣದಲ್ಲಿ ಅರ್ಜಿದಾರ (ಪತಿ) ತನ್ನ ಆದಾಯ ತೋರಿಸಲು ಯಾವುದೇ ದಾಖಲೆ ಒದಗಿಸಿಲ್ಲ. ಆದರೆ, ಪತಿ ನಿಜವಾಗಿಯೂ ಯಾವುದೇ ಕೆಲಸ ಮಾಡುತ್ತಿಲ್ಲ ಎಂದಾದರೆ ತನ್ನ ಎರಡನೇ ಪತ್ನಿ ಮತ್ತು ಆಕೆಯ ಇಬ್ಬರು ಮಕ್ಕಳನ್ನು ಪೋಷಣೆ ಮಾಡುತ್ತಿರಲಿಲ್ಲ. ಎರಡನೇ ಹೆಂಡತಿ, ಮಕ್ಕಳನ್ನು ಪೋಷಿಸುತ್ತಿರುವುದಾಗಿ ಒಪ್ಪಿಕೊಂಡಿದ್ದಾನೆ ಎಂದು ಪೀಠ ಆದೇಶದಲ್ಲಿ ಹೇಳಿದೆ. ಈ ಮಧ್ಯೆ ಅರ್ಜಿದಾರ ಫೋಟೋ ಸ್ಟುಡಿಯೋ ನಡೆಸುತ್ತಿದ್ದು, ದೇವಾಲಯವೊಂದರಲ್ಲಿ ಅರ್ಚಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ ಎಂಬುದು ದಾಖಲೆಗಳಿಂದ ಗೊತ್ತಾಗಿದೆ. ಆದರೆ, ಬರುತ್ತಿರುವ ಆದಾಯವೆಷ್ಟು ಎಂಬುದು ನಿಖರವಾಗಿ ತಿಳಿಸಿಲ್ಲ. ಮಾಸಿಕ 5 ರಿಂದ ಆರು ಸಾವಿರ ಮಾತ್ರ ದುಡಿಮೆ ಇದೆ ಎಂದಾದರೂ, 2ನೇ ಹೆಂಡತಿ, ಮಕ್ಕಳನ್ನು ಪೋಷಣೆ ಮಾಡುತ್ತಿದ್ದಾನೆ. ಇಂಥ ಸ್ಥಿತಿಯಲ್ಲಿ ತನ್ನ ಮೊದಲ ಪತ್ನಿ,ಮಕ್ಕಳು, ವೃದ್ಧ ತಾಯಿಗೆ ಜೀವನಾಂಶ ನೀಡಲು ಹಣವಿಲ್ಲ ಎಂಬುದಾಗಿ ಹೇಳಲು ಅವಕಾಶವಿಲ್ಲ ಎಂದು ಪೀಠ ಹೇಳಿದೆ.

ಸುದ್ದಿ ಸಿಂಚನ

ಶಾಸಕ ಬಿ.ಪಿ.ಹರೀಶ್ ಬಂಧನಕ್ಕೆ ವಾರೆಂಟ್



ಬೆಂಗಳೂರು: ಜಾತಿನಿಂದನೆ ಪ್ರಕರಣದಲ್ಲಿ ನ್ಯಾಯಾಲಯಕ್ಕೆ ವಿಚಾರಣೆಗೆ ಹಾಜರಾಗದ ಹರಿಹರ ಬಿಜೆಪಿ ಶಾಸಕ ಬಿ.ಪಿ.ಹರೀಶ್ ವಿರುದ್ಧ ನಗರದ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯವು ಬಂಧನ ವಾರಂಟ್ ಜಾರಿಗೊಳಿಸಿದೆ. 2023ರ ವಿಧಾನಸಭಾ ಚುನಾವಣಾ ಫಲಿತಾಂಶ ಪ್ರಕಟವಾದ ಮರುದಿನ ದಲಿತ ಸಮುದಾಯದ ವಿರುದ್ಧ ಅವಹೇಳನಕಾರಿ ಹೇಳಿಕೆ ನೀಡಿದ ಆರೋಪದ ಮೇಲೆ ಬಿಎಸ್‌ಪಿ ಮುಖಂಡರೊಬ್ಬರು ನೀಡಿದ ದೂರಿನ ಮೇರೆಗೆ ಹರೀಶ್ ವಿರುದ್ಧ ಹರಿಹರ ಟೌನ್ ಪೊಲೀಸ್ ಠಾಣೆಯಲ್ಲಿ ಜಾತಿ ನಿಂದನೆ ಪ್ರಕರಣ ದಾಖಲಾಗಿತ್ತು. ಈ ಪ್ರಕರಣದ ವಿಚಾರಣೆಗೆ ನ್ಯಾಯಾಲಯಕ್ಕೆ ಪದೇ ಪದೇ ಗೈರುಹಾಜರಾದ ಹಿನ್ನೆಲೆಯಲ್ಲಿ ವಿಶೇಷ ನ್ಯಾಯಾಲಯದ ನ್ಯಾಯಾಧೀಶರಾದ ಸಂತೋಷ್ ಗಜಾನನ ಭಟ್ ಅವರು ಬಂಧನ ವಾರಂಟ್ ಹೊರಡಿಸಿದ್ದಾರೆ. ಆರೋಪಿಯನ್ನು ಬಂಧಿಸಿ ಮೇ 7ರಂದು ಹಾಜರುಪಡಿಸುವಂತೆ ಹರಿಹರ ಟೌನ್ ಪೊಲೀಸ್ ಠಾಣಾಧಿಕಾರಿಗೆ ನ್ಯಾಯಾಲಯ ಸೂಚನೆ ನೀಡಿದೆ.

ಕೈಗಾರಿಕೆಗಳ ಅಭಿವೃದ್ಧಿ ನಿಗಮದ ನೇಮಕಾತಿಯ ಮೇ 9,10ರ ಪರೀಕ್ಷೆ ರದ್ದು

ಬೆಂಗಳೂರು: ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಬೆಂಗಳೂರು ಜಲಮಂಡಳಿ, ಕೃಷಿ ಮಾರಾಟ ಇಲಾಖೆ ಹಾಗೂ ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮದ (ಕೆಎಸ್‌ಎಸ್‌ಐಡಿಸಿ) ವಿವಿಧ ಹುದ್ದೆಗಳ ನೇಮಕಾತಿಗೆ ಇದೇ 9 ಮತ್ತು 10ರಂದು ನಡೆಸಬೇಕಿದ್ದ ಲಿಖಿತ ಪರೀಕ್ಷೆಯನ್ನು ರದ್ದುಪಡಿಸಲಾಗಿದೆ ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ತಿಳಿಸಿದೆ. ಪರೀಕ್ಷೆ ನಡೆಸದ ಹುದ್ದೆಗಳ ನೇಮಕಾತಿಗೆ ಪರಿಶಿಷ್ಟ ಜಾತಿಯ ಒಳ ಮೀಸಲಾತಿ ಅಳವಡಿಸಿಕೊಂಡು ಹೊಸದಾಗಿ ಅಧಿಸೂಚನೆ ಹೊರಡಿಸಲು ಏ.4ರಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನಿಸಿರುವ ಕಾರಣ ಈ ಪರೀಕ್ಷೆಯನ್ನು ರದ್ದುಪಡಿಸಲಾಗಿದೆ ಎಂದು ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಹೆಚ್.ಪ್ರಸನ್ನ ತಿಳಿಸಿದ್ದಾರೆ.

ಪರೀಕ್ಷೆ ಯಾವ ಹುದ್ದೆಗೆ: ಉಳಿದಂತೆ ವ್ಯವಸ್ಥಾಪಕರು, ಸಹಾಯಕ ವ್ಯವಸ್ಥಾಪಕರು ಮತ್ತು ಸಹಾಯಕ ಎಂಜಿನಿಯರ್ (ವಿದ್ಯುತ್) ಹುದ್ದೆಗಳಿಗೆ ಏ.26 ಮತ್ತು 27ರಂದು ಪತ್ರಿಕೆ-2 (ನಿರ್ದಿಷ್ಟ ಪತ್ರಿಕೆ) ರ ಪರೀಕ್ಷೆ ನಡೆಸಿದ್ದು ಅಂತಹವರಿಗೆ ಮೇ 9 ಮತ್ತು 10 ರಂದು ಸಾಮಾನ್ಯ ಜ್ಞಾನ ಪತ್ರಿಕೆಯ (ಪತ್ರಿಕೆ-1) ಪರೀಕ್ಷೆ ನಡೆಸಲಾಗುವುದು. ಇದಕ್ಕೆ ಪ್ರವೇಶ ಪತ್ರವನ್ನು ಕೆಇಎ ವೆಬ್‌ಸೈಟ್‌ನಿಂದ ಡೌನ್ ಲೋಡ್ ಮಾಡಿಕೊಳ್ಳಬೇಕು ಎಂದು ಅವರು ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಕೆಳಸೇತುವೆ ಜಲಾವೃತ ಕೇಸ್‌ನಲ್ಲಿ ಸಿಎಸ್, ಜಿಬಿಎ ಅಧಿಕಾರಿ ಸೇರಿಸಿ: ಲೋಕಾ

ಬೆಂಗಳೂರು: ಮಳೆ ಸುರಿದಾಗ ನಗರದ ಕೆ.ಆರ್.ವೃತ್ತದ ಕೆಳಸೇತುವೆ ಜಲಾವೃತವಾಗಿ ಸಮಸ್ಯೆಯಾಗುತ್ತಿರುವ ಸಂಬಂಧ ಲೋಕಾಯುಕ್ತ ಸಂಸ್ಥೆಯಲ್ಲಿ ಈ ಹಿಂದೆ ದಾಖಲಾಗಿದ್ದ ಸ್ವಯಂ ಪ್ರೇರಿತ ಪ್ರಕರಣದಲ್ಲಿ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ ಅಪರ ಮುಖ್ಯ ಕಾರ್ಯದರ್ಶಿ, ಗ್ರೇಟರ್ ಬೆಂಗಳೂರು ಪ್ರಾಧಿಕಾರ(ಜಿಬಿಎ) ಮುಖ್ಯ ಆಯುಕ್ತರು, ಕೇಂದ್ರ ನಗರ ಪಾಲಿಕೆಯ ಆಯುಕ್ತ ಸೇರಿದಂತೆ ಸಂಬಂಧಿತ ಜಿಬಿಎ ಅಧಿಕಾರಿಗಳನ್ನು ಆರೋಪಿಗಳನ್ನಾಗಿ ಸೇರ್ಪಡೆಗೊಳಿಸುವಂತೆ ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್.ಪಾಟೀಲ್ ಆದೇಶಿಸಿದ್ದಾರೆ. ಏ.29ರಂದು ಸಂಜೆ ಸುರಿದ ಮಳೆಯಿಂದ ಕೆ.ಆರ್.ವೃತ್ತದ ಕೆಳಸೇತುವೆ ಜಲಾವೃತವಾಗಿದ್ದ ಹಿನ್ನೆಲೆ ಏ.30ರಂದು ಪಾಟೀಲ್ ಅವರು ಸ್ಥಳಕ್ಕೆ ಭೇಟಿ ನೀಡಿ ವಾಸ್ತವ ಸ್ಥಿತಿ ಪರಿಶೀಲಿಸಿದ್ದರು.

ವಿಶ್ವದರ್ಜೆಯಲ್ಲಿ ನಗರ ಅಭಿವೃದ್ಧಿಗೆ ಒಪ್ಪಂದ

ಆರ್ಥಿಕ ಮಾಸ್ಟರ್‌ಪ್ಲಾನ್‌ಗೆ ಐಎಸ್‌ಇಜಿ ಜತೆ ಒಡಂಬಡಿಕೆ | ಸಮಗ್ರ ಅಭಿವೃದ್ಧಿಗೆ 2 ಲಕ್ಷ ಕೋಟಿಯ ಯೋಜನೆ ಸಿದ್ಧ: ಡಿಸಿಎಂ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಬೆಂಗಳೂರನ್ನು ವಿಶ್ವದರ್ಜೆಯ ಪ್ರಗತಿಯ ಹಬ್ ಆಗಿ ಪರಿವರ್ತಿಸಲು ರಾಜ್ಯ ಸರ್ಕಾರ ಮುಂದಾಗಿದ್ದು, ಇದಕ್ಕೆ ಅಗತ್ಯವಿರುವ 'ಆರ್ಥಿಕ ಮಾಸ್ಟರ್‌ಪ್ಲಾನ್' ರೂಪಿಸಲು ಸುಸ್ಥಿರ ಉದ್ಯೋಗ ಮತ್ತು ಅಭಿವೃದ್ಧಿ ದತ್ತಿ (ಐಎಸ್‌ಇಜಿ) ಸಂಸ್ಥೆಯೊಂದಿಗೆ ಉದ್ದೇಶ ಪತ್ರಕ್ಕೆ ಸಹಿ ಹಾಕಲಾಗಿದೆ.

ವಿಧಾನಸೌಧದಲ್ಲಿ ನಗರಾಭಿವೃದ್ಧಿ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ ತುಷಾರ್‌ಗಿರಿ ನಾಥ್ ಹಾಗೂ ಐಎಸ್‌ಇಜಿ ನಿರ್ದೇಶಕ ಡಾ.ಶಿರೀಶ್ ಸಂಖೆರವರು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್‌ಅವರ ಸಮ್ಮುಖದಲ್ಲಿ ಪರಸ್ಪರ ಸಹಿ ಹಾಕಿ ಪತ್ರ ವಿನಿಮಯ ಮಾಡಿಕೊಂಡರು.

ಈ ಸಂದರ್ಭದಲ್ಲಿ ಮಾತನಾಡಿದ ಡಿ.ಕೆ. ಶಿವಕುಮಾರ್, ಬೆಂಗಳೂರು ನಗರಕ್ಕೆ 500 ವರ್ಷಗಳು ಪೂರ್ಣಗೊಳ್ಳುತ್ತಿದ್ದು, ಈ ಸಂದರ್ಭದಲ್ಲಿ 2032ರಿಂದ 2037ರ ಅವಧಿಯಲ್ಲಿ ಕೈಗೊಳ್ಳಬೇಕಾದ ಆರ್ಥಿಕ ಮಾಸ್ಟರ್‌ಪ್ಲಾನ್ ಅನ್ನು ರೂಪಿಸಲು ಚಿಂತನೆ ನಡೆಸಿದ್ದೇವೆ. ಬೆಂಗಳೂರನ್ನು ವಿಶ್ವದರ್ಜೆ ಪ್ರಗತಿ ಹಬ್ ಮಾಡಲು ಕೈಗೊಳ್ಳಲಾಗಿರುವ ತೀರ್ಮಾನಕ್ಕೆ ಹೊಸ ರೂಪ ನೀಡುತ್ತಿದ್ದೇವೆ. ಹೀಗಾಗಿ ಬೆಂಗಳೂರಿಗೆ ಹೊಸ ರೂಪ, ಶಕ್ತಿ ನೀಡಬೇಕು ಎಂದು ತೀರ್ಮಾನಿಸಿದ್ದೇವೆ. ಈ ನಿಟ್ಟಿನಲ್ಲಿ ಎಲ್ಲಿ ಉದ್ಯೋಗ ಸೃಷ್ಟಿಸಬೇಕು, ಎಲ್ಲಿ ಪ್ರವಾಸೋದ್ಯಮಕ್ಕೆ ಆದ್ಯತೆ ನೀಡಬೇಕು, ಎಲ್ಲಿ ವಸತಿ ಯೋಜನೆಗಳನ್ನು ತರಬೇಕು, ಸಂಚಾರ ದಟ್ಟಣೆ ನಿವಾರಣೆಗೆ ಸಂಬಂಧಿಸಿದಂತೆ ನಕ್ಷೆ ರೂಪಿಸಲಾಗುವುದು. ಈ ಸಮಸ್ಯೆಗೆ ಪರಿಹಾರ ಯಾವ ರೀತಿ ನೀಡಬೇಕು ಯೋಜನೆ ರೂಪಿಸಿದ್ದೇವೆ. ಸುಮಾರು 2 ಲಕ್ಷ ಕೋಟಿ ರು. ಮೌಲ್ಯದ ಯೋಜನೆ ರೂಪಿಸಿದ್ದು, ಹಂತ ಹಂತವಾಗಿ ಇದನ್ನು ಕಾರ್ಯಗತಗೊಳಿಸಲಾಗುತ್ತಿದೆ. ಇದೆಲ್ಲವನ್ನೂ ವ್ಯವಸ್ಥಿತವಾಗಿ ಜಾರಿಗೊಳಿಸಲು ಉದ್ದೇಶಿತ ದತ್ತಾಂಶ ಆಧಾರಿತ ಆರ್ಥಿಕ ಮಾಸ್ಟರ್ ಪ್ಲಾನ್ ಸಹಕಾರಿಯಾಗಲಿದೆ ಎಂದರು.

ಮಾಸ್ಟರ್ ಪ್ಲಾನ್ ತಯಾರಿಸಲು ಸರ್ಕಾರಕ್ಕೆ ಯಾವುದೇ ಆರ್ಥಿಕ ಹೊರೆ ಆಗುವುದಿಲ್ಲ. ಈಗಾಗಲೇ ದೇಶದ ಮುಂಬೈ, ವಿಶಾಖಪಟ್ಟಣ, ಪುಣೆ, ವಾರಣಾಸಿ ನಗರಗಳಿಗೆ ಇಂತಹ ಮಾಸ್ಟರ್ ಪ್ಲಾನ್ ಸಿದ್ಧಪಡಿಸಿಕೊಟ್ಟಿರುವ ಸುಸ್ಥಿರ ಉದ್ಯೋಗ ಮತ್ತು ಅಭಿವೃದ್ಧಿ ದತ್ತಿ (ಐಎಸ್‌ಇಜಿ) ಸಂಸ್ಥೆ ಮುಂದೆ ಬಂದಿದ್ದು ಒಪ್ಪಂದ ಮಾಡಿಕೊಳ್ಳಲಾಗಿದೆ. ಇವರಿಗೆ 4 ತಿಂಗಳ ಕಾಲಾವಕಾಶ ನೀಡಿದ್ದು, ಈ ಅವಧಿಯಲ್ಲಿ ಅವರು ನಕ್ಷೆ ರೂಪಿಸಲಿದ್ದಾರೆ. ಇವರಿಗೆ ಅಗತ್ಯವಿರುವ ಸಹಕಾರವನ್ನು ನೀಡಬೇಕು ಎಂದು ನಮ್ಮ ಅಧಿಕಾರಿಗಳಿಗೆ ಸೂಚಿಸಿದ್ದೇನೆ. ಇಂಧನ, ಪಾಲಿಕೆ, ಜಲ, ನಗರಾಭಿವೃದ್ಧಿ, ಮಾಹಿತಿ ತಂತ್ರಜ್ಞಾನ, ಕೈಗಾರಿಕೆ ಕ್ಷೇತ್ರಗಳು ಸೇರಿದಂತೆ ಪ್ರಮುಖ ನಾಗರೀಕರ ಅಭಿಪ್ರಾಯ, ಸಲಹೆ ಪಡೆಯಲಾಗುವುದು. ಬೆಂಗಳೂರಿನ ನಾಗರೀಕರು, ಡೆವಲಪರ್‌ಗಳು, ಉದ್ದಿಮೆದಾರರು, ಶೈಕ್ಷಣಿಕ ಸಂಸ್ಥೆಗಳನ್ನು ವಿಶ್ವಾಸಕ್ಕೆ ಪಡೆದು ದೊಡ್ಡ ಮಾಸ್ಟರ್‌ಪ್ಲಾನ್ ಸೃಷ್ಟಿಸಬೇಕು ಎಂದು ಸೂಚಿಸಿದರು.

ಈ ವೇಳೆ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ಅಪರ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತಾ, ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಇದ್ದರು.



ಆರ್ಥಿಕ ಮಾಸ್ಟರ್‌ಪ್ಲಾನ್ ರೂಪಿಸಲು ಐಎಸ್‌ಇಜಿ ಜತೆ ನಗರಾಭಿವೃದ್ಧಿ ಇಲಾಖೆ ಒಪ್ಪಂದ. ಡಿಕೆಶಿ ಇದ್ದರು.

ಸಾಫ್ಟ್‌ವೇರ್‌ರಫ್ತಿಗೆ ಶೇ.42 ಕೊಡುಗೆ

ಕಳೆದ 3 ವರ್ಷಗಳಲ್ಲಿ ಬೆಂಗಳೂರು ಹಾಗೂ ಸುತ್ತಮುತ್ತಲ ಪ್ರದೇಶದಲ್ಲಿ ದಾಖಲೆ ಪ್ರಮಾಣದಲ್ಲಿ ಆರ್ಥಿಕ ಶಕ್ತಿ ನೀಡಿದ್ದೇವೆ. ಬೆಂಗಳೂರು ಮೆಟ್ರೋಪಾಲಿಟನ್ ಪ್ರದೇಶದಲ್ಲಿ ತಲಾದಾಯ 8.850 ಡಾಲರ್‌ನಷ್ಟಿದೆ. ರಾಜ್ಯದ ಸರಾಸರಿಗಿಂತ ದುಪ್ಪಟ್ಟಿದೆ. 8 ಸಾವಿರ ಚದರ ಕಿ.ಮೀಗಿಂತ ಹೆಚ್ಚು ಪ್ರದೇಶದಲ್ಲಿ ಬೆಂಗಳೂರು ನಗರ, ಗ್ರಾಮಾಂತರ ಹಾಗೂ ದಕ್ಷಿಣ ಜಿಲ್ಲೆಗಳು ಹರಡಿದ್ದು, 1.6 ಬಿಲಿಯನ್ ಜನ ಇಲ್ಲಿದ್ದಾರೆ. ಭಾರತದ ಸಾಫ್ಟ್‌ವೇರ್ ರಫ್ತಿನಲ್ಲಿ ಶೇ.42 ಕೊಡುಗೆ ಬೆಂಗಳೂರು ನೀಡುತ್ತಿದೆ. ಇಂತಹ ನಗರಕ್ಕೆ ಹೊಸ ರೂಪ, ಶಕ್ತಿ ನೀಡಿ ವಿಶ್ವದರ್ಜೆಗೆ ಅಭಿವೃದ್ಧಿಪಡಿಸಲು ಆರ್ಥಿಕ ಮಾಸ್ಟರ್ ಪ್ಲಾನ್ ಅವಶ್ಯಕ ಎಂದು ಡಿಸಿಎಂ ಪ್ರತಿಪಾದಿಸಿದರು.

5 ರಾಜ್ಯ ರಿಸಲ್ಟ್ ಹೊಸತನಕ್ಕೆ ನಾಂದಿ

ಪ್ರಧಾನಿ ಮೋದಿ ಮೇಲೆ ಜನರ ಅಚಲ ವಿಶ್ವಾಸ: ಎನ್.ರವಿಕುಮಾರ್

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಐದು ರಾಜ್ಯಗಳ ವಿಧಾನಸಭಾ ಚುನಾವಣಾ ಫಲಿತಾಂಶವು ಭಾರತದ ರಾಜಕೀಯ ಇತಿಹಾಸದಲ್ಲಿ ಒಂದು ಹೊಸ ಮನ್ವಂತರಕ್ಕೆ ನಾಂದಿ ಹಾಡಿದೆ ಎಂದು ವಿಧಾನ ಪರಿಷತ್ತಿನ ವಿರೋಧ ಪಕ್ಷದ ಮುಖ್ಯ ಸಚೇತಕ ಎನ್. ರವಿಕುಮಾರ್ ಹೇಳಿದ್ದಾರೆ.



ಇದು ಕೇವಲ ಒಂದು ಪಕ್ಷದ ಗೆಲುವಲ್ಲ. ಈ ದೇಶದ ಅಖಂಡತೆ, ಸನಾತನ ಸಂಸ್ಕೃತಿ ಮತ್ತು ವಿಕಸಿತ ಭಾರತದ ಸಂಕಲ್ಪಕ್ಕೆ ಭಾರತೀಯ ಮತದಾರರು ನೀಡಿದ ಸುಭದ್ರ ಮುದ್ರೆಯಾಗಿದೆ. ಪಶ್ಚಿಮ ಬಂಗಾಳದ ಫಲಿತಾಂಶವು ಭಾರತದ ಆಂತರಿಕ ಭದ್ರತೆಯ ದೃಷ್ಟಿಯಿಂದ ಅತ್ಯಂತ ನಿರ್ಣಾಯಕವಾಗಿದೆ. ಮಮತಾ ಬ್ಯಾನರ್ಜಿ ನೇತೃತ್ವದ ಟಿಎಂಸಿ ಸರ್ಕಾರದ ಭ್ರಷ್ಟಾಚಾರ, ದಬ್ಬಾಳಿಕೆ ಮತ್ತು ತುಷ್ಟೀಕರಣದ ರಾಜಕಾರಣಕ್ಕೆ ಬೆಂಗಾಲದ ಜನತೆ ಅಂತ್ಯ ಹಾಡಿದ್ದಾರೆ ಎಂದು ತಿಳಿಸಿದ್ದಾರೆ.

ಅಸ್ಸಾಂನಲ್ಲಿ ಬಿಜೆಪಿ ಸತತ 3ನೇ ಬಾರಿಗೆ ಅಧಿಕಾರ ಹಿಡಿಯುತ್ತಿರುವುದು ಪ್ರಧಾನಿ ಮೋದಿ ಅವರ ಮೇಲೆ ಜನರಿಟ್ಟಿರುವ ಅಚಲ ವಿಶ್ವಾಸಕ್ಕೆ ಸಾಕ್ಷಿಯಾಗಿದೆ. ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಅವರನೇತೃತ್ವದಲ್ಲಿಜಾರಿಯಾದ ಕಲ್ಯಾಣ ಯೋಜನೆಗಳು ಮತ್ತು ಮೂಲ ಸೌಕರ್ಯ ಅಭಿವೃದ್ಧಿಯು ಅಸ್ಸಾಂನ ಚಿತ್ರಣವನ್ನೇ ಬದಲಿಸಿದೆ ಎಂದು ಹೇಳಿದ್ದಾರೆ.

ಪಾಂಡಿಚೇರಿಯಲ್ಲಿ ಬಿಜೆಪಿಯ ಜಯಭೇರಿಯು ದಕ್ಷಿಣ ಭಾರತದಲ್ಲಿ ಸನಾತನ ಧರ್ಮದ ಅಲೆ ಹೆಚ್ಚುತ್ತಿರುವುದನ್ನು ತೋರಿಸುತ್ತದೆ. ಜಾತಿ-ಮತಗಳ ಆಧಾರದಲ್ಲಿ ಜನರನ್ನು ವಿಭಜಿಸುವ ಶಕ್ತಿಗಳಿಗೆ ಈ ಜಯ ದೊಡ್ಡ ಉತ್ತರ. ಸನಾತನ ಧರ್ಮವನ್ನು ಅವಹೇಳನ ಮಾಡಿದವರಿಗೆ ಪಾಂಡಿಚೇರಿ ಜನತೆ ತಕ್ಕ ಪಾಠ ಕಲಿಸಿದ್ದಾರೆ. ತಮಿಳುನಾಡಿನಲ್ಲಿ ಬಿಜೆಪಿಯ ಮತಗಳ ಪ್ರಮಾಣ ಮತ್ತು ಸ್ಥಾನಗಳ ಏರಿಕೆ ರಾಜ್ಯದ ರಾಜಕೀಯ ದಿಕ್ಸೂಚಿಯನ್ನು ಬದಲಿಸಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ಕೇರಳದ ಫಲಿತಾಂಶವು ದೇಶವು ಎಡಪಕ್ಷಗಳ ಹಿಡಿತದಿಂದ ವ್ಯಂಕ್ತ ವಾಗುತ್ತಿರುವುದರ ಸಂಕೇತವಾಗಿದೆ. ಈ ಹಿಂದೆ ಶೂನ್ಯವಿದ್ದ ಬಿಜೆಪಿ ಇಂದು ಕೇರಳದ ಎರಡು ಕ್ಷೇತ್ರಗಳಲ್ಲಿ ಗೆಲುವು ಸಾಧಿಸುವ ಮೂಲಕ ಕೇರಳದ ರಾಜಕೀಯ ಇತಿಹಾಸದಲ್ಲೇ ಹೊಸ ದಾಖಲೆ ಬರೆದಿದೆ ಎಂದು ರವಿಕುಮಾರ್ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಏರ್‌ಪೋರ್ಟ್‌ಗೆ ಎಐ ಭದ್ರತಾ ವ್ಯವಸ್ಥೆ

ಕೆಂಪೇಗೌಡ ವಿಮಾನನಿಲ್ದಾಣದಲ್ಲಿ ಸ್ಮಾರ್ಟ್ ಏರ್‌ಸೈಡ್ ಸುರಕ್ಷತಾ ಸಿಸ್ಟಂ ಜಾರಿ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ (ಕೆಐಎ) ವಾಯುಯಾನ ಕಾರ್ಯಾಚರಣೆ ಸುರಕ್ಷತೆಯನ್ನು ಬಲಗೊಳಿಸುವ ಸಲುವಾಗಿ ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ನಿಯಮಿತವು (ಬಿಐಎಎಲ್) ಸ್ಮಾರ್ಟ್ ಏರ್‌ಸೈಡ್ ಸುರಕ್ಷತಾ ವ್ಯವಸ್ಥೆ ಅನುಷ್ಠಾನಗೊಳಿಸಿದೆ.



ಕೆಐಎನಲ್ಲಿನ ಅತ್ಯಂತ ಸೂಕ್ಷ್ಮ ವಲಯವಾದ ಏರ್‌ಸೈಡ್‌ನಲ್ಲಿ ವಿಮಾನಗಳು ಮತ್ತು ನೆಲದ ಮೇಲಿನ ವಾಹನಗಳ ಸಂಚಾರವನ್ನು ನಿಯಂತ್ರಿಸಲು ನೂತನ ವ್ಯವಸ್ಥೆ ಸಹಕಾರಿಯಾಗಲಿದೆ. ಕೃತಕ ಬುದ್ಧಿಮತ್ತೆ ಆಧಾರಿತ ಕಂಪ್ಯೂಟರ್ ವಿಷನ್ ಮೂಲಕ ಸ್ಮಾರ್ಟ್ ಏರ್‌ಸೈಡ್ ಸುರಕ್ಷತಾ ವ್ಯವಸ್ಥೆ ಕಾರ್ಯನಿರ್ವಹಿಸಲಿದ್ದು, ಇದರ ಮೂಲಕ ವಾಹನಗಳ ಚಲನವಲನವನ್ನು ನಿಖರವಾಗಿ ಪತ್ತೆ ಹಚ್ಚಬಹುದಾಗಿದೆ. ಅದರೊಂದಿಗೆ ಇಂಟೆಲಿಜೆಂಟ್ ಆಟೋಮೇಷನ್ ಮೂಲಕ ಸಂಚಾರ ಸೂಚನೆಗಳನ್ನು ಸ್ವಯಂ ಚಾಲಿತವಾಗಿ ನೀಡಿ ಮಾನವ ಸಹಜ ತಪ್ಪುಗಳನ್ನು ತಪ್ಪಿಸಲು ಸಹಕಾರಿಯಾಗಲಿದೆ. ಪ್ರತಿ ಚಟುವಟಿಕೆಯನ್ನು ಕೇಂದ್ರೀಕೃತ ನಿಯಂತ್ರಣದ ಮೂಲಕ ನೈಜ ಸಮಯದಲ್ಲಿ ಮೇಲ್ವಿಚಾರಣೆ ಮಾಡಲಾಗುತ್ತದೆ. ಈವರೆಗೆ ವಿಮಾನನಿಲ್ದಾಣ ಕ್ರಾಸ್ ಸರ್ವೀಸ್ ರಸ್ತೆಗಳಲ್ಲಿನ ಸಿಗ್ನಲ್ ವ್ಯವಸ್ಥೆಯನ್ನು ನಿರ್ವಹಿಸಲು ಮಾನವ ಹಸ್ತಕ್ಷೇಪದ ಅಗತ್ಯವಿತ್ತು. ಇದೀಗ ಸ್ಮಾರ್ಟ್ ಏರ್‌ಸೈಡ್ ಸುರಕ್ಷತಾ ವ್ಯವಸ್ಥೆ ಮೂಲಕ ಕೃತಕ ಬುದ್ಧಿಮತ್ತೆ ಮೂಲಕ ಸ್ವಯಂಚಾಲಿತವಾಗಿ ಅಪಾಯವನ್ನು ಮೌಲ್ಯಮಾಪನ ಮಾಡಬಹುದಾಗಿದೆ.

ಅಲ್ಲದೆ, ಮಂಜು, ಕಡಿಮೆ ಗೋಚರತೆ ಹಾಗೂ ರಾತ್ರಿ ವೇಳೆಯಲ್ಲೂ ಸ್ಮಾರ್ಟ್ ಏರ್‌ಸೈಡ್ ಸುರಕ್ಷತಾ ವ್ಯವಸ್ಥೆ ನಿಖರವಾದ ಮಾಹಿತಿ ನೀಡುತ್ತದೆ ಎಂದು ಬಿಐಎಎಲ್ ತಿಳಿಸಿದೆ.

ರಾಜ್ಯಾದ್ಯಂತ ಪ್ಯಾಲಿಯೇಟಿವ್ ಕೇರ್: ದಿನೇಶ್

ಕೆ.ಸಿ.ಜನರಲ್ ಆಸ್ಪತ್ರೆಯಲ್ಲಿ ಕ್ಯಾನ್ಸರ್, ಕಿಡ್ನಿ ವೈಫಲ್ಯದಂಥ ಗಂಭೀರ ಸಮಸ್ಯೆಗೆ ಚಿಕಿತ್ಸೆ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ರಾಜ್ಯ ಸರ್ಕಾರವು ಕ್ಯಾನ್ಸರ್, ಕಿಡ್ನಿ ವೈಫಲ್ಯದಂತಹ ಗಂಭೀರ ಅನಾರೋಗ್ಯದಿಂದ ಬಳಲುತ್ತಿರುವ ರೋಗಿಗಳಿಗೆ ಉಪಶಮನ ಆರೈಕೆ ಸೇವೆಯನ್ನು (ಪ್ಯಾಲಿಯೇಟಿವ್ ಕೇರ್) ರಾಜ್ಯಾದ್ಯಂತ ವಿಸ್ತರಿಸುವ ಗುರಿ ಹೊಂದಿದೆ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂ ರಾವ್ ಹೇಳಿದ್ದಾರೆ.

ಸರನಂ ಇಂಡಿಯಾ ಸಂಸ್ಥೆಯ ಸಹಯೋಗದಲ್ಲಿ ಮಲ್ಲೇಶ್ವರದ ಕೆ.ಸಿ. ಜನರಲ್ ಆಸ್ಪತ್ರೆಯ ಆವರಣದಲ್ಲಿ ಸ್ಥಾಪಿಸಲಾಗಿರುವ ನೂತನ ಉಪಶಮನ ಆರೈಕೆ ಕೇಂದ್ರವನ್ನು ಮಂಗಳವಾರ ಉದ್ಘಾಟಿಸಿ ಮಾತನಾಡಿದರು.



ಕೆ.ಸಿ.ಜನರಲ್‌ನಲ್ಲಿ ಉಪಶಮನ ಆರೈಕೆ ಕೇಂದ್ರಕ್ಕೆ ದಿನೇಶ್ ಚಾಲನೆ ನೀಡಿದರು.

ಕೆ.ಸಿ. ಜನರಲ್ ಆಸ್ಪತ್ರೆಯಲ್ಲಿ ಮೊದಲ ಹಂತದಲ್ಲಿ ಐದು ಹಾಸಿಗೆಗಳ ಒಂದು ವಾರ್ಡ್ ನಿರ್ಮಾಣ ಮಾಡಲಾಗಿದೆ. ಮಾರಣಾಂತಿಕ ಅಥವಾ ಗಂಭೀರ ಕಾಯಿಲೆ ಎದುರಿಸುತ್ತಿರುವ ರೋಗಿಗಳಿಗೆ ಈ ಕೇಂದ್ರದಲ್ಲಿ ಆರೈಕೆ ಮಾಡಲಾಗುತ್ತದೆ.

ಕ್ಯಾನ್ಸರ್, ಮೂತ್ರ ಪಿಂಡ ವೈಫಲ್ಯದಂತಹ ಅನಾರೋಗ್ಯ ಸಮಸ್ಯೆಗಳಿಗೆ ಒಳಗಾದವರು ರೋಗವನ್ನು ಗುಣಪಡಿಸಲು ಸಾಧ್ಯವಿಲ್ಲದ ಹಂತದಲ್ಲಿ, ಈ ಕೇಂದ್ರಕ್ಕೆ ಭೇಟಿ ನೀಡಬಹುದು. ಇಲ್ಲಿ ರೋಗಿಗಳ ಕುಟುಂಬದವರಿಗೂ ಆರೈಕೆ ಬಗ್ಗೆ ಸೂಕ್ತ ತರಬೇತಿ ನೀಡಲಾಗುತ್ತದೆ ಎಂದರು.

ಕೇಂದ್ರದಲ್ಲಿ ಹೊರರೋಗಿ ವಿಭಾಗ, ಡೇ ಕೇರ್ ವಿಭಾಗ (ಅತಿಯಾದ ನೋವು ನಿರ್ವಹಣೆ ಮತ್ತು ವೈಯಕ್ತಿಕ ಸಮಾಲೋಚನೆ) ಹಾಗೂ ಒಳರೋಗಿ ವಿಭಾಗ ಇರಲಿದೆ. ಕೆ.ಸಿ. ಜನರಲ್ ಆಸ್ಪತ್ರೆಯ ಸುತ್ತಮುತ್ತ 5ರಿಂದ 8 ಕಿ.ಮೀ. ವ್ಯಾಪ್ತಿಯಲ್ಲಿ ಮನೆಗೆ ತೆರಳಿ ಆರೈಕೆ ಮತ್ತು ತರಬೇತಿ ನೀಡಲು ಸಂಚಾರಿ ಘಟಕವೂ ಸಹ ಇದೆ. ಮಾನವೀಯತೆ ದೃಷ್ಟಿಯಿಂದ ಈ ಸೇವೆ ನೀಡಲಾಗುತ್ತಿದೆ ಎಂದು ಸಚಿವರು ಹೇಳಿದರು. ಕೆ.ಸಿ. ಜನರಲ್ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ. ಲಕ್ಷ್ಮೀಪತಿ, ಸರನಂ ಇಂಡಿಯಾ ಸಂಸ್ಥೆಯ ಪದಾಧಿಕಾರಿಗಳು, ಆಸ್ಪತ್ರೆ ಸಿಬ್ಬಂದಿ ಹಾಜರಿದ್ದರು.

ಇಂಗ್ಲಿಷ್ ಮಾಧ್ಯಮ ಹೇರಿಕೆ ಬೇಡ



• **ಕನ್ನಡಪ್ರಭ ವಾರ್ತೆ** ಮಂಗಳೂರು

ರಾಜ್ಯ ಸರ್ಕಾರವು ಸರ್ಕಾರಿ ಶಾಲೆಗಳಲ್ಲಿ ದ್ವಿಭಾಷಾ ಮಾಧ್ಯಮ ಹೆಸರಿನಲ್ಲಿ ಕಡ್ಡಾಯ ಇಂಗ್ಲಿಷ್ ಮಾಧ್ಯಮ ಹೇರುತ್ತಿದೆ ಎಂದು ಆರೋಪಿಸಿ, ಕನ್ನಡ ಮಾಧ್ಯಮ ಆಯ್ಕೆ ಸ್ವಾತಂತ್ರ್ಯ ಉಳಿಸಲು ಆಗ್ರಹಿಸಿ ಎಐಡಿಎಸ್‌ಒ ವಿದ್ಯಾರ್ಥಿ ಸಂಘಟನೆ ನೇತೃತ್ವದಲ್ಲಿ ನಗರದ ಫ್ರೀಡಂ ಪಾರ್ಕ್‌ನಲ್ಲಿ ಮಂಗಳವಾರ ಪ್ರತಿಭಟನೆ ನಡೆಯಿತು. ಸಂಘಟನೆಯ ರಾಜ್ಯ ಸೆಕ್ರೆಟರಿಯೆಟ್ ಸದಸ್ಯ ತುಳಜಾರಾಮ್ ಎನ್.ಕೆ. ಮಾತನಾಡಿ, ಶಿಕ್ಷಣ ತಜ್ಞರು, ಭಾಷಾ ತಜ್ಞರ ಅಭಿಪ್ರಾಯಗಳನ್ನು ಗಾಳಿಗೆ ತೂರಿ ಕನ್ನಡ ಮಾಧ್ಯಮ ತೆಗೆದುಹಾಕುತ್ತಿರುವುದು ಖಂಡನೀಯ ಎಂದರು. ಸದಸ್ಯೆ ಶಿಲ್ಪಾ ಬಿ.ಕೆ., ಅಶ್ವಿನಿ ಕೆ.ಎಸ್., ಅಜಯ್ ಕಾಮತ್ ಇದ್ದರು.

ಸುದ್ದಿ ಸಿಂಚನ

ಎಸ್.ಎಂ.ಕೃಷ್ಣ ದತ್ತಿ ನಿಧಿಗೆ ರಘುವೀರ್ ಎಸ್.ಗೌಡ 3 ಲಕ್ಷ ರು. ದೇಣಿಗೆ

ಬೆಂಗಳೂರು: ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅವರ ಸ್ಮರಣಾರ್ಥ ಕರ್ನಾಟಕ ಸಂಘದಲ್ಲಿ ಸ್ಥಾಪಿಸಿರುವ



'ಎಸ್.ಎಂ.ಕೃಷ್ಣ ದತ್ತಿ ನಿಧಿ'ಗೆ ಕಾಂಗ್ರೆಸ್ ಯುವ ಮುಖಂಡ ರಘುವೀರ್ಎಸ್.ಗೌಡ ಅವರು 3 ಲಕ್ಷ ರು. ದೇಣಿಗೆ ನೀಡಿದ್ದಾರೆ. ಕೃಷ್ಣ ಅವರ ಅಭಿಮಾನಿಗಳು ಕರ್ನಾಟಕ ಸಂಘದಲ್ಲಿ ಕಳೆದ ವರ್ಷ 7 ಲಕ್ಷ ರು. ಮೊತ್ತದಲ್ಲಿ ದತ್ತಿ ನಿಧಿ ಸ್ಥಾಪಿಸಿದ್ದರು. ಕೃಷ್ಣ ಅವರ ಅಭಿಮಾನಿಯಾಗಿರುವ ರಾಜಾಜಿನಗರ ಕ್ಷೇತ್ರದ ರಘುವೀರ್ಅವರು ಕೆಪಿಸಿಸಿ ಬೆಂಗಳೂರು ಕೇಂದ್ರ ಪ್ರಚಾರ ಸಮಿತಿ ಅಧ್ಯಕ್ಷರಾಗಿಯೂ ಕಾರ್ಯ ನಿರ್ವಹಿಸುತ್ತಿದ್ದು ಈ ನಿಧಿಗೆ 3 ಲಕ್ಷ ರು. ದೇಣಿಗೆ ನೀಡಿದ್ದಾರೆ. ಇದರಿಂದಾಗಿ ನಿಧಿಯ ಮೊತ್ತ 10 ಲಕ್ಷ ರುಪಾಯಿಗೆ ಏರಿಕೆಯಾಗಿದೆ.

ಮೇ 12, 13ಕ್ಕೆ ಬಿಸಿಯು ಬೃಹತ್ ಉದ್ಯೋಗ ಮೇಳ

ಬೆಂಗಳೂರು: ನಗರದ ಡಾ.ಮನಮೋಹನಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯವು ತನ್ನ ವಿವಿಧ ವಿಭಾಗಗಳು, ಘಟಕ ಕಾಲೇಜುಗಳು ಹಾಗೂ ಸಂಯೋಜಿತ ಕಾಲೇಜುಗಳ ವಿದ್ಯಾರ್ಥಿಗಳಿಗಾಗಿ ಮೇ 12, 13ರಂದು ಸೆಂಟ್ರಲ್ ಕಾಲೇಜು ಕ್ಯಾಂಪಸ್‌ನಲ್ಲಿ ಬೃಹತ್ ಉದ್ಯೋಗ ಮೇಳ ಆಯೋಜಿಸಿದೆ. ಬೆಂಗಳೂರು ಸೇರಿದಂತೆ ರಾಜ್ಯ, ಹೊರ ರಾಜ್ಯದ ಸುಮಾರು 200ಕ್ಕೂ ಹೆಚ್ಚು ಕಂಪನಿಗಳು ಈ ಉದ್ಯೋಗ ಮೇಳದಲ್ಲಿ ಭಾಗವಹಿಸಿ ಖಾಲಿ ಇರುವ ಸ್ಥಾನಗಳಿಗೆ ಸಂದರ್ಶನ ನಡೆಸಲಿದ್ದಾರೆ. ವಿವಿಯ ಅಂತಿಮ ವರ್ಷದ ಪದವಿ ಹಾಗೂ ಸ್ನಾತಕೋತ್ತರ ಪದವಿಯ ವಿದ್ಯಾರ್ಥಿಗಳು, ಘಟಕ ಹಾಗೂ ಸಂಯೋಜಿತ ಕಾಲೇಜುಗಳು ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಉತ್ತಮ ಉದ್ಯೋಗಾವಕಾಶಗಳನ್ನು ತಮ್ಮದಾಗಿಸಿಕೊಳ್ಳುವಂತೆ ಕುಲಪತಿ ಪ್ರೊ.ರಮೇಶ್ ಬಿ. ಪ್ರಕಟಣೆಯಲ್ಲಿ ಮನವಿ ಮಾಡಿದ್ದಾರೆ.

ವಂಡರರ್ ಹೂ ಓನ್ಸ್‌ದ ವರ್ಲ್ಡ್ ಬಿಡುಗಡೆ ನಾಳೆ

ಬೆಂಗಳೂರು: ವೇಗ, ಆತಂಕದ ಇಂದಿನ ಬದುಕಿನಲ್ಲಿ ಯಶಸ್ಸು ಮತ್ತು ಆಸ್ಮಿತೆಯ ಬಗ್ಗೆ ಹೊಸ ದೃಷ್ಟಿಕೋನ ವನ್ನು ನೀಡುವ The WANDERER who owns the WORLD ಎಂಬ ಪುಸ್ತಕ ಬಿಡುಗಡೆ ಗುರುವಾರ ನಗರದ ಇಂದಿರಾನಗರದ ಅಟ್ಟಗಲಾಟ್ಟಾದಲ್ಲಿ ಬಿಡುಗಡೆ ಯಾಗಲಿದೆ. ಕಾರ್ಯಕ್ರಮದಲ್ಲಿ ಲೇಖಕ ಶ್ರೀ ಯೋಗೀಶ್ವರ ಸ್ವಾಮೀಜಿ, ಸಂಸದ ಡಾ.ಸಿ.ಎನ್.ಮಂಜುನಾಥ್, ಪೊಲೀಸ್ ಅಧಿಕಾರಿ ಸುಧೀರ್ಎಂ.ಹೆಗಡೆ, ವಿದ್ವಾಂಸ ಜಿ.ಅಶ್ವತ್ಥನಾರಾಯಣ, ಖ್ಯಾತನಟಿ ತಾರಾ ಅನುರಾಧ, ನಟ ರಾಣಾ, ಕವಿ, ಮಂಡಲಗಿರಿ ಪ್ರಸನ್ನ ಹಾಗೂ ಹಲವು ಗಣ್ಯರು ಭಾಗವಹಿಸುವರು ಎಂದು ಸಹಸ್ರಾರ ಯೋಗೀಶ್ವರ ಸ್ವಾಮಿ ಮಹಾಪೀಠದ ಮುಖ್ಯಸ್ಥ ಮೋಹನ್ ದತ್ತಾತ್ರೇಯ ರಾವ್ ಧಾರವಾಡಕರ್ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಆಟೋ ಚಾಲಕರಿಬ್ಬರ 'ಬೀದಿ ಜಗಳ' ವೈರಲ್

ಬೆಂಗಳೂರು: ಕ್ಷುಲ್ಲಕ ವಿಚಾರವಾಗಿ ಇಬ್ಬರು ಆಟೋ ಚಾಲಕರ 'ಬೀದಿ ಜಗಳ'ದ ವಿಡಿಯೋ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ. ರಸ್ತೆಯಲ್ಲಿ ಹೋಗುವಾಗ ಆಟೋ ಡಿಕ್ಕಿಯಾದ ವಿಚಾರವಾಗಿ ಚಾಲಕರು ಗಲಾಟೆ ಮಾಡಿಕೊಂಡಿದ್ದಾರೆ ಎನ್ನಲಾಗಿದ್ದು, ಮೂರು ದಿನಗಳ ಹಿಂದೆ ಈ ಘಟನೆ ನಡೆದಿದೆ. ಆದರೆ, ಈ ಬಗ್ಗೆ ಯಾವುದೇ ದೂರು ದಾಖಲಾಗಿಲ್ಲ. ಕೊನೆಗೆ ಸಂಚಾರ ಪೊಲೀಸರು ಮಧ್ಯಪ್ರವೇಶಿಸಿ ಆಟೋ ಚಾಲಕರ ಜಗಳ ಬಿಡಿಸಿದ್ದಾರೆ ಎನ್ನಲಾಗಿದೆ.

ಐಸಿಎಸ್‌ಇ 10ನೇ ತರಗತಿ: ಪ್ರಕುಲ್‌ಗೆ ಶೇ.97.6 ಅಂಕ

ಬೆಂಗಳೂರು: ಪ್ರಸಕ್ತ ಸಾಲಿನ ಐಸಿಎಸ್‌ಇ 10ನೇ ತರಗತಿ



ಪರೀಕ್ಷೆಯಲ್ಲಿ ನಂದಿನಿ ಲೇಔಟ್‌ನ ಪ್ರೆಸಿಡೆನ್ಸಿ ಶಾಲೆಯ ವಿದ್ಯಾರ್ಥಿ ಪ್ರಕುಲ್ ಎಸ್. ಶೇ.97.6 ರಷ್ಟು ಫಲಿತಾಂಶ ಪಡೆದು ಶಾಲೆಗೆ ಕೀರ್ತಿ ತಂದಿದ್ದಾರೆ. ವಿಜಯನಗರದ ಪತ್ರಿಕಾ ವಿತರಕನ ಪುತ್ರನಾದ ಪ್ರಕುಲ್ ಸಾಧನೆಗೆ ಶಾಲೆಯ ಆಡಳಿತ ಮಂಡಳಿ ಅಭಿನಂದಿಸಿದೆ.

ವಹ್ನಿಕುಲ ಪ್ರೀಮಿಯರ್ ಲೀಗ್ ಸಂಪನ್ನ



ದೊಮ್ಮಸಂದ್ರ ವ್ಯಾಪ್ತಿಯ ಆನೇಕಲ್ ತಾಲೂಕು ವಹ್ನಿಕುಲ ಕ್ಷತ್ರಿಯರ ಪ್ರೀಮಿಯರ್‌ಲೀಗ್ ಕ್ರಿಕೆಟ್ ಪಂದ್ಯಾವಳಿಯಲ್ಲಿ ಚಾಂಪಿಯನ್ ಆದ ವೀರ ಕ್ಷತ್ರಿಯಾಸ್ ಮಾಯಸಂದ್ರ ತಂಡಕ್ಕೆ ಬಹುಮಾನ ವಿತರಿಸಲಾಯಿತು. ಸಂಘದ ರಾಜ್ಯಾಧ್ಯಕ್ಷ ವರ್ತೂರ್ ಗಿರೀಶ್ ಇತರರಿದ್ದರು.

ಬಿಜೆಪಿ ಜಯ: ಪೀಣ್ಯದಲ್ಲಿ ವಿಜಯೋತ್ಸವ



3 ರಾಜ್ಯಗಳಲ್ಲಿ ಬಿಜೆಪಿ ಅಭೂತಪೂರ್ವ ಜಯ ಸಾಧಿಸಿದ್ದಕ್ಕೆ ಪೀಣ್ಯ ದಾಸರಹಳ್ಳಿ 2ನೇ ಹಂತದ ಸರ್ಕಲ್‌ನಲ್ಲಿ ಪಕ್ಷದ ಯುವ ಮುಖಂಡ ಗುರುನಿಶ್ಚಲ್‌ನೇತೃತ್ವದಲ್ಲಿ ವಿಜಯೋತ್ಸವನಡೆಯಿತು. ರಾಜಗೋಪಾಲನಗರ ವಾರ್ಡ್ ಮಾಜಿ ಅಧ್ಯಕ್ಷ ನಾಗೇಶ್, ಮುಖಂಡರು, ಕಾರ್ಯಕರ್ತರಿದ್ದರು.

ರಸ್ತೆ ಕಾಮಗಾರಿಗೆ ಮುನಿರಾಜು ಚಾಲನೆ



ಪೀಣ್ಯ ದಾಸರಹಳ್ಳಿ ವ್ಯಾಪ್ತಿಯ ನೆಲಗದರನಹಳ್ಳಿ ನಿಸರ್ಗ ಶಾಲೆಯ ಹತ್ತಿರ ಕಾಂಕ್ರೀಟ್ ರಸ್ತೆ ಕಾಮಗಾರಿಗೆ ಶಾಸಕ ಎಸ್.ಮುನಿರಾಜು ಚಾಲನೆ ನೀಡಿದರು. ಸ್ಥಳೀಯ ಮುಖಂಡರಾದ ನಿಸರ್ಗ ಕೆಂಪರಾಜು, ಚೆನ್ನಗಿರಿ, ಕೌಸಲ್ಯ ಹಾಗೂ ಸ್ಥಳೀಯರಿದ್ದರು.

ಮುಂಗಾರು ಎದುರಿಸಲು ಸಿದ್ಧರಾಗಿ: ಸುನೀಲ್

ಮಳೆ ಕಾರಣ ಕಾಮಗಾರಿ ಶೀಘ್ರ ಪೂರ್ಣಗೊಳಿಸಲು ಸೂಚನೆ | ವಿವಿಧ ಪ್ರದೇಶಗಳಿಗೆ ಭೇಟಿ ನೀಡಿದ ಉತ್ತರ ಪಾಲಿಕೆ ಆಯುಕ್ತ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಮುಂಗಾರು ಮಳೆ ಸಮೀಪಿಸುತ್ತಿರುವ ಹಿನ್ನೆಲೆ ಕಾಮಗಾರಿಗಳನ್ನು ತ್ವರಿತವಾಗಿ ಪೂರ್ಣಗೊಳಿಸಬೇಕು ಎಂದು ನಗರದ ಉತ್ತರ ಪಾಲಿಕೆ ಆಯುಕ್ತ ಪೋಮ್ಮಲ ಸುನೀಲ್‌ಕುಮಾರ್ ಗುತ್ತಿಗೆದಾರರು ಹಾಗೂ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಮಂಗಳವಾರ ನಗರ ಪಾಲಿಕೆ ವ್ಯಾಪ್ತಿಯ ವಿವಿಧ ಪ್ರದೇಶಗಳಿಗೆ ಭೇಟಿ ನೀಡಿ ಸ್ಥಳ ಪರಿಶೀಲನೆ ನಡೆಸಿ, ನೀರು ನಿಲುಗಡೆ, ಚರಂಡಿ ವ್ಯವಸ್ಥೆ ಹಾಗೂ ರಸ್ತೆ ಕಾಮಗಾರಿಗಳ ಪ್ರಗತಿ ಕುರಿತು ಪರಿಶೀಲನೆ ನಡೆಸಿದರು. ಪಾಲಿಕೆ ವ್ಯಾಪ್ತಿಯ ವಿವಿಧ ಸ್ಥಳಗಳಲ್ಲಿ ಕಂಡುಬಂದ ಸಮಸ್ಯೆಗಳ ಕುರಿತು ಸಂಬಂಧಪಟ್ಟ ಇಲಾಖೆಗಳ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವಂತೆ ಸೂಚನೆ ನೀಡಿದರು.

ಪುಟ್ಟೇನಹಳ್ಳಿ ಕೆರೆ ರಸ್ತೆಯಲ್ಲಿ ನೀರು ನಿಲುಗಡೆ ಹಾಗೂ ಟ್ರಾಫಿಕ್ ಸಮಸ್ಯೆ ಗಂಭೀರವಾಗಿರುವುದನ್ನು ಗಮನಿಸಿ ತಕ್ಷಣ ತೆರವುಗೊಳಿಸಲು ಸೂಚಿಸಿದರು. ಚರಂಡಿ ಸಮಸ್ಯೆ ಮರುಕಳಿಸುವುದನ್ನು ತಡೆಯಲು ಹಾಗೂ ನಿರಂತರ ಮೇಲ್ವಿಚಾರಣೆ ನಡೆಸಲು ನಿರ್ದೇಶನ ನೀಡಿಸಿದರು. ಇದಲ್ಲದೆ, ಕೆಆರ್‌ಡಿಸಿಎಲ್ ಇಂಜಿನಿಯರ್‌ಗಳಿಗೆ ಪಾದಚಾರಿ ಮಾರ್ಗಗಳಲ್ಲಿ ಇರುವ ಅವಶೇಷಗಳನ್ನು ತಕ್ಷಣ ತೆರವುಗೊಳಿಸಲು ಹಾಗೂ ಚರಂಡಿ ಡಿಸಿಲ್ಟಿಂಗ್ ಕೆಲಸ ಆದ್ಯತೆಯಿಂದ ಕೈಗೊಂಡು ಶುಕ್ರವಾರದೊಳಗೆ ಪೂರ್ಣಗೊಳಿಸಲು ಸೂಚಿಸಿದರು.

ಕೋಗಿಲು ವೃತ್ತದ ಚರಂಡಿಗಳಲ್ಲಿ ನೀರು ನಿಲುವು ಹಾಗೂ ದುರ್ವಾಸನೆ ಸಮಸ್ಯೆ ತಡೆಗಟ್ಟಲು ತುರ್ತು ಡಿಸಿಲ್ಟಿಂಗ್ ಕಾರ್ಯ ಕೈಗೊಳ್ಳಬೇಕು. ಮಳೆನೀರು ಸರಾಗ ಹರಿವಿಗೆ ಅಡ್ಡಿಯಾಗಿರುವ ಕೇಬಲ್ ತೆರವುಗೊಳಿಸಲು ಹಾಗೂ ಚರಂಡಿ ಕಾಮಗಾರಿಗಳಿಗೆ ಅಡ್ಡಿಯಾಗಿರುವ ಅತಿಕ್ರಮಣ ತೆರವುಗೊಳಿಸಲು ಸೂಚನೆ ನೀಡಿದರು. ಇದಲ್ಲದೆ, ರಾಷ್ಟ್ರೀಯ ಹೆದ್ದಾರಿ ಸೇರಿದಂತೆ ಸಂಬಂಧಪಟ್ಟ ಎಲ್ಲಾ ಇಲಾಖೆಗಳೊಂದಿಗೆ ಸಮನ್ವಯತೆ ಸಾಧಿಸಿ ಬಾಕಿ ಇರುವ ಕಾಮಗಾರಿಗಳನ್ನು ತುರ್ತಾಗಿ ಪೂರ್ಣಗೊಳಿಸಲು ಸೂಚಿಸಲಾಯಿತು.

ಚರಂಡಿಗೆ ಮೆಟ್ರೋ ಕಾಮಗಾರಿ ಅಡ್ಡಿ: ಮದರ್‌ಹುಡ್ ಆಸ್ಪತ್ರೆ ಬಳಿ, ಬ್ಯಾಟರಾಯನಪುರ ಮೆಟ್ರೋ ಕಾಮಗಾರಿಯಿಂದ ಚರಂಡಿಗೆ ಅಡಚಣೆ ಉಂಟಾಗಿರುವುದನ್ನು ಪರಿಶೀಲಿಸಿ, ಬಿಎಮ್‌ಆರ್‌ಸಿಎಲ್ ಅಧಿಕಾರಿಗಳಿಗೆ ತಕ್ಷಣ ತೆರವುಗೊಳಿಸಲು ಸೂಚಿಸಿದರು. ರಾಷ್ಟ್ರೀಯ ಹೆದ್ದಾರಿ ಅಧಿಕಾರಿಗಳು ಮಣ್ಣು, ಕಲ್ಲು ತೆರವುಗೊಳಿಸಿ ಸರ್ವೀಸ್ ರಸ್ತೆಯನ್ನು ಸಂಚಾರ ಮುಕ್ತ ಮಾಡಬೇಕು, ಬೆಸ್ಕಾಂ ಅಧಿಕಾರಿಗಳು ಪಾದಚಾರಿ ಮಾರ್ಗಕ್ಕೆ ಅಡ್ಡಿಯಾಗಿರುವ ವಿದ್ಯುತ್ ಕಂಬ ಸ್ಥಳಾಂತರಿಸಬೇಕೆಂದು ಸೂಚಿಸಿದರು.

ಟಾಟಾ ನಗರ ಬಳಿ ಚರಂಡಿ ನೀರು ನಿಲುವು ಸಮಸ್ಯೆ ಉಂಟಾಗಿರುವುದನ್ನು ಗಮನಿಸಿ, ಚರಂಡಿ ಅಗಲಿಕೆ ಹೆಚ್ಚಿಸುವ ಹಾಗೂ ಭೂಸ್ವಾಧೀನ ಪ್ರಕ್ರಿಯೆ ವೇಗಗೊಳಿಸಲು ಸೂಚಿಸಲಾಯಿತು. ಪಾರ್ಸೆಲ್ ಬೇ ಅಂಡರ್‌ಪಾಸ್ ಪ್ರದೇಶದಲ್ಲಿ ನೀರು ನಿಲುವು ಸಮಸ್ಯೆ ಹಾಗೂ ಚರಂಡಿ ಸ್ಥಿತಿ ಪರಿಶೀಲಿಸಿ, ಒಂದು ವಾರದೊಳಗೆ ಡಿಸಿಲ್ಟಿಂಗ್ ಕಾರ್ಯ ಪೂರ್ಣಗೊಳಿಸಲು ಹಾಗೂ ವೃತ್ತದ ಸುಂದರೀಕರಣ ಕೈಗೊಳ್ಳಲು ಸೂಚಿಸಿದರು.

ಹೆಬ್ಬಾಳ ವ್ಯಾಪ್ತಿಯ ಮಳೆ ನೀರು ಸಂಗ್ರಹವಾಗುವ ಸಮಸ್ಯೆ ನಿವಾರಿಸಲು ಹಾಗೂ ಮಳೆ ನೀರು ಸರಾಗ ಹರಿವಿಗೆ ಅನುವು ಮಾಡಿಕೊಡಬೇಕೆಂದು ತಿಳಿಸಿದರು. ಹೆಚ್ಚುವರಿ ಆಯುಕ್ತೆ ಲತಾ, ಜಂಟಿ ಆಯುಕ್ತ ಮೊಹಮ್ಮದ್ ನಯೀಮ್ ಮೊಮಿನ್, ಮುಖ್ಯ ಇಂಜಿನಿಯರ್, ಜಲಮಂಡಳಿ ಅಧಿಕಾರಿಗಳು ಇದ್ದರು.



ನಗರದ ಉತ್ತರ ಪಾಲಿಕೆ ವ್ಯಾಪ್ತಿಯ ವಿವಿಧ ಸ್ಥಳಗಳಿಗೆ ಭೇಟಿ ನೀಡಿದ ಆಯುಕ್ತ ಪೊಮ್ಮಲ ಸುನೀಲ್ ಕುಮಾರ್ ಮಳೆಗಾಲದ ಹಿನ್ನೆಲೆ ಕಾಮಗಾರಿ ಪೂರ್ಣಗೊಳಿಸಲು ಅಧಿಕಾರಿಗಳು ಹಾಗೂ ಗುತ್ತಿಗೆದಾರರಿಗೆ ಸೂಚನೆ ನೀಡಿದರು.

ಇಲಾಖೆಗಳ ನಡುವೆ ಸಮನ್ವಯತೆ ಸಾಧಿಸಿ

ಬೆಥೆಲ್ ಚರ್ಚ್ ಪ್ರದೇಶ, ಬಿಡಬ್ಲ್ಯುಎಸ್‌ಎಸ್‌ಬಿ ಎದುರು ಪ್ರದೇಶ. ವೀರಣ್ಣಪಾಳ್ಯ ಜಂಕ್ಷನ್, ನಾಗವಾರ ಜಂಕ್ಷನ್, ಕೇಂಪೇಗೌಡ ರಸ್ತೆ ನಾಗವಾರ ಮುಖ್ಯ ರಸ್ತೆ (ಅರಬಿಕ್ ಕಾಲೇಜ್ ಬಳಿ), ಮೆಟ್ರೋ ನಿಲ್ದಾಣ ಕಾಮಗಾರಿಗಳನ್ನು ತ್ವರಿತ ಪೂರ್ಣಗೊಳಿಸಿ ಮಳೆಗಾಲದಲ್ಲಿ ಸಮಸ್ಯೆಯಾಗದಂತೆ ಕ್ರಮಕೈಗೊಳ್ಳ ಬೇಕೆಂದು ಸಂಬಂಧಿಸಿದ ಅಧಿಕಾರಿಗಳಿಗೆ ಕಟ್ಟುನಿಟ್ಟಾಗಿ ಸೂಚಿಸಿದರು. ಅಲ್ಲದೆ, ಎಲ್ಲಾ ಇಲಾಖೆಗಳ ನಡುವೆ ಸಮನ್ವಯತೆ ಸಾಧಿಸಿ, ಮಳೆಗಾಲದ ಮುನ್ನೆಚ್ಚರಿಕಾ ಕ್ರಮಗಳನ್ನು ತ್ವರಿತವಾಗಿ ಪೂರ್ಣಗೊಳಿಸುವಂತೆ ಸೂಚಿಸಿದರು. ನಗರ ಪಾಲಿಕೆ ವ್ಯಾಪ್ತಿಯಲ್ಲಿ ನೀರು ನಿಲುವು ಸಮಸ್ಯೆ ತಡೆಯಲು ಮತ್ತು ಸಾರ್ವಜನಿಕರ ಸುರಕ್ಷತೆಗಾಗಿ ನಿರಂತರ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ತಿಳಿಸಿದರು.

ಮಳೆ ನೀರು ಕಾಲುವೆಗೆ ಆದ್ಯತೆ ನೀಡಿ: ರಮೇಶ್

ವಿಶ್ವಬ್ಯಾಂಕ್ ನೆರವಿನಿಂದ ಅಭಿವೃದ್ಧಿ ಕಾಮಗಾರಿ | ನೀರು ನಿಲ್ಲುವ ಸಮಸ್ಯೆ ತಡೆಗಟ್ಟಿ: ಸೂಚನೆ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಮಳೆ ನೀರು ಕಾಲುವೆ ಅಭಿವೃದಿ ಕಾಮಗಾರಿಗಳಿಗೆ ಪ್ರಥಮ ಆದ್ಯತೆ ನೀಡಿ ಪೂರ್ಣಗೊಳಿಸಿ ಎಂದು ಪೂರ್ವ ಪಾಲಿಕೆ ಆಯುಕ್ತ ಡಿ.ಎಸ್. ರಮೇಶ್ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಬೆಂಗಳೂರು ಪೂರ್ವ ನಗರ ಪಾಲಿಕೆ ವ್ಯಾಪ್ತಿಯಲ್ಲಿ ವಿಶ್ವಬ್ಯಾಂಕ್ ನೆರವಿನಿಂದ ಕೈಗೊಳ್ಳಲಾಗುತ್ತಿರುವ ಮಳೆ ನೀರು ಕಾಲುವೆಗಳ ಅಭಿವೃದ್ಧಿ ಕಾಮಗಾರಿ ವೇಗ ಹಾಗೂ ಕಾಮಗಾರಿಯಲ್ಲಿ ಸಮನ್ವಯ ಸಾಧಿಸುವ ನಿಟ್ಟಿನಲ್ಲಿ ಅಧಿಕಾರಿಗಳೊಂದಿಗೆ ಮಂಗಳವಾರ ಸಮನ್ವಯ ಸಭೆ ನಡೆಸಿದರು. ಮಳೆ ನೀರು ಕಾಲುವೆಗಳ ಅಭಿವೃದ್ಧಿ ಮತ್ತು ನವೀಕರಣ ಕಾಮಗಾರಿಗಳ ಪ್ರಗತಿ ಪರಿಶೀಲನೆ, ಕಾಲುವೆಗಳ ಗಡಿ ಗುರುತಿಸುವಿಕೆ, ಒತ್ತುವರಿ ತೆರವು ಹಾಗೂ ಮುಂಗಾರು ಪೂರ್ವ ಸಿದ್ಧತೆ ಕ್ರಮಗಳನ್ನು ಸಮನ್ವಯದಿಂದ ಜಾರಿಗೊಳಿಸಬೇಕು ಎಂದು ಆಯುಕ್ತರು ತಿಳಿಸಿದರು. ಕಾಲುವೆಗಳ ಗಡಿ ಗುರುತಿಸುವಿಕೆ ಹಾಗೂ ಒತ್ತುವರಿ ತೆರವು ಕಾರ್ಯಾಚರಣೆಗೆ ಸಂಬಂಧಿಸಿದಂತೆ ಕಂದಾಯ ಇಲಾಖೆಯೊಂದಿಗೆ ಸಮನ್ವಯ ಸಾಧಿಸುವ ಮೂಲಕ ಯೋಜನಾ ಅನುಷ್ಠಾನ ಘಟಕ ಕಾಲುವೆಗಳ ಒತ್ತುವರಿ ತೆರವುಗೊಳಿಸಿ ಅಭಿವೃದ್ಧಿ ಕಾಮಗಾರಿ ನಡೆಸುವ ಸಂಪೂರ್ಣ ಹೊಣೆ ಹೊಂದಿರುತ್ತದೆ ಎಂದರು.

ಮಳೆಗಾಲದಲ್ಲಿ ನೀರು ನಿಲ್ಲುವ ಸಮಸ್ಯೆ ತಡೆಗಟ್ಟಲು, ಕಾಲುವೆಗಳ ಅಭಿವೃದ್ಧಿ ಕಾಮಗಾರಿಗಳನ್ನು ವೇಗವಾಗಿ ಮತ್ತು ಗುಣಮಟ್ಟದೊಂದಿಗೆ ಪೂರ್ಣಗೊಳಿಸುವುದು ಅಗತ್ಯವಾಗಿದ್ದು, ಅಧಿಕಾರಿಗಳು ಸಾರ್ವಜನಿಕರಿಗೆ ತೊಂದರೆ ಆಗದಂತೆ ಮುನ್ನೆಚ್ಚರಿಕೆ ವಹಿಸಿ ಎಂದು ಸೂಚಿಸಿದರು.

ಸಭೆಯಲ್ಲಿ ಹೆಚ್ಚುವರಿ ಆಯುಕ್ತ (ಅಭಿವೃದ್ಧಿ) ಲೋಖಂಡೆ ಸ್ನೇಹಲ್ ಸುಧಾಕರ್, ಮುಖ್ಯ ಎಂಜಿನಿಯರ್ ಕೃಷ್ಣಮೂರ್ತಿ, ಎಇ(ಕಾಡುಗೋಡಿ ವಿಭಾಗ), ಯೋಜನಾ ಅನುಷ್ಠಾನ ಘಟಕದ ಅಧಿಕಾರಿಗಳಿದ್ದರು.



ಅಧಿಕಾರಿಗಳೊಂದಿಗೆ ಸಮನ್ವಯ ಸಭೆ ನಡೆಸಿದ ಪೂರ್ವ ಪಾಲಿಕೆ ಆಯುಕ್ತ ರಮೇಶ್

ಮಳೆ ಬಿದ್ದು ವಾರವಾದರೂ ಮರ ತೆರವು ಪೂರ್ಣ ಆಗಿಲ್ಲ

ಚರಂಡಿಗಳ ಹೂಳೆತ್ತುವ ಕಾರ್ಯವೂ ಅಪೂರ್ಣ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ನಗರದಲ್ಲಿ ಏ.29 ರಂದು ಸುರಿದ ಭೀಕರ ರಣ ಮಳೆಗೆ ಬಿದ್ದ ಮರ, ಕೊಂಬೆಗಳ ತೆರವು, ಕಟ್ಟಿಕೊಂಡ ಚರಂಡಿಗಳ ಹೂಳೆತ್ತುವ ಕಾರ್ಯಗಳು ಒಂದು ವಾರ ಕಳೆದರೂ ಇನ್ನೂ ಪೂರ್ಣಗೊಂಡಿಲ್ಲ.

ಜಿಬಿಎ ವ್ಯಾಪ್ತಿಯ 5 ಪಾಲಿಕೆಗಳ ಆಯುಕ್ತರು ಬಿಡುವಿಲ್ಲದೆ, ಅಧಿಕಾರಿಗಳ ಸಭೆಗಳನ್ನು ನಡೆಸಿ ಸಿಬ್ಬಂದಿಯನ್ನು ಕೆಲಸದಲ್ಲಿ ತೊಡಗಿಸಿದರೂ ಮಂಗಳವಾರದ ಸಂಜೆ ವೇಳೆಗೆ ಮರ, ಕೊಂಬೆಗಳ ತೆರವು ಕಾರ್ಯ ಇನ್ನೂ ಬಾಕಿ ಉಳಿದಿವೆ.

ನಗರದ ಹೃದಯಭಾಗದಲ್ಲಿರುವ ಓಕಳಿಪುರ ರೈಲ್ವೆ ಅಂಡರ್‌ಪಾಸ್ ನಲ್ಲಿ ಕೊಳಚೆ ನೀರು ಇನ್ನೂ ರಸ್ತೆ ಮೇಲೆಯೇ ಹರಿದಾಡುತ್ತಿದೆ. ಕೆ.ಆರ್.ವೃತ್ತ ಹಾಗೂ ಸುತ್ತಮುತ್ತಲ ಚರಂಡಿಗಳಲ್ಲಿ ಹೂಳೆತ್ತುವ ಕಾರ್ಯ ಭರದಿಂದ ಸಾಗಿದೆ. ಆದರೂ, ಮತ್ತೊಂದು ಮಳೆ ಬಿದ್ದರೆ ಅದೇ ಸಮಸ್ಯೆ ಪುನರಾವರ್ತನೆಯಾಗುವ ಎಲ್ಲಾ ಮುನ್ಸೂಚನೆಗಳಿವೆ. ಅಗ್ನಿಶಾಮಕದಳದ ಸಿಬ್ಬಂದಿ, ನಗರ ಪಾಲಿಕೆ ಸಿಬ್ಬಂದಿ, ಖಾಸಗಿಯಾಗಿ ಬಾಡಿಗೆಗೆ ಪಡೆದ ಸಿಬ್ಬಂದಿ ಜಂಟಿಯಾಗಿ ಕಾರ್ಯಾಚರಣೆ ನಡೆಸಿದರೂ ತೆರವು ಕಾರ್ಯ ಇನ್ನೂ ಪೂರ್ಣಗೊಂಡಿಲ್ಲ.

ಕ್ರೆಸೆಂಟ್ ರಸ್ತೆ, ಮಲ್ಲೇಶ್ವರ, ರಾಜಾಜಿನಗರ, ಆರ್.ಆರ್.ನಗರ, ವಿಜಯನಗರ, ಯಶವಂತಪುರ, ಪೀಣ್ಯ ಸೇರಿದಂತೆ 5 ಪಾಲಿಕೆ ವ್ಯಾಪ್ತಿಗಳಲ್ಲಿ ಮರಗಳನ್ನು ರಸ್ತೆಯಿಂದ ತೆರವುಗೊಳಿಸಿದರೂ ಅವುಗಳನ್ನು ಪಕ್ಕಕ್ಕೆ ಸರಿಸಲಾಗಿದೆ. ಹೊರತಾಗಿ ಮರಬಿದ್ದ ಸ್ಥಳದಿಂದ ಸಂಪೂರ್ಣ ತೆರವಾಗಿಲ್ಲ.

516 ಮರಗಳು, 1305 ಕೊಂಬೆಗಳು ಬಿದ್ದಿದ್ದು 1 ವಾರದ ಅವಧಿಯಲ್ಲಿ 507 ಮರಗಳು, 1256 ಕೊಂಬೆಗಳನ್ನು ತೆರವುಗೊಳಿಸಲಾಗಿದೆ.

ತುಂತುರು ಮಳೆಗೆ ಸಂಚಾರ ಕಿರಿಕಿರಿ



ನಗರದಲ್ಲಿ ಮಂಗಳವಾರ ಸಂಜೆ ತುಂತುರು ಮಳೆ ಸುರಿದ ಕಾರಣ ವಾಹನ ಸಂಚಾರ ಹಾಗೂ ಕಚೇರಿಗಳಿಂದ ಮನೆಗಳಿಗೆ ತೆರಳುವವರಿಗೆ ಕಿರಿಕಿರಿ ಉಂಟು ಮಾಡಿತ್ತು. ನಗರದ ಕೆಂಪೇಗೌಡ ಬಸ್ ನಿಲ್ದಾಣ, ಮಲ್ಲೇಶ್ವರಂ, ರಾಜಾಜಿನಗರ, ವಿಜಯನಗರ, ಚಂದ್ರಾಲೇ ಔಟ್, ಆರ್.ಟಿ.ನಗರ, ಫ್ರೇಜರ್‌ಟೌನ್, ಇಂದಿರಾನಗರ, ಕೆ.ಆರ್.ಪುರಂ ವ್ಯಾಪ್ತಿ ಪ್ರದೇಶಗಳಲ್ಲಿ ಸುಮಾರು 30 ನಿಮಿಷಗಳಿಗೂ ಅಧಿಕ ಸಮಯ ತುಂತುರು ಮಳೆ ಸುರಿಯಿತು. ಕಳೆದ ಬುಧವಾರ ಸುರಿದ ಮಳೆಯ ಅವಾಂತರಗಳಿಂದ ಜನ ಇನ್ನೂ ಚೇತರಿಸಿಕೊಳ್ಳುತ್ತಿರುವಾಗಲೇ ಮಳೆ ಆರಂಭವಾದ್ದರಿಂದ ಜನರಿಗೆ ಭಯಕಾಡಿತ್ತು. ಆದರೆ, ಮಳೆ ಅಷ್ಟೇನೂ ರಭಸದಿಂದ ಕೂಡಿರಲಿಲ್ಲ.

ಮಳೆ ಅವಘಡ ತಡೆಗೆ ಪ್ಲಾನ್ ರೂಪಿಸಿ: ರಾಜೇಂದ್ರ

ಮಳೆಗಾಲ, ಅಭಿವೃದ್ಧಿ ಕುರಿತು ಪಶ್ಚಿಮ ಪಾಲಿಕೆಯಲ್ಲಿ ಅಧಿಕಾರಿಗಳಿಗೆ ಪಾಲಿಕೆ ಆಯುಕ್ತ ಸೂಚನೆ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಮುಂಬರುವ ಮಳೆಗಾಲದಲ್ಲಿ ಸಂಭವನೀಯ ಅವಘಡ ತಪ್ಪಿಸಲು ಅಧಿಕಾರಿ ಹಾಗೂ ಸಿಬ್ಬಂದಿ ಪೂರ್ವಸಿದ್ಧತೆ, ಯೋಜನೆ ಹಾಗೂ ಸಮನ್ವಯದೊಂದಿಗೆ ಕಾರ್ಯಪ್ರವೃತ್ತರಾಗಬೇಕು ಎಂದು ಪಶ್ಚಿಮ ನಗರ ಪಾಲಿಕೆ ಆಯುಕ್ತ ಡಾ.ರಾಜೇಂದ್ರ ಕೆ.ವಿ ಅಧಿಕಾರಿಗಳಿಗೆ ಸೂಚನೆ ನೀಡಿದರು.



ಪಾಲಿಕೆ ವ್ಯಾಪ್ತಿಯಲ್ಲಿ ಮಳೆಗಾಲ ಹಾಗೂ ವಿವಿಧ ಅಭಿವೃದ್ಧಿ ಕಾಮಗಾರಿ ಸಂಬಂಧ ನಡೆದ ಸಭೆ ಉದ್ದೇಶಿಸಿ ಮಾತನಾಡಿ, ಈಗಾಗಲೇ ಪೂರ್ವ ಮುಂಗಾರು ಪ್ರಾರಂಭಗೊಂಡಿದ್ದು, ಸಧ್ಯದಲ್ಲೇ ಮುಂಗಾರು ಮಳೆಗಾಲ ಪ್ರಾರಂಭವಾಗಲಿದೆ. ಪಾಲಿಕೆ ವ್ಯಾಪ್ತಿಯ ಎಲ್ಲಾ 112 ವಾರ್ಡ್‌ಗಳಲ್ಲಿ ಯಾವುದೇ ಅವಘಡ ಸಂಭವಿಸದಂತೆ ಎಲ್ಲಾ ತಂಡಗಳು ಸಕ್ರಿಯವಾಗಿ ಕಾರ್ಯನಿರ್ವಹಿಸಬೇಕು. ತಪ್ಪಿದಲ್ಲಿ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದರು.

ಪ್ರಮುಖ ರಸ್ತೆಗಳಾದ ಆರ್ಟೀರಿಯಲ್, ಸಬ್-ಆರ್ಟೀರಿಯಲ್ ಹಾಗೂ ಹೈಡೆನ್ಸಿಟಿ ಕಾರಿಡಾರ್ ಬದಿ ಚರಂಡಿಗಳು, ಶೋಲ್ಡರ್‌ಡ್ರೇನ್‌ಗಳಲ್ಲಿ ಹೂಳೆತ್ತುವ ಕಾರ್ಯ ಕೈಗೊಂಡು, ಗ್ರೇಟಿಂಗ್‌ಗಳಲ್ಲಿ ನೀರು ಸರಾಗವಾಗಿ ಹರಿಯುವಂತೆ ಸ್ವಚ್ಛತೆ ಕಾಪಾಡಬೇಕು. ಈ ಕುರಿತು ಸ್ಥಳ ಪರಿಶೀಲನೆ ನಡೆಸಿ, ಸ್ವಚ್ಛತೆ ಸಮರ್ಪಕವಾಗಿರುವುದನ್ನು ಖಚಿತಪಡಿಸಿಕೊಳ್ಳಲು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಪಾಲಿಕೆ ವ್ಯಾಪ್ತಿಯ ಶಿಥಿಲಾವಸ್ಥೆಯ ಕಟ್ಟಡಗಳು, ಕಾಂಪೌಂಡ್ ಗೋಡೆಗಳು, ಶೆಲ್ಟರ್‌ಪಾಯಿಂಟ್‌ಗಳು, ಮ್ಯಾನ್ ಹೋಲ್‌ಗಳು ಹಾಗೂ ಬೀಳುವ ಸಾಧ್ಯತೆಯಿರುವ ಫ್ಲೆಕ್ಸ್ ಅಥವಾ ಬ್ಯಾನರ್ ತೆರವುಗೊಳಿಸುವ ಕಾರ್ಯ ಪರಿಣಾಮಕಾರಿಯಾಗಿ ನಡೆಯಬೇಕು. ಈ ಸಂಬಂಧ ಅಧಿಕಾರಿಗಳು ಮೇಲ್ವಿಚಾರಣೆ ನಡೆಸಿ, ಶಿಥಿಲಾವಸ್ಥೆ ಕಟ್ಟಡ ಅಥವಾ ಗೋಡೆ ಗುರುತಿಸಿ, ತೆರವಿಗೆ ನೋಟಿಸ್ ನೀಡುವ ಕಾರ್ಯ ಕೈಗೊಳ್ಳಬೇಕು ಎಂದು ಸೂಚಿಸಿದರು.

ಮಾರಾಟ ಮೇಳ | 17ರವರೆಗೆ ಆಯೋಜನೆ | 70ಕ್ಕೂ ಅಧಿಕ ಮಳಿಗೆಗಳು | ರೈತರಿಂದ ಮಾವು ನೇರ ಖರೀದಿಗೆ ಅವಕಾಶ

ನಾಡಿದ್ದಿನಿಂದ ಕಬ್ಬನ್‌ಪಾರ್ಕಲ್ಲಿ ಮಾವು, ಹಲಸು ಮೇಳ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ತೋಟಗಾರಿಕೆ ಇಲಾಖೆ, ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮ ಸಂಯುಕ್ತ ಆಶ್ರಯದಲ್ಲಿ ಮಾವು, ಹಲಸು ಪ್ರದರ್ಶನ ಮತ್ತು ಮಾರಾಟ ಮೇಳ ನಗರದ ಕಬ್ಬನ್ ಪಾರ್ಕ್‌ನಲ್ಲಿ ಮೇ 8ರಿಂದ 17ರವರೆಗೆ ನಡೆಯಲಿದೆ. ಸಹಜವಾಗಿ ಮಾಗಿದ, ಕಾರ್ಬೈಡ್‌ಮುಕ್ತ ಹಣ್ಣುಗಳನ್ನು ರೈತರಿಂದ ನೇರವಾಗಿ ಖರೀದಿಸಲು ಗ್ರಾಹಕರಿಗೆ ಅವಕಾಶ ಕಲ್ಪಿಸಲಾಗಿದೆ.

ರೈತರಿಗೆ ನೇರ ಮಾರುಕಟ್ಟೆ ವ್ಯವಸ್ಥೆ ಹಾಗೂ ಗ್ರಾಹಕರಿಗೆ ಗುಣಮಟ್ಟದ ರಾಸಾಯನಿಕ ರಹಿತ ಹಣ್ಣುಗಳನ್ನು ಒದಗಿಸುವುದು ಮೇಳದ ಉದ್ದೇಶ. ಮಾವು, ಹಲಸಿನ ವಿವಿಧ ತಳಿಗಳನ್ನು ವೀಕ್ಷಿಸುವ ಮತ್ತು ಸವಿಯುವ ಅವಕಾಶ ಇಲ್ಲಿ ದೊರೆಯಲಿದೆ ಎಂದು ನಿಗಮದ ಅಧ್ಯಕ್ಷ ಡಾ.ಬಿ.ಸಿ. ಮುದ್ದುಗಂಗಾಧರ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

70ಕ್ಕೂ ಅಧಿಕ ಮಳಿಗೆ: ರಾಮನಗರ, ಮಂಡ್ಯ, ತುಮಕೂರು, ಉತ್ತರ ಕನ್ನಡ ಜಿಲ್ಲೆಗಳ ಮಾವು- ಹಲಸು ಬೆಳೆಗಾರರ 70ಕ್ಕೂ ಅಧಿಕ ಮಳಿಗೆಗಳು ಮೇಳದಲ್ಲಿ ಇರಲಿವೆ. ಭಾಗವಹಿಸುವ ರೈತರಿಗೆ ಯಾವುದೇ ಪ್ರವೇಶ ಶುಲ್ಕ ವಿಧಿಸಲಾಗುವುದಿಲ್ಲ ಎಂದರು.

ಜಿಐ ಮಾನ್ಯತೆ ಹೊಂದಿರುವ ಕರಿ ಇಶಾಡ್ (ಉತ್ತರ ಕನ್ನಡ), ಬಾದಾಮಿ, ಮಲ್ಲಿಕಾ, ಸೆಂದೂರಾ, ರಸಪೂರಿ, ಚಾಲ್ತಿ ಮತ್ತಿತರ ಮಾವಿನ ತಳಿಗಳು, ರುದ್ರಾಕ್ಷಿ, ಶಿವರಾತ್ರಿ, ಏಕಾದಶಿ, ತೂಬಗೆರೆ, ಲಾಲ್‌ಬಾಗ್ ಹಲಸಿನ ಹಣ್ಣು ಇಲ್ಲಿ ಖರೀದಿಗೆ ಲಭ್ಯ. ಮೇಳದ ಉದ್ಘಾಟನೆ ಮೇ 8ರಂದು ಮಧ್ಯಾಹ್ನ 12.15ಕ್ಕೆ ನಡೆಯಲಿದೆ ಎಂದರು. ವ್ಯವಸ್ಥಾಪಕ ನಿರ್ದೇಶಕ ಟಿ.ಆರ್. ವೇದಮೂರ್ತಿ ಇದ್ದರು.



ಮಾವು ಇಳುವರಿ ಶೇ.60 ಕುಸಿತ!

ರಾಜ್ಯದಲ್ಲಿ ಸುಮಾರು 1.45 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಮಾವು ಬೆಳೆಯಲಾಗುತ್ತಿದೆ. ಕಳೆದ ವರ್ಷಕ್ಕೆ ಹೋಲಿಸಿದರೆ ಈ ಬಾರಿ ಮಾವು ಇಳುವರಿ ಶೇ.60-70ರಷ್ಟು ಕುಸಿದಿದೆ. ಅಕಾಲಿಕ ಮಳೆ, ಬೇಸಗೆಯ ಅಧಿಕ ಉಷ್ಣಾಂಶದ ಕಾರಣದಿಂದಲೂ ಬೆಳೆ ನಷ್ಟವಾಗುತ್ತಿದೆ. ಶೇ.33ಕ್ಕಿಂತ ಹೆಚ್ಚು ನಷ್ಟ ಅನುಭವಿಸಿದ ರೈತರಿಗೆ ರಾಷ್ಟ್ರೀಯ ವಿಪತ್ತು ಪರಿಹಾರ ನಿಧಿಯಿಂದ ನೆರವು ನೀಡಲು ಸೂಚಿಸಲಾಗಿದೆ. ಹವಾಮಾನ ವೈಪರೀತ್ಯದಿಂದ ಹೂ ಬಿಡುವುದು ತಡವಾದ್ದರಿಂದಮಾವು ಲಭ್ಯವಾಗುವ ಅವಧಿ ಹೆಚ್ಚಲಿದೆ ಎಂದು ಮುದ್ದು ಗಂಗಾಧರ ಹೇಳಿದರು.

ಬೇಳೆ ಕಾಳು ಉತ್ಪಾದನೆ ಹೆಚ್ಚಳ ಅಗತ್ಯ

ಮುಂಗಾರು ಬೆಳೆಗಳ ರಾಷ್ಟ್ರೀಯ ಕಾರ್ಯಾಗಾರದಲ್ಲಿ ಡಾ.ಎಂಎಲ್ ಜಾಟ್



ಬೆಂಗಳೂರು ಕೃಷಿ ವಿಶ್ವವಿದ್ಯಾಲಯದಿಂದ ಹೆಬ್ಬಾಳದ ಜಿಕೆವಿಕೆಯಲ್ಲಿ ಆಯೋಜಿಸಿದ್ದ 'ಬೇಳೆ ಕಾಳು ಬೆಳೆಗಳ ಕಾರ್ಯಾಗಾರ'ವನ್ನು ದೆಹಲಿಯ ಭಾರತೀಯ ಕೃಷಿ ಅನುಸಂಧಾನ ಪರಿಷತ್‌ನ ಮಹಾ ನಿರ್ದೇಶಕ ಡಾ.ಎಂ.ಎಲ್.ಜಾಟ್ ಉದ್ಘಾಟಿಸಿದರು.

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಬೇಳೆ ಕಾಳುಗಳ ಉತ್ಪಾದನೆಯಲ್ಲಿ ಭಾರತ ಜಗತ್ತಿನಲ್ಲೇ ಮೊದಲ ಸ್ಥಾನದಲ್ಲಿದ್ದರೂ ಶೇ.15 ರಷ್ಟನ್ನು ಆಮದು ಮಾಡಿಕೊಳ್ಳಲಾಗುತ್ತಿದೆ. ಆದ್ದರಿಂದ ಬೇಳೆ ಕಾಳುಗಳ ಉತ್ಪಾದನೆಯನ್ನು ಹೆಚ್ಚಿಸುವ ಅಗತ್ಯವಿದೆ ಎಂದು ದೆಹಲಿಯ ಭಾರತೀಯ ಕೃಷಿ ಅನುಸಂಧಾನ ಪರಿಷತ್‌ನ ಮಹಾ ನಿರ್ದೇಶಕ ಡಾ.ಎಂ.ಎಲ್.ಜಾಟ್ ಅಭಿಪ್ರಾಯಪಟ್ಟರು.

ಬೆಂಗಳೂರು ಕೃಷಿ ವಿಶ್ವವಿದ್ಯಾಲಯದಿಂದ ಹೆಬ್ಬಾಳದ ಜಿಕೆವಿಕೆಯಲ್ಲಿ ಮಂಗಳವಾರ ಆಯೋಜಿಸಿದ್ದ ಮೂರು ದಿನಗಳ 'ಮುಂಗಾರಿನ ಬೇಳೆ ಕಾಳು ಬೆಳೆಗಳ ರಾಷ್ಟ್ರೀಯ ವಾರ್ಷಿಕ ಕಾರ್ಯಾಗಾರ'ದಲ್ಲಿ ಮಾತನಾಡಿ, ಭಾರತವು ಬೇಳೆಕಾಳುಗಳ ಬೆಳೆ ಮತ್ತು ಬಳಕೆಯಲ್ಲಿ ಜಗತ್ತಿನಲ್ಲಿಯೇ ಮೊದಲ ಸ್ಥಾನದಲ್ಲಿದೆ. ಆದರೂ ನಾವು ಶೇ.15 ರಷ್ಟನ್ನು ಆಮದು ಮಾಡಿಕೊಳ್ಳುತ್ತಿದ್ದೇವೆ. ಆದ್ದರಿಂದ ಬೇಳೆ ಕಾಳುಗಳ ಉತ್ಪಾದನೆ, ಬೆಳೆ ಪ್ರದೇಶ, ಉತ್ಪಾದಕತೆ ಹೆಚ್ಚಿಸುವ ಅಗತ್ಯವಿದೆ ಎಂದರು. ವಿವಿ ಕುಲಪತಿ ಡಾ.ಎಸ್.ವಿ. ಸುರೇಶ, ಪರಿಷತ್‌ನ ಉಪ ಮಹಾ ನಿರ್ದೇಶಕ ಡಾ.ಡಿ.ಕೆ.ಯಾದವ್, ರಾಷ್ಟ್ರೀಯ ದ್ವಿದಳ ಧಾನ್ಯ ಮೆಷಿನ್‌ನ ಜಂಟಿ ಕಾರ್ಯದರ್ಶಿ ಸಂಜಯ್ ಅಗರ್‌ವಾಲ್ ಉಪಸ್ಥಿತರಿದ್ದರು.

IN THE COURT OF THE PRINCIPAL CITY CIVIL & SESSIONS JUDGE AT BANGALORE (CCH-I)

MISC. PETITION No. 488/2026

BETWEEN : Mohammed Musa Sait Wakf A Private Wakf having its administrative office, At Unit 1A, Shyams Garden, No.10, Khader Nawaz Khan Road, Chennai 600 006 and registered office at Central Square No.47/1 Central Street, Bangalore-560 001 Represented by its Muthavalli Mr. M. MuneerSait ...**Petitioner**

AND : NIL ...**Respondents**

PUBLIC NOTICE

Whereas the Petitioner above named has made petition to this Court under Sec. 34 and 36 of the Indian Trust Act, 1882 to grant the permission of the Muthavalli of the Petitioner Wakf to lease Schedule Property in favour of the Proposed Lessee i.e., M/s Prestige Estates Projects Ltd., and / or their nominees for a period of 63 years as agreed in the Letter of Intent dated 28.2.2026 on the terms and conditions stipulated therein;

Interested parties are hereby informed that anybody having any claim or interest in this matter shall appear in-person/pleader **on 16.06.2026** before the Principal City Civil and Sessions Judge Bangalore (CCH No. 01) at 11.00 A.M, inform to Show Cause against the Petitioner, failing wherein the appearance will be heard and declared as Ex-parte.

SCHEDULE PROPERTY

ALL THAT piece and parcel of commercial premises totally admeasuring 22,084 square feet of built-up area comprising of 3011 square feet in the Ground Floor, 4157 square feet in the Mezzanine Floor, 4906 square feet in the First Floor, 4906 square feet in the Second Floor and 5104 square feet in the Third floor along with entire Terrace area on the Terrace Floor in the Commercial building situated at No. 145, Infantry Road, Bangalore - 560 001 together with the entire car parking space in the basement of the Building and bounded on the:- **East by** : Private Property, **West by** : Vishweshwariah Towers, **North by** : Infantry Road, **South by:** Private Property.

Given under my hand and the seal of the Court, this 28th day of April 2026.

By Order of the Court, Senior Sheristedar, City Civil Court, Bengaluru.

Advocate for Petitioner :
Mohumed Sadiqh BA, Advocate
KV Legal, Advocate & Legal Consultants
#47, 1st Floor, Gold Tower,
#50, Residency Road, Bangalore-560025.

ನಿವಾಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್

NIWAS HOUSING FINANCE

(ಹಿಂದಿನ ನಿವಾಸ್ ಹೌಸಿಂಗ್ ಫೈನಾನ್ಸ್ ಪ್ರೈವೇಟ್ ಲಿಮಿಟೆಡ್),
ನೋಂದಾಯಿತ ಕಛೇರಿ: ಯೂನಿಟ್ ಸಂ. 305, 3ನೇ ಮಹಡಿ, ವಿಂಗ್ 2/ ಇ, ಕಾರ್ಪೊರೇಟ್ ಅವೆನ್ಯೂ, ಅಂಧೇರಿ- ಗೋಟಕ್‌ಪುರ್ ಲಿಂಕ್ ರಸ್ತೆ, ಚಾಕಲ, ಅಂಧೇರಿ (ಪೂರ್ವ), ಮುಂಬೈ- 400093.

2002 ರ ಹಣಕಾಸು ಆಸ್ತಿಗಳ ಭದ್ರತೆ ಮತ್ತು ಪುನರ್ ನಿರ್ಮಾಣ ಮತ್ತು ಭದ್ರತಾ ಹಿತಾಸಕ್ತಿ ಜಾರಿ ಕಾಯಿದೆಯ ಕಲಂ13(2) ರಡಿ ಸೂಚನೆ

NHFL ವಸತಿ ಆವರಣವನ್ನು ಅಡಮಾನವಾಗಿಟ್ಟುಕೊಂಡು ಈ ಕೆಳಗಿನ ಸಾಲಗಾರರಿಗೆ ಗೃಹ ಸಾಲ/ಅಡಮಾನ ಸಾಲ/ನಿರ್ಮಾಣ ಸಾಲವನ್ನು ಮಂಜೂರು ಮಾಡಿದೆ. ಈ ಸಾಲಗಳ ಮರುಪಾವತಿ ಅನಿಯಮಿತವಾಗಿದ್ದು, ನ್ಯಾಷನಲ್ ಹೌಸಿಂಗ್ ಬ್ಯಾಂಕ್/ಆರ್‌ಬಿಐ ನಿರ್ದೇಶನಗಳು ಮತ್ತು ಮಾರ್ಗಸೂಚಿಗಳಿಗೆ ಅನುಗುಣವಾಗಿ ಖಾತೆಗಳನ್ನು ಅಂತಿಮವಾಗಿ ಕಾರ್ಯನಿರ್ವಹಿಸದ ಆಸ್ತಿ ಎಂದು ವರ್ಗೀಕರಿಸಲಾಗಿದೆ.

NHFL ತನ್ನ ಹಕ್ಕುಗಳನ್ನು ಚಲಾಯಿಸಿದೆ ಮತ್ತು ಸರ್ಫೇಸಿ ಕಾಯಿದೆ ಕಾಯ್ದೆ, 2002 ರ ಸೆಕ್ಷನ್ 13(2) ರ ಅಡಿಯಲ್ಲಿ ನೋಟಿಸ್ ನೀಡಿದೆ ಮತ್ತು ಸಾಲಗಾರರು ಡಿಮ್ಯಾಂಡ್ ನೋಟಿಸ್ ದಿನಾಂಕದಿಂದ 60 ದಿನಗಳಲ್ಲಿ ಆಯಾ ಸಾಲಗಾರರ ವಿರುದ್ಧ ಉಲ್ಲೇಖಿಸಲಾದ ಒಟ್ಟು ಬಾಕಿಯನ್ನು ಮರುಪಾವತಿಸುವಂತೆ ಕರೆ ನೀಡಿದೆ. ಈ ಪ್ರಕಟಣೆಯು ಈ ಓಕೆಳಗಿನ ಸಾಲಗಾರರು ತಮ್ಮ ವಿರುದ್ಧ ಉಲ್ಲೇಖಿಸಲಾದ ಒಟ್ಟು ಬಾಕಿಗಳನ್ನು ಮತ್ತು ಸದರಿ ಡಿಮ್ಯಾಂಡ್ ನೋಟಿಸ್ ದಿನಾಂಕದಿಂದ 60 ದಿನಗಳಲ್ಲಿ ಪಾವತಿಯವರೆಗೆ ಸಂಗ್ರಹವಾದ ಹೆಚ್ಚುವರಿ ಶುಲ್ಕಗಳು ಮತ್ತು ಬಡ್ಡಿಯನ್ನು ಪಾವತಿಸಲು ಇಲ್ಲಿ ವಿನಂತಿಸಲಾಗಿದೆ, ಇಲ್ಲದಿದ್ದರೆ **NHFL** ಆಸ್ತಿಗಳನ್ನು ಸ್ವಾಧೀನಪಡಿಸಿಕೊಳ್ಳಲು, ಅದನ್ನು ವಿಲೇವಾರಿ ಮಾಡಲು/ಮಾರಾಟ ಮಾಡಲು ಮತ್ತು ಬಾಕಿ ಮೊತ್ತಕ್ಕೆ ವಿರುದ್ಧವಾಗಿ ಆದಾಯವನ್ನು ಸರಿಹೊಂದಿಸಲು ಎಲ್ಲಾ ಅಥವಾ ಯಾವುದೇ ಕಾನೂನು ಕ್ರಮಗಳನ್ನು ಕೈಗೊಳ್ಳಲಾಗುವುದು.

ಸಾಲಗಾರರು ಆಸ್ತಿಗಳ ಮಾಲೀಕತ್ವದ ಮೇಲೆ ಮೂರನೇ ವ್ಯಕ್ತಿಯ ಆಸಕ್ತರನ್ನು ದೂರವಿಡುವುದು ಅಥವಾ ಪ್ರವೇಶಿಸುವುದನ್ನು ನಿರ್ಬಂಧಿಸಲಾಗಿದೆ.

ಕ್ರ. ಸಂ.	ಸ್ಥಳ/ ಸಾಲದ ಖಾತಾ ಸಂಖ್ಯೆ	ಸಾಲಗಾರರ/ ಸಹ- ಸಾಲಗಾರರ/ ಜಾಮೀನುದಾರರ ಹೆಸರು	ಎನ್‌ಪಿಎ ದಿನಾಂಕ	ಡಿಮಾಂಡ್ ನೋಟೀಸ್‌ನಲ್ಲಿದ್ದಂತೆ ಮೊತ್ತ
1	ಬೆಂಗಳೂರು LNBAN0HL-05250057942	ಪ್ರತಾಪ್ ಎಸ್ (ಸಾಲಗಾರರು), ಶೃತಿ ವಿ (ಸಹ- ಸಾಲಗಾರರು),	09-ಏಪ್ರಿಲ್ 2026	16-ಏಪ್ರಿಲ್-2026 ರೂ. 31,00,625 15-ಏಪ್ರಿಲ್ 2026 ರಂದು ಇದ್ದಂತೆ

ಆಸ್ತಿಯ ವಿವರಣೆ: ''ಸಕಲ ಸಮಸ್ತವೂ ಸೇರಿದಂತೆ ಆಸ್ತಿ, ಪ್ಲಾಟ್ ಸಂ. 468, ಟೌನ್ ಮುನಿಸಿಪಾಲ್ ಖಾತಾ ಸಂ. 1563/468/138/468, ಒಟ್ಟಾರೆ ಅಳತೆ: 2,179.14 ಚದರ ಮೀಟರ್, (23,447,55 ಚದರ ಅಡಿ) ವಸತಿ ಪರಿರ್ತಿತ ಭೂಮಿಯ ಸರ್ವೆ ಸಂ. 117, ವಸತಿ ಉದ್ದೇಶಕ್ಕಾಗಿ ಪರಿರ್ತಿತ ಕಛೇರಿ ಆಜ್ಞಾಪನಾ ಸಂ. ಬಿಡಿಎಸ್/ಎಎಲ್‌ಎನ್/ಎಸ್‌ಆರ್/120/1997-98 ದಿನಾಂಕ 13.03.1998, ಕೆಂಚನಕುಪ್ಪೆ ಗ್ರಾಮ, ಬಿಡದಿ ಹೋಬಳಿ, ರಾಮನಗರ ತಾಲ್ಲೂಕು ಮತ್ತು ಬಿಎಂಆರ್‌ಡಿಎ ಯಿಂದ ಯೋಜನೆ ಅನುಮೋದನೆಯಾಗಿದ್ದು, ಚಕ್ಕುಬಂದಿ: ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ : ಪಾರ್ಕ್ ಮತ್ತು ದಾರಿ, ಉತ್ತರಕ್ಕೆ: ರಸ್ತೆ, ದಕ್ಷಿಣಕ್ಕೆ: ರಸ್ತೆ. ಷೆಡ್ಯೂಲ್ ಷೆಡ್ಯೂಲ್ 'ಬಿ' ಆಸ್ತಿ (ಕನ್ವೆ ಮಾಡಲಾದ ಯುನಿಟ್/ ಅಪಾರ್ಟ್‌ಮೆಂಟ್‌ನ ವಿವರಣೆ. ಒಂದು ಬೆಡ್‌ರೂಮ್‌ನ ಪ್ಲಾಟ್, ಸಂ. 107, ಮೊದನೇ ಮಹಡಿ ಕಟ್ಟಡ ಕೇಡರ್ ಕೋರ್ಟ್, ಖಾತಾ ಸಂ. 1563/468/ಎಫ್‌ಎಫ್ 107,ಪಿಐಡಿ ಸಂ. 5448696965 ಜೊತೆಗೆ ಸೂಪರ್ ನಿರ್ಮಿತ ಪ್ರದೇಶ 710 ಚದರ ಅಡಿ (65.961130 ಚದರ ಮೀಟರ್), (ಕಾರ್ಪೆಟ್ ಪ್ರದೇಶ 560 ಚದರ ಅಡಿ/ 52.025680 ಚದರ ಮೀಟರ್) ಸಮಾನುಪಾತದ ಪಾಲು, ಸಾಮಾನ್ಯದಾರಿ, ಲಬ್ಬೀಸ್, ಸ್ಟೇರ್‌ಕೇಸ್, ಲಿಫ್ಟ್, ಮತ್ತು ಸಾಮಾನ್ಯರು ಉಪ ಯೇಗಿಸಬಹುದು, ಜೊತೆಗೆ ಒಂದು ಮುಚ್ಚುದ ಕಾರ್ ಪಾರ್ಕಿಂಗ್ ಜಾಗ ಬೇಸ್‌ಮೆಂಟ್‌ನಲ್ಲಿದ್ದು, ಕಟ್ಟಡದ ಚಕ್ಕುಬಂದಿ: ಪೂರ್ವಕ್ಕೆ: ಪ್ಲಾಟ್ ಸಂ. 108, ಪಶ್ಚಿಮಕ್ಕೆ: ಪ್ಲಾಟ್ ಸಂ. 106, ಉತ್ತರಕ್ಕೆ: ರಸ್ತೆ, ದಕ್ಷಿಣಕೆ: ಕಾರಿಡಾರ್, ಷೆಡ್ಯೂಲ್ 'ಸಿ' ಆಸ್ತಿ: (ಕನ್ವೆ ಮಾಡಲಾದ ಅವಿಭಜಿತ ಪಾಲಿನ ಷೇರು ಷೆಡ್ಯೂಲ್ 'ಎ' ಆಸ್ತಿಯಲ್ಲಿದೆ) ಅವಿಭಜಿ 0.424% (ಜೀರೊ ಪಾಯಿಂಟ್ ನಲವತ್ತೆರಡು ಮತ್ತು ನಾಲ್ಕು) ಭೂಮಿಯ ಪಾಲು ಷೆಡ್ಯೂಲ್ 'ಎ' ಆಸ್ತಿ ಅಂದರೆ 311.85 ಚದರ ಅಡಿ (28.9718060 ಚದರ ಮೀಟರ್)''.

ದಿನಾಂಕ: 06.05.2026
ಸ್ಥಳ: ಕರ್ನಾಟಕ

ಸಹಿ/-
ಅಧಿಕೃತ ಅಧಿಕಾರಿ,
ನಿವಾಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್

ಸ್ವಾಧೀನ ಸೂಚನೆ

ಆದಾಗ್ಯೂ, ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್‌ನ ಅಧಿಕೃತ ಅಧಿಕಾರಿಯಾಗಿ, 2002ರ ಹಣಕಾಸು ಆಸ್ತಿಗಳ ಭದ್ರತೆ ಮತ್ತು ಪುನರ್ ನಿರ್ಮಾಣ ಹಾಗೂ ಭದ್ರತಾ ಹಿತಾಸಕ್ತಿ ಜಾರಿ ಕಾಯಿದೆ ಕಲಂ 13(2)ರ ಜೊತೆಗೆ ಓದಿಕೊಳ್ಳಬೇಕಾದ 2002ರ ಭದ್ರತಾ ಹಿತಾಸಕ್ತಿ (ಜಾರಿ) ನಿಯಮ 3ರಂತೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಕೆಳಕಂಡ ಸಾಲಗಾರ(ರು)/ಸಹ-ಸಾಲಗಾರ(ರು)ಗಳಿಗೆ **ಡಿಮಾಂಡ್ ನೋಟೀಸ್‌ಗಳನ್ನು** ಜಾರಿಮಾಡಿ ಅವರ ಹೆಸರುಗಳಿಗೆ ಎದುರಾಗಿ ಕೆಳಕಂಡಂತೆ ನಮೂದಿಸಲಾದ ಅಸಲು + ಅನ್ವಯಿಸುವ ದರದಂತೆ ಬಡ್ಡಿ ಸೇರಿದ ಬಾಕಿ ಮೊಬಲಗನ್ನು ಸದರಿ ನೋಟೀಸು ಸ್ವೀಕರಿಸಿದ ದಿನಾಂಕದಿಂದ ಜೊತೆಗೆ ಪಾವತಿಯಾಗುವ ದಿನಾಂಕದವರೆಗೆ ಮತ್ತು/ಅಥವಾ ಪೂರ್ತಿ ತೀರುವ ದಿನಾಂಕದವರೆಗೆ ತದನಂತರದ ಬಡ್ಡಿ, ಸಾಂದರ್ಭಿಕ ವೆಚ್ಚಗಳು, ಕಾಸ್ಟ್‌ಗಳು ಚಾರ್ಜು ಇತ್ಯಾದಿಗಳು ಸೇರಿದ ಮೊತ್ತವನ್ನು **60** ದಿನದೊಳಗೆ ಪಾವತಿ ಮಾಡಲು ಒತ್ತಾಯಿಸಿದ್ದರು.

ಕ್ರ. ಸಂ	ಸಾಲದ ಸಂಖ್ಯೆ	ಸಾಲಗಾರ/ಸಹ-ಸಾಲಗಾರ/ ಜಾಮೀನುದಾರ/ಅಡಮಾನದಾರ	13(2)ರ ನೋಟೀಸ್ ದಿನಾಂಕ/ ಬಾಕಿ ಮೊತ್ತ (ರೂ.) ದಿನಾಂಕದಂದು ಇದ್ದಂತೆ	ಸ್ವಾಧೀನದ ದಿನಾಂಕ/ಸಮಯ ಮತ್ತು ವಿಧ
1	30198642132453 & 30199410000029	1) ಮೆ॥ ಏಷ್ಯನ್ ಎಂಟರ್ ಪ್ರೈಸಸ್ ಇದರ ಪ್ರತಿನಿಧಿತ ಮಾಲೀಕರು ಶ್ರೀ ಶೇಖ್ ನಾಸೀರ್, 2) ಶ್ರೀ ಶೇಕ್ ನಾಸೀರ್, ಮೊಹಮ್ಮದ್ ಯೂಸಫ್ ರವರ ಮಗ, ಮಾಲೀಕರು: ಮೆ॥ ಏಷ್ಯನ್ ಎಂಟರ್ ಪ್ರೈಸಸ್, 3) ಶ್ರೀಮತಿ ಸೆಮ್ಮ ಕೌಸರ್	18-02-2026, ರೂ. 21,29,202.31 (ಇಪ್ಪತ್ತೊಂದು ಲಕ್ಷದ ಇಪ್ಪತ್ತೊಂಭತ್ತು ಸಾವಿರದ ಇನ್ನೂರ ಎರಡು ರೂ. ಮತ್ತು ಮೂವತ್ತೊಂದು ಪೈಸೆ ಗಳು ಮಾತ್ರ) ಬಾಕಿ 11-02-2026 ರಂದು ಇದಂತೆ	Date: 04/05/2026 Time: 05:33 PM ಸಾಂಕೇತಿಕ ಸ್ವಾಧೀನತೆ
	ಆಸ್ತಿಯ ವಿವರಣೆ : ಸಕಲ ಸಮಸ್ತವೂ ಸೇರಿದ ಸ್ಥಿರಾಸ್ತಿಯ ನಿವೇಶನ ಸಂ. 12, ಜಾರಕಬಂಡೆಕಾವಲ್ ಗ್ರಾಮ, ಯಲಹಂಕ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು, ಷೆಡ್ಯೂಲ್ ಭೂಮಿಗೆ ಜೋಡಿಸ ಲಾದ ಎಲ್ಲಾ ಸುಪ್ತ ಅಥವಾ ಪೇಟೆಂಟ್‌ನೊಂದಿಗೆ ಹಂಚಿಕೆ ಮಾಡಲಾಗಿದೆ. ಮತ್ತು ಚಕ್ಕುಬಂದಿ ಸರ್ವೆ ಸಂ. 58/1. ಪೂರ್ವಕ್ಕೆ: ಶೈಕ್ ಜಾನಿರವರ ನಿವೇಶನದ ಆಸ್ತಿ ಸಂ. 11, ಪಶ್ಚಿಮಕ್ಕೆ: ಶಾರದಮ್ಮರವರ ಆಸ್ತಿ, ಉತ್ತರಕ್ಕೆ: ಮುಕ್ತಿಯಾರ್‌ರವರ ಆಸ್ತಿ ಮತ್ತು 10 ಅಡಿ ರಸ್ತೆ, ದಕ್ಷಿಣಕ್ಕೆ: ಅನ್ಸಾರ್‌ರವರ ಆಸ್ತಿ.			
2	32509630000866	1) ಶ್ರೀ ಗೋವಿಂದರಾಜು ಜಿಸಿ 2) ಶ್ರೀಮತಿ ಶಾರದ	13-02-2026, ರೂ. 3,75,003.32 (ಮೂರು ಲಕ್ಷದ ಎಪ್ಪತ್ತೈದು ಸಾವಿರದ ಮೂರು ರೂ. ಮತ್ತು ಮೂವತ್ತೆರಡು ಪೈಸೆಗಳು ಮಾತ್ರ) ಬಾಕಿ 11-02-2026 ರಂದು ಇದಂತೆ	Date: 04/05/2026 Time: 01:45 PM ಸಾಂಕೇತಿಕ ಸ್ವಾಧೀನತೆ
	ಆಸ್ತಿಯ ವಿವರಣೆ : ಸಕಲ ಸಮಸ್ತವೂ ಸೇರಿದ ಸ್ಥಿರಾಸ್ತಿ ವಸತಿ ಆಸ್ತಿ ಸಂ. 158/1/158/2, ಕ್ರ.ಸಂ. 115, ಗೋಣಿಪುರ ಗ್ರಾಮ, ಕೆಂಗೇರಿ ಹೋಬಳಿ, ಬೆಂಗಳೂರು ಜಿಲ್ಲೆ, ಪ್ರಸ್ತುತ ಕೆ. ಗೊಲ್ಲಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿದ್ದು, ಮತ್ತು ಚಕ್ಕುಬಂದಿ: ಪೂರ್ವಕ್ಕೆ: ಸಣ್ಣಮ್ಮ ರವರ ಮನೆ, ಪಶ್ಚಿಮಕ್ಕೆ: 10 ಅಡಿ ರಸ್ತೆ, ಉತ್ತರಕ್ಕೆ: ಅಂಜಿನಪ್ಪ ರವರ ಮನೆ, ದಕ್ಷಿಣಕ್ಕೆ: ಮಂಜುನಾಥ ಜಿಸಿ ರವರ ಮನೆ. ಅಳತೆ: ಪೂರ್ವದಿಂದ ಪಶ್ಚಿಮಕ್ಕೆ: 90 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ: 12 ಅಡಿ.			
3	47469430001851 & 47469410001081	1) ಸರವಣ, ದಿವಂಗತ ಟಿ. ತಿಮ್ಮಯ್ಯರವರ ಮಗ, 2) ಶ್ರೀಮತಿ ಎಂ. ಅನುಸೂಯಮ್ಮ, ದಿವಗಂತ ಟಿ. ತಿಮ್ಮಯ್ಯರವರ ಪತ್ನಿ.	18-02-2026, ರೂ. 12,02,161.22 (ಹನ್ನೆರಡು ಲಕ್ಷದ ಎರಡು ಸಾವಿರದ ನೂರ ಅರವತ್ತೊಂದು ರೂ. ಇಪ್ಪತ್ತೆರ ಡು ಪೈಸೆ ಗಳು ಮಾತ್ರ) ಬಾಕಿ 11-02-2026 ರಂದು ಇದ್ದಂತೆ ಮತ್ತು ಬಡ್ಡಿ ಸೇರಿದಂತೆ.	Date: 04/05/2026 Time: 12:15 PM ಸಾಂಕೇತಿಕ ಸ್ವಾಧೀನತೆ
	ಆಸ್ತಿಯ ವಿವರಣೆ : ಸಕಲ ಸಮಸ್ತವೂ ಸೇರಿದ ಸ್ಥಿರಾಸ್ತಿ ಉತ್ತರ ಭಾಗದ ನಿವೇಶನ ಸಂ. 76, ಖಾತಾ ಸಂ. 31, ಸೊನ್ನೇನಹಳ್ಳಿ ಗ್ರಾಮ, ಕೆಂಗೇರಿ ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕು, ಪ್ರಸ್ತುತ ಬಿಬಿಎಂಪಿ, ಬೆಂಗಳೂರು ವ್ಯಾಪ್ತಿಯಲ್ಲಿದ್ದು, ಮತ್ತು ಚಕ್ಕುಬಂದಿ: ಪೂರ್ವಕ್ಕೆ: ನಿವೇಶನ ಸಂ. 111, ಪಶ್ಚಿಮಕ್ಕೆ: ರಸ್ತೆ, ಉತ್ತರಕ್ಕೆ: ಹಿಡುವಳಿ ಆಸ್ತಿ, ದಕ್ಷಿಣಕ್ಕೆ: ನಿವೇಶನ ಸಂ. 77ರ ದಕ್ಷಿಣ ಭಾಗದ ಉಳಿಕೆ ಆಸ್ತಿ. ಅಳತೆ: ಪೂರ್ವದಿಂದ ಪಶ್ಚಿಮಕ್ಕೆ: 30 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ: 20 ಅಡಿ			

ಆದಾಗ್ಯೂ, ಮೇಲೆ ತಿಳಿಸಿದ ಸಾಲಗಾರ(ರು) /ಸಹ-ಸಾಲಗಾರ(ರು) /ಜಾಮೀನುದಾರ(ರು)/ಅಡಮಾನದಾರ(ರು) ಬಾಕಿ ಮೊತ್ತವನ್ನು ಪಾವತಿ ಮಾಡುವಲ್ಲಿ ವಿಫಲರಾಗಿದ್ದು, ಈ ಮೂಲಕ ಮೇಲೆ ತಿಳಿಸಿದ ಸಾಲಗಾರರಿಗೆ ನಿರ್ದಿಷ್ಟವಾಗಿ ಮತ್ತು ಸಾರ್ವಜನಿಕರಿಗೆ ವಿಸ್ತಾರವಾಗಿ ತಿಳಿಯಪಡಿಸುವುದೇನೆಂದರೇ, ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್‌ನ ಅಧಿಕೃತ ಅಧಿಕಾರಿಯಾಗಿ ಸದರಿ ಕಾಯಿದೆಯ ಕಲಂ 13(4) ಮತ್ತು ಜೊತೆಗೆ ಓದಿಕೊಳ್ಳಬೇಕಾದ ನಿಯಮಗಳ ನಿಯಮ 8ರಂತೆ ಪ್ರದತ್ತವಾದ ಅಧಿಕಾರಗಳಂತೆ ಮೇಲೆ ತಿಳಿಸಿದ ಆಸ್ತಿಯನ್ನು / ಭದ್ರತಾ ಸ್ವತ್ತುಗಳನ್ನು ಮೇಲೆ ತಿಳಿಸಿದ ದಿನಾಂಕದಂದು ಸ್ವಾಧೀನತೆಗೆ ಪಡೆದುಕೊಂಡಿರುತ್ತಾರೆ. ಮೇಲೆ ತಿಳಿಸಿದ ಸಾಲಗಾರ(ರು)/ ಸಹ-ಸಾಲಗಾರರು/ ಜಾಮೀನುದಾರರು/ ಅಡಮಾನದಾರರಿಗೆ ನಿರ್ದಿಷ್ಟವಾಗಿ ಹಾಗೂ ಸಾರ್ವಜನಿಕರಿಗೆ ವಿಸ್ತಾರವಾಗಿ ನೀಡುವ ಎಚ್ಚರಿಕೆಯೇನೆಂದರೇ, ಮೇಲೆ ತಿಳಿಸಿದ ಆಸ್ತಿಗಳ/ ಭದ್ರತಾ ಸ್ವತ್ತುಗಳ ಬಗ್ಗೆ ಯಾರೂ ಯಾವುದೇ ರೀತಿಯಲ್ಲಿ ವ್ಯವಹರಿಸಬಾರದು, ಆದಾಗ್ಯೂ ವ್ಯವಹರಿಸಿದ್ದೇ ಆದರೆ ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್‌ಗೆ ಬಾಕಿಯಾಗಿರುವ ಮೊತ್ತಕ್ಕೆ ಬಾಧ್ಯರಾಗಬೇಕಾಗುತ್ತದೆ.

ಸ್ಥಳ : ಬೆಂಗಳೂರು	ಸಹಿ/- ಅಧಿಕೃತ ಅಧಿಕಾರಿ
ದಿನಾಂಕ : 05.05.2026	ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್ ಪರವಾಗಿ

ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ (ಒಂದು ಷೆಡ್ಯೂಲ್ ವಾಣಿಜ್ಯ ಬ್ಯಾಂಕ್)

ನೋಂದಾಯಿತ ಕಛೇರಿ : ದಿ ಫೇರ್‌ವೇ, ನೆಲ ಮತ್ತು ಮೊದಲನೇ ಮಹಡಿ, ಸರ್ವೆ ಸಂ. 10/1, 11/2 ಮತ್ತು 12/2ಬಿ, ದೊಮ್ಮಲೂರು ಪಕ್ಕ, ಕೋರಮಂಗಲ ಒಳ ವರ್ತುಲ ರಸ್ತೆ, ಇಜಿಎಲ್ ಬ್ಯುಸಿನೆಸ್ ಪಾರ್ಕ್ ನಂತರ, ಚಲ್ಲಘಟ್ಟ, ಬೆಂಗಳೂರು-560071.

IN THE SUPREME COURT OF INDIA

EXTRA-ORDINARY APPELLATE JURISDICTION SPECIAL LEAVE PETITION (CIVIL) No. 20358 OF 2025 WITH PRAYER FOR INTERIM RELIEF

KRISHNAMURTHY ...**Petitioner(s)/Appellant(s)**

VERSUS

NETHRAVATHI AND OTHERS .... **Respondent(s)**

To, 1 NETHRAVATHI D/O MUNIVENKATAPPA, R/O 137, 6TH CROSS, 2ND MAIN ROAD (MYSORE ROAD), ASHWATHAKATTE GARDEN, KASTURBA NAGAR, BANGALORE SOUTH GOVT. ELECTRIC FACTORY, KARNATAKA - 560026. — **PID: 115892/2026 FOR R[1] IN SLP(C) NO.20358/2025 (SEC IV-A)**

2 SAKAMMA D/O SRI MUNIVENKATAPPA, R/O 137, 6TH CROSS, 2ND MAIN ROAD (MYSORE ROAD), ASHWATHAKATTE GARDEN, KASTURBA NAGAR, BANGALORE SOUTH GOVT. ELECTRIC FACTORY, KARNATAKA - 560026 — **PID: 115893/2026 FOR R[3] IN SLP(C) NO.20358/2025 (SEC IV-A)**

WHEREAS the Petition for Special Leave to Appeal with prayer for interim relief along with application for **PERMISSION TO FILE ADDITIONAL DOCUMENTS/FACTS/ANNEXURES, EXEMPTION FROM FILING O.T., PERMISSION TO FILE ADDITIONAL DOCUMENTS/FACTS/ANNEXURES, EXEMPTION FROM FILING O.T.,** above mentioned filed in the Registry by **Ms. DIVYA SWAMI,** Advocate on behalf of the Petitioner(s) above named was listed for hearing before this Court on **01st August, 2025,** when the Court was pleased to pass the following order:-

"Issue notice to the respondents.

Additionally, parties to explore if the matter can be settled through mediation. There shall be status quo on possession."

AND WHEREAS, the matter above-mentioned was listed before **Ld. Registrar's Court on 24th April, 2026,** When the following order was passed:-

"Service is complete on respondent No.2 but none has entered appearance. Respondent Nos. 4 and 5 have already filed counter affidavit. Ld. Counsel for petitioner has filed an application for substituted service in respect of Respondent Nos. 1 and 3 by way of paper publication. Allowed.

Proof of publication be filed by Ld. Counsel for petitioner on or before 08.05.2026.

List again on 19.5.2026.

Copy of this Record of Proceedings be furnished to the concerned Learned Advocate-on-Record for information and compliance."

NOW, THEREFORE, TAKE NOTICE that the above petition with prayer for interim relief along with application for **PERMISSION TO FILE ADDITIONAL DOCUMENTS/FACTS/ANNEXURES, EXEMPTION FROM FILING O.T., PERMISSION TO FILE ADDITIONAL DOCUMENTS/FACTS/ ANNEXURES, EXEMPTION FROM FILING O.T.,** will be posted for hearing before this Court in due course and you may enter appearance before this Court either in person or through an advocate on record of this Court duly appointed by you in that behalf within 30 days from the date of service of notice. You may thereafter show cause to the Court on the day that may subsequently be specified as to why Special Leave Petition and interim relief as prayed be not granted and the resultant appeal be not allowed.

You may file your affidavit in opposition to the petition as provided under Rule 14(1) of Order XXI, S.C.R.2013 within 30 days from the date of receipt of notice or not later than 2 weeks before the date appointed for hearing, whichever be earlier, but shall do so only by setting out the grounds in opposition to the questions of law or grounds set out in the SLPs and may produce such pleadings and documents filed before the Court/Tribunal against whose order the SLP is filed and shall also set out the grounds for not granting interim order or for vacating interim order if already granted.

TAKE FURTHER NOTICE that if you fail to enter appearance as aforesaid, no further notice shall be given to you even after the grant of special leave for hearing of the resultant appeal and the matter above mentioned shall be disposed of in your absence.

Date: 30 April,2026 **ASSISTANT REGISTRAR**

Copy to :-
1. Ms. Divya Swami (adv.), 2. Mr. M. A. Chinnasamy (adv.)

Note: You are required to file Affidvit of Paper Publication along with Proof of Service well before the next date of listing.

ASSISTANT REGISTRAR

Important Notice
LEGAL AID

(1) Legal Services of an advocate is provided by the Supreme Court Legal Services Committee and the Supreme Court Middle Income Group Legal Aid Society to eligible litigants.

For further information, please contact the Secretary, Supreme Court Legal Services Committee or the Member Secretary, Supreme Court Middle Income Group Legal Aid Society, 107-108, Lawyers' Chambers, R.K. Jain Block Near Post Office, Supreme Court Compound, Tilak Marg, New Delhi-110001 (Tel Nos. 011-23116353,23116354 (Additional Building Complex) and 011-23381257 (Front Office))

MEDIATION

(2) The facility of amicable settlement of disputes by trained mediators in cases pending in the Supreme Court is now available in the Supreme Court. For further information, please contact the Coordinator, Supreme Court Mediation Centre, 109, Lawyers' Chambers, R.K. Jain Block Near Post Office, Supreme Court Compound, Tilak Marg, New Delhi-110001 (Tel No. 011-23071432)

ಸುರಭಿ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿಮಿಟೆಡ್.,

ನಂ.02, ಸುರಭಿ ಸಹಕಾರಿ ಸದನ, ಮೊದಲನೇ ಮಹಡಿ, 13ನೇ ಕ್ರಾಸ್, ಅತ್ತಿಮಬ್ಬೆ ರಸ್ತೆ, ಸಿ.ಟಿ. ಬೆಡ್ ಎಕ್ಸ್‌ಟೆನ್ಷನ್, ಬಿಎಸ್‌ಕೆ 2ನೇ ಹಂತ, ಬೆಂಗಳೂರು-560070, ದೂರವಾಣಿ : 080-26794511, ಮೊಬೈಲ್ ನಂ. 9742060295, 9606976569, 9606976572. ಇ-ಮೇಲ್: sscclt@ymail.com

ಡಿಮ್ಯಾಂಡ್ ನೋಟೀಸ್

ಸೆಕ್ಯೂರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮಗಳ 2002ರ ನಿಯಮ 3ರ ಅನ್ವಯ ಸೆಕ್ಯೂರಿಟೈಜೇಷನ್ ಅಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಶಿಯಲ್ ಅಸೆಟ್ಸ್ ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ 2002ರ ಅಡಿಯಲ್ಲಿ 13(2)ರ ಅಡಿಯಲ್ಲಿ.

ಕೆಳಸಹಿದಾರರು **ಸುರಭಿ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿಮಿಟೆಡ್.,** ನ ಅಧಿಕೃತ ಅಧಿಕಾರಿಯಾಗಿರುವುದರಿಂದ ಸೆಕ್ಯೂರಿಟೈಜೇಷನ್ ಅಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಶಿಯಲ್ ಅಸೆಟ್ಸ್ ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ 2002ರ ಅಡಿಯಲ್ಲಿ ಮತ್ತು ಸೆಕ್ಯೂರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮಗಳ 2002ರ ನಿಯಮ 3ರ ಅನ್ವಯ ಸೆಕ್ಷನ್ 13(12)ರ ಅಡಿಯಲ್ಲಿ ನಿಹಿತವಾದ ಅಧಿಕಾರಗಳನ್ನು ಚಲಾಯಿಸಿ ಡಿಮ್ಯಾಂಡ್ ನೋಟೀಸನ್ನು ನೀಡಿ ಈ ಕೆಳಗೆ ಪಟ್ಟಿ ಮಾಡಿರುವ ಸಾಲಗಾರರು ಕೆಳಗೆ ಕೊಟ್ಟಿರುವ ವಿವರಗಳ ಪ್ರಕಾರ ಡಿಮ್ಯಾಂಡ್ ನೋಟೀಸ್‌ಗಳಲ್ಲಿ ತಿಳಿಸಿರುವ ಮೊಬಲಗುಗಳನ್ನು ಪಾವತಿಸಲು ನೋಟೀಸಿನ ದಿನಾಂಕದಿಂದ 60 ದಿನಗಳ ಒಳಗಾಗಿ ಪಾವತಿ ಮಾಡಲು ಕರೆ ನೀಡಲಾಗಿದೆ. ಮೇಲೆ ತಿಳಿಸಿದ ನೋಟೀಸ್‌ಗಳ ಪ್ರತಿಗಳನ್ನು ಕೆಳಸಹಿದಾರರಿಂದ ಪಡೆಯಬಹುದು ಮತ್ತು ಕೆಳಗೆ ತಿಳಿಸಿದ ಸಾಲಗಾರರು ಇಚ್ಛೆ ಪಟ್ಟಲ್ಲಿ ಸಂಬಂಧಪಟ್ಟ ಪ್ರತಿಯನ್ನು ಕೆಳಸಹಿದಾರರಿಂದ ಯಾವುದೇ ಕೆಲಸದ ದಿನದಂದು ಕಛೇರಿಯ ಕೆಲಸದ ವೇಳೆಯಲ್ಲಿ ಪಡೆಯಬಹುದು.

ಮೇಲಿನದಕ್ಕೆ ಸಂಬಂಧಿಸಿದಂತೆ ಕೆಳಗೆ ತಿಳಿಸಿದ ಸಾಲಗಾರರಿಗೆ ಮತ್ತೊಮ್ಮೆ ನೋಟೀಸ್ ಪ್ರಕಟಗೊಂಡ ದಿನಾಂಕದಿಂದ 60 ದಿನಗಳ ಒಳಗಾಗಿ ಕೆಳಗೆ ಪರಸ್ಪರ ಹೆಸರುಗಳಲ್ಲಿ ಸೂಚಿಸಿದ ಮೊಬಲಗುಗಳನ್ನು ಕೆಳಗೆ ತಿಳಿಸಿದ ಸಾಲಗಾರರು ನಿರ್ವಹಿಸಲಾದ ಸಾಲದ ಒಪ್ಪಂದ ಮತ್ತು ಇತರ ದಸ್ತಾವೇಜು / ಬರಹಗಳು ಯಾವುದೇ ಇದ್ದಲ್ಲಿ ಇವುಗಳ ಅನ್ವಯ ಕೆಳಗೆ ತಿಳಿಸಿದ ದಿನಾಂಕಗಳಿಂದ ಹಣ ಪಾವತಿ ಮಾಡುವ ದಿನಾಂಕದವರೆಗೆ ಮತ್ತು / ಅಥವಾ ವಸೂಲಾಗುವವರೆಗೆ **ಸುರಭಿ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿಮಿಟೆಡ್.,** ಗೆ ಸಂದಾಯ ಮಾಡುವಂತೆ ನೋಟೀಸ್ ನೀಡಲಾಗಿದೆ. ವಿದ್ಯುಕ್ತವಾಗಿ ಸಾಲ ಮರುಪಾವತಿ ಮಾಡುವ ಬಗ್ಗೆ ಭದ್ರತೆಯಾಗಿ ಕೆಳಕಂಡ ಭದ್ರತೆ ಪಡೆದ ಆಸ್ತಿಗಳನ್ನು **ಸುರಭಿ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿಮಿಟೆಡ್.,ಗೆ** ಕೆಳಗೆ ತಿಳಿಸಿದ ಪರಸ್ಪರ ಸಾಲಗಾರರು ಅಡಮಾನ ಮಾಡಿರುತ್ತಾರೆ.

ಕ್ರ. ಸಂ.	ಸಾಲಗಾರರ ಹೆಸರು ಮತ್ತು ವಿಳಾಸ	ಬಾಕಿಯಿರುವ ಒಟ್ಟು ಮೊತ್ತ	ಡಿಮ್ಯಾಂಡ್ ನೋಟೀಸಿನ ದಿನಾಂಕ	ಸ್ಥಿರಾಸ್ತಿಗಳ/ಭದ್ರತಾ ಆಸ್ತಿಗಳ ವಿವರ
1	**ಮೆ॥ ಮೈಕ್ರೋಲೈಟ್ ಇಂಡಸ್ಟ್ರೀಸ್,** ಪ್ಲಾಟ್ ನಂ.98/ಕ್ಯೂ, ಜಿಗಣಿ ಇಂಡಸ್ಟ್ರಿಯಲ್ ಏರಿಯಾ, 2ನೇ ಹಂತ, ಆನೇಕಲ್ ತಾಲ್ಲೂಕು, ಬೆಂಗಳೂರು-562106. **ಮತ್ತೊಂದು ವಿಳಾಸ :** ನೆಲ ಮಹಡಿ, ಪ್ಲಾಟ್ ನಂ.32, ಬೊಮ್ಮಸಂದ್ರ ಇಂಡಸ್ಟ್ರಿಯಲ್ ಏರಿಯಾ, ಬೊಮ್ಮಸಂದ್ರ, ಬೆಂಗಳೂರು-560099 **ಪ್ರತಿನಿಧಿಸುವ ಪಾಲುದಾರರು : (1) ಶ್ರೀ ಎನ್ ಮಣಿಕಂಠನ್, (2) ಶ್ರೀ. ಉಲ್ಲಾಸ್ ಸುಗುಣನ್, (3) ಶ್ರೀಮತಿ. ಇಂದಿರಾ ಸುದರ್ಶನ್ (1) ಶ್ರೀ ರಾಧಾಕೃಷ್ಣನ್ ಮಣಿಕಂಠನ್ (ಪಾಲುದಾರರು ಮತ್ತು ಜಾಮೀನುದಾರರು),** ಬಿನ್ ಭಾಸ್ಕರನ್ ಪಿಳ್ಳೈ ರಾಧಾಕೃಷ್ಣನ್, ನಂ.41, ಹಾರ್ಮನಿ ಕ್ಲಾಸಿಕ್ ಆರ್ಚರ್ಡ್ಸ್, ಮೊದಲನೇ ಹಂತ, ಮೀನಾಕ್ಷಿ ದೇವಸ್ಥಾನದ ಹಿಂಭಾಗ, ಬನ್ನೇರುಘಟ್ಟ ರಸ್ತೆ, ಬೆಂಗಳೂರು-560076 **(2) ಶ್ರೀ ಉಲ್ಲಾಸ್ ಸುಗುಣನ್ (ಪಾಲುದಾರರು ಮತ್ತು ಜಾಮೀನುದಾರರು),** ಬಿನ್ ಸುಗುಣನ್ ಟಿ.ಕೆ. ಫ್ಲಾಟ್ ನಂ.3081, ಡಿ ಬ್ಲಾಕ್, 4ನೇ ಮಹಡಿ, ಪ್ರೆಸ್ಟೀಜ್ ನಾಟಿಂಗ್‌ಹಿಲ್, ಬನ್ನೇರುಘಟ್ಟ ರಸ್ತೆ, ಬೆಂಗಳೂರು-560076. **(3) ಶ್ರೀ.ರಾಹುಲ್ ಶಂಕರ್ ಶ್ರೀನಿವಾಸ್ (ಪಾಲುದಾರರು ಮತ್ತು ಜಾಮೀನುದಾರರು),** ಬಿನ್ ರಾಘವನ್ ಶ್ರೀನಿವಾಸ್, ಅಯ್ಯಪ್ಪ ಕೃಪಾ, ನಂ.137, 2ನೇ ಮೇನ್, 3ನೇ ಕ್ರಾಸ್, ಬಿಟಿಎಂ 2ನೇ ಹಂತ, ಬಿಟಿಎಂ ಡಾಲರ್ಸ್ ಲೇಔಟ್, ಬನ್ನೇರುಘಟ್ಟ ರಸ್ತೆ, ಬೆಂಗಳೂರು-560076 **(4) ಶ್ರೀ.ಸ್ನೇಹ ಸುದರ್ಶನ್ (ಪಾಲುದಾರರು ಮತ್ತು ಜಾಮೀನುದಾರರು),** ಕೋಂ ರಾಧಾಕೃಷ್ಣನ್ ಮಣಿಕಂಠನ್, ನಂ.41, ಹಾರ್ಮನಿ ಕ್ಲಾಸಿಕ್ ಆರ್ಚರ್ಡ್ಸ್, ಮೊದಲನೇ ಹಂತ, ಮೀನಾಕ್ಷಿ ದೇವಸ್ಥಾನದ ಹಿಂಭಾಗ, ಬನ್ನೇರುಘಟ್ಟ ರಸ್ತೆ, ಬೆಂಗಳೂರು-560076. **(5) ಶ್ರೀ. ಹರಿಕೃಷ್ಣನ್ ಆರ್ (ಪಾಲುದಾರರು ಮತ್ತು ಜಾಮೀನುದಾರರು),** ಬಿನ್ ರಾಧಾಕೃಷ್ಣನ್ ಬಿ, ನಂ.41, ಹಾರ್ಮನಿ ಕ್ಲಾಸಿಕ್ ಆರ್ಚರ್ಡ್ಸ್, ಮೊದಲನೇ ಹಂತ, ಮೀನಾಕ್ಷಿ ದೇವಸ್ಥಾನದ ಹಿಂಭಾಗ, ಬನ್ನೇರುಘಟ್ಟ ರಸ್ತೆ, ಬೆಂಗಳೂರು-560076. **ಜಾಮೀನುದಾರರು: (1) ಶ್ರೀ.ಆರ್ ಸುದರ್ಶನ್** ಬಿನ್ ಲೇಟ್ ಎಸ್ ಆರ್ ಪಿಳ್ಳೈ, ನಂ.99, 6ನೇ ಕ್ರಾಸ್, ಜೆ ಡಿ ಮರ ಹತ್ತಿರ, ಬಿಲೇಕಳ್ಳಿ, ಡಾಲರ್ಸ್ ಲೇಔಟ್, ಬನ್ನೇರುಘಟ್ಟ ರಸ್ತೆ, ಬೆಂಗಳೂರು-560076 **(2) ಶ್ರೀಮತಿ. ಇಂದಿರಾ ಸುದರ್ಶನ್,** ಕೋಂ ಆರ್ ಸುದರ್ಶನ್, ನಂ.99, 6ನೇ ಕ್ರಾಸ್, ಜೆ ಡಿ ಮರ ಹತ್ತಿರ, ಬಿಲೇಕಳ್ಳಿ, ಡಾಲರ್ಸ್ ಲೇಔಟ್, ಬನ್ನೇರುಘಟ್ಟ ರಸ್ತೆ, ಬೆಂಗಳೂರು-560076.	**ಸಾಲದ ಖಾತೆ ನಂ. Overdraft Loan A/c No. 00001000032 ರೂ. 8,60,05,919/-** ದಿನಾಂಕ **02.05.2026** ರಂದು ಇದ್ದಂತೆ	**02.05.2026** ಎನ್‌ಪಿಎ ದಿನಾಂಕ : **30.10.2023**	ಎಲ್ಲಾ ಭಾಗ ಮತ್ತು ವಿಭಾಗಗಳ ವಾಸಯೋಗ್ಯ ನಿವೇಶನದೊಂದಿಗೆ ಅದರ ಮೇಲಿನ ಟ್ರೆಸ್ ಮತ್ತು ಮನೆ/ಕಟ್ಟಡವನ್ನು ನಿರ್ಮಿಸಲು ಬೇಕಾದ ಮರಗಳು, ಜೊತೆಗೆ ಅದಕ್ಕೆ ಸಂಬಂಧಿಸಿದ ಎಲ್ಲಾ ಹಕ್ಕುಗಳು ಮತ್ತು ಬಾಧ್ಯತೆಗಳನ್ನೊಳಗೊಂಡಿರುವ ಮತ್ತು ಸ್ವಾಧೀನಪಡಿಸಿಕೊಂಡಿರುವ ಸ್ವತ್ತಿನ 99, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ರೂಪಿಸಲ್ಪಟ್ಟಿರುವ ಆಸ್ತಿಯು ಬಿಟಿಎಂ ಲೇಔಟ್, 2ನೇ ಹಂತ, 1ನೇ ಫೇಸ್, ಬಿಲೇಕಳ್ಳಿ ಡಾಲರ್ಸ್ ಸ್ಕೀಮ್, ಬೆಂಗಳೂರಿನಲ್ಲಿದ್ದು, ಹಿಂದಿನ ಬೊಮ್ಮನಹಳ್ಳಿ ಸಿಎಂಸಿ ಖಾತಾ ನಂ. 120, ಪ್ರಸ್ತುತ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಖಾತಾ ನಂ. 174/120/99, ಜೊತೆಗೆ ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 15.24 ಮೀಟರ್‌ಗಳು ಮತ್ತು ಉತ್ತರದಿಂದ ದಕ್ಷಿಣಕ್ಕೆ: 24.38 ಮೀಟರ್‌ಗಳು, ಒಟ್ಟು ವಿಸ್ತೀರ್ಣ 371.55 ಚದರ ಮೀಟರ್‌ಗಳು. ಜೊತೆಗೆ ಆಸ್ತಿಯು ಪ್ರಸ್ತುತ ಅಡವಾನ /ಮೊದಲನೇ ಪಾರ್ಟಿಯು ಸ್ವಾಧೀನದಲ್ಲಿದೆ ಮತ್ತು ಚಕ್ಕುಬಂದಿ : ಪೂರ್ವಕ್ಕೆ: ನಿವೇಶನ ನಂ. 100, ಪಶ್ಚಿಮಕ್ಕೆ: ನಿವೇಶನ ನಂ. 98, ಉತ್ತರಕ್ಕೆ: ರಸ್ತೆ, ದಕ್ಷಿಣಕ್ಕೆ: ನಿವೇಶನ ನಂ. 108.

* ಅನ್ವಯವಾಗುವಂತೆ ಮುಂಬರುವ ಬಡ್ಡಿ, ಸುಸ್ತಿಬಡ್ಡಿ ಪ್ರಾಸಂಗಿಕ ವೆಚ್ಚಗಳು, ಖರ್ಚುಗಳು, ಚಾರ್ಜ್‌ಗಳು ಇತ್ಯಾದಿ ಹಣ ಪಾವತಿ ಮತ್ತು / ಅಥವಾ ವಸೂಲಿ ದಿನಾಂಕದವರೆಗೆ ಭರಿಸಬೇಕಾಗುವುದು.

ಇದರೊಂದಿಗೆ ಮೇಲೆ ತಿಳಿಸಿದ ಸಾಲಗಾರರು ಪೂರ್ವೋಕ್ತ ರೀತಿಯಲ್ಲಿ **ಸುರಭಿ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿಮಿಟೆಡ್.,**ಗೆ ಹಣ ಪಾವತಿಸಲು ವಿಫಲರಾದಲ್ಲಿ ಆಗ **ಸುರಭಿ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿಮಿಟೆಡ್.,** ನವರು ಮೇಲೆ ತಿಳಿಸಿದ ಭದ್ರತೆ ಪಡೆದ ಆಸ್ತಿಗಳ / ಸ್ಥಿರಾಸ್ತಿಗಳ ವಿರುದ್ಧ ಸದರಿ ಕಾಯ್ದೆಯ ಸೆಕ್ಷನ್ 13(4)ರ ಅಡಿಯಲ್ಲಿ ಮತ್ತು ಅನ್ವಯವಾಗುವ ನಿಯಮಗಳ ಮೇರೆಗೆ ವೆಚ್ಚಗಳು ಮತ್ತು ಪರಿಣಾಮಗಳಿಗೆ ಸದರಿ ಸಾಲಗಾರರು ಸಂಪೂರ್ಣವಾಗಿ ಹೊಣೆಗಾರರಾಗಿರುವರು.

ಮೇಲೆ ತಿಳಿಸಿದ ಸಾಲಗಾರರು ಮೇಲೆ ತಿಳಿಸಿದ ಕಾಯ್ದೆಯ ಅಡಿಯಲ್ಲಿ ಪೂರ್ವೋಕ್ತ ಭದ್ರತೆ ಪಡೆದ ಆಸ್ತಿ / ಸ್ಥಿರಾಸಿಯನ್ನು **ಸುರಭಿ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿಮಿಟೆಡ್.,**ನ ಪೂರ್ವಾನುಮತಿಯನ್ನು ಲಿಖಿತವಾಗಿ ಪಡೆಯದೆ ಮಾರಾಟ, ಗುತ್ತಿಗೆ ಅಥವಾ ಬೇರಾವುದೇ ರೀತಿಯಲ್ಲಿ ಹಸ್ತಾಂತರ ಮಾಡದಂತೆ ನಿಷೇಧಿಸಲಾಗಿದೆ. ಅದರ ಪ್ರಕಾರ ಮಾಡಲಾದ ನಿಯಮಗಳು ಅಥವಾ ಕಾಯ್ದೆಯ ಉಪಬಂಧಗಳನ್ನು ಉಲ್ಲಂಘಿಸುವವರು ಕಾನೂನು ರೀತಿಯ ಬದ್ಧರಾಗಿರತಕ್ಕದ್ದು.

ದಿನಾಂಕ: 04.05.2026
ಸ್ಥಳ: ಬೆಂಗಳೂರು

ಸಹಿ/- ಅಧಿಕೃತ ಅಧಿಕಾರಿಗಳು & ಮುಖ್ಯ ಕಾರ್ಯನಿರ್ವಹಣಾಧಿಕಾರಿ
ಸುರಭಿ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿಮಿಟೆಡ್.,

HDFC BANK

ಹೆಚ್‌ಡಿಎಫ್‌ಸಿ ಬ್ಯಾಂಕ್ ಲಿಮಿಟೆಡ್

ನೋಂದಣಿ ಕಛೇರಿ : ಹೆಚ್‌ಡಿಎಫ್‌ಸಿ ಬ್ಯಾಂಕ್ ಹೌಸ್, ಸೇನಾಪತಿ ಬಾಪತ್ ಮಾರ್ಗ, ಲೋವರ್ ಪರೇಲ್ (ಪಶ್ಚಿಮ), ಮುಂಬೈ – 400013
ಶಾಖೆ: ನಂ.51, ಹೆಚ್‌ಡಿಎಫ್‌ಸಿ ಹೌಸ್, ಕಸ್ತೂರ್ಬಾ ರಸ್ತೆ, ಬೆಂಗಳೂರು-560001
ದೂರವಾಣಿ: 080-41183000 CIN L65920MH1994PLC080618 ವೆಬ್‌ಸೈಟ್: www.hdfcbank.com

ಇ-ಹರಾಜು ಮಾರಾಟ ಸೂಚನೆ (ಇ-ಬಿಡ್ಡಿಂಗ್ ಮೂಲಕ ಮಾತ್ರ ಮಾರಾಟ)

ಸೆಕ್ಯೂರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮಗಳು, 2002ರ ನಿಯಮ 8(6)ರ ನಿಬಂಧನೆಯೊಂದಿಗೆ ಓದಿಕೊಂಡು ಸೆಕ್ಯೂರಿಟೈಜೇಷನ್ ಅಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನ್ಯಾನ್ಷಿಯಲ್ ಅಸೆಟ್ಸ್ ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಆಕ್ಟ್, 2002ರ ಅಡಿಯಲ್ಲಿ ಸ್ಥಿರಾಸ್ತಿ ಸ್ವತ್ತುಗಳ ಮಾರಾಟಕ್ಕಾಗಿ ಇ-ಹರಾಜು ಮಾರಾಟ ಪ್ರಕಟಣೆ.

ಕೆಳಸಹಿದಾರರು **ಹೆಚ್‌ಡಿಎಫ್‌ಸಿ ಬ್ಯಾಂಕ್ ಲಿಮಿಟೆಡ್** ಇದರ ಅಧಿಕೃತ ಅಧಿಕಾರಿಯಾಗಿದ್ದು ಎನ್‌ಸಿಎಲ್‌ಟಿ-ಮುಂಬೈ, ದಿನಾಂಕ 17ನೇ ಮಾರ್ಚ್ 2023 ರಂದು ಜಾರಿಗೊಳಿಸಿದ ಆದೇಶದ ಪ್ರಕಾರ, **ಹೆಚ್‌ಡಿಎಫ್‌ಸಿ** ಲಿಮಿಟೆಡ್ ಅನ್ನು **ಹೆಚ್‌ಡಿಎಫ್‌ಸಿ** ಬ್ಯಾಂಕ್ ಲಿಮಿಟೆಡ್‌ಗೆ ವಿಲೀನಗೊಳಿಸಲಾಗಿದೆ. **(ಹೆಚ್‌ಡಿಎಫ್‌ಸಿ)** ಸೆಕ್ಯೂರಿಟೈಜೇಷನ್ ಅಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಸಿಯಲ್ ಅಸೆಟ್ಸ್ ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ 2002ರ ನಿಯಮ 8(6)ರ ನಿಬಂಧನೆಯೊಂದಿಗೆ 2002 ರ ಭದ್ರತಾ ಹಿತಾಸಕ್ತಿ ಕಾಯ್ದೆ, 2002 ರ ಭದ್ರತೆ ಮತ್ತು ಪುನರ್ನಿರ್ಮಾಣ ಅಡಿಯಲ್ಲಿ ಸ್ಥಿರ ಆಸ್ತಿಗಳನ್ನು ಓದಲಾಗುತ್ತದೆ.

ಈ ಮೂಲಕ ಸಾಮಾನ್ಯವಾಗಿ ಸಾರ್ವಜನಿಕರಿಗೆ ಮತ್ತು ಕಾಲಂ (ಎ)ನಲ್ಲಿ ಸೂಚಿಸಲಾದ ನಿರ್ದಿಷ್ಟವಾಗಿ ಸಾಲಗಾರ(ರು)ರಿಗೆ ಮತ್ತು ಜಾಮೀನುದಾರ(ರು)ರಿಗೆ ತಿಳಿಸುವುದೇನೆಂದರೆ ಈ ಕೆಳಗೆ ಕಾಲಂ (ಸಿ)ನಲ್ಲಿ ವಿವರಿಸಲಾದ ಸ್ಥಿರಾಸ್ತಿ ಸ್ವತ್ತು(ಗಳು)ನ್ನು ಸುರಕ್ಷಿತ ಸಾಲಗಾರರಿಗೆ ಅಡಮಾನ ಮಾಡಲಾಗಿದೆ, **ಹೆಚ್‌ಡಿಎಫ್‌ಸಿ** ಸುರಕ್ಷಿತ ಸಾಲಗಾರ ಇವರ ಅಧಿಕೃತ ಅಧಿಕಾರಿಯವರಿಂದ ಕಾಲಂ(ಡಿ) ನಲ್ಲಿ ವಿವರಿಸಿರುವಂತೆ ರಚನಾತ್ಮಕ / ಭೌತಿಕ ಸ್ವಾಧೀನವನ್ನು ತೆಗೆದುಕೊಳ್ಳಲಾಗಿದೆ, ಈ ಕೆಳಗೆ ತಿಳಿಸಿದ **ವಿವರಗಳ ಪ್ರಕಾರ" ಎಲ್ಲಿ ಹೇಗಿದೆಯೋ ಹಾಗೆ"** ಮತ್ತು **"ಎಲ್ಲಿ ಏನಿದೆಯೋ ಹಾಗೆ"** ಪ್ರಕಾರ ಮಾರಾಟ ಮಾಡಲಾಗುವುದು.

ಸೆಕ್ಯೂರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮಗಳು, 2002ರ ನಿಯಮ **8(6)**ರ ಅಡಿಯಲ್ಲಿ ಕಾಲಂ(ಎ)ನಲ್ಲಿ ಸೂಚಿಸಿದಂತೆ, ಸಾಲಗಾರ/ ಅಡಮಾನುದಾರ(ರು)/ ಕಾನೂನು ಉತ್ತರಾಧಿಕಾರಿಗಳು, ಕಾನೂನು ಪ್ರತಿನಿಧಿಗಳು (ತಿಳಿದಿರುವ ಅಥವಾ ತಿಳಿದಿಲ್ಲದವರು), ಕಾರ್ಯನಿರ್ವಾಹಕ(ರು), ನಿರ್ವಾಹಕರು(ಗಳು), ಉತ್ತರಾಧಿಕಾರಿ(ಗಳು) ಮತ್ತು ಆಯಾ ಸಾಲಗಾರ(ರು)/ ಅಡಮಾನುದಾರ(ರು) (ಸತ್ತ ನಂತರ)ದ ನಿಯೋಜಕ(ರು), ಪ್ರಕರಣದಂತೆ ಈ ಮೂಲಕ ಸೂಚನೆಯನ್ನು ನೀಡಲಾಗಿದೆ.

ಮಾರಾಟದ ವಿವರವಾದ ನಿಯಮಗಳು ಮತ್ತು ಷರತ್ತುಗಳಿಗಾಗಿ, ದಯವಿಟ್ಟು ಸುರಕ್ಷಿತ ಸಾಲಗಾರರ ವೆಬ್‌ಸೈಟ್‌ನಲ್ಲಿ ಅಂದರೆ **www.hdfcbank.com** ರಲ್ಲಿ ಒದಗಿಸಲಾದ ಲಿಂಕ್‌ಅನ್ನು ನೋಡಿ.

	(ಎ)	(ಬಿ)	(ಸಿ)	(ಡಿ&ಇ)	(ಎಫ್&ಜಿ)
ಕ್ರ. ಸಂ	ಸಾಲಗಾರರ/ ಜಾಮೀನುದಾರರ/ ಅಡಮಾನುದಾರರ ಹೆಸರು	ಬಾಕಿ ಮೊತ್ತ (ಭದ್ರತಾ ಸಾಲ) (ರೂ.ಗಳಲ್ಲಿ)*	ಸ್ಥಿರಾಸ್ತಿ/ಭದ್ರತಾ ಆಸ್ತಿಗಳ ವಿವರಗಳು ಮತ್ತು ಮೀಸಲು ಬೆಲೆ (1 ಚ.ಮೀ ಅಂದರೆ 10.76 ಚ.ಅಡಿ)	ಹರಾಜಿನ ದಿನಾಂಕ ಮತ್ತು ಸಮಯ -------- ಸ್ವಾಧೀನದ ಪ್ರಕಾರ	ಮೀಸಲು ಬೆಲೆ (ರೂ.) -------- ಇಎಂಡಿ ಮೊತ್ತ (ರೂ.)
1	ಶ್ರೀಮತಿ ಶರಣ್ಯ ಅಶೋಕ್ ಜೆ (ಸಾಲಗಾರರು) ಶ್ರೀ ಅಶೋಕ್ ಕುಮಾರ್ ಎಂ ಬಿ (ಸಹ-ಸಾಲಗಾರರು)	ಸಾಲ ಖಾತೆ ಸಂಖ್ಯೆ: 638957997 ರೂ.76,57,914/- (ರೂಪಾಯಿ ಎಪ್ಪತ್ತಾರು ಲಕ್ಷದ ಐವತ್ತೇಳು ಸಾವಿರದ ಒಂಬೈನೂರ ಹದಿನಾಲ್ಕು ಮಾತ್ರ) ದಿನಾಂಕ 31.12.2023 ರಂದು ಇದ್ದಂತೆ	**ಷೆಡ್ಯೂಲ್ ಎ:** ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಆಸ್ತಿಯ **ಸರ್ವೆ ನಂ. 57/4 (ಮುನಿಸಿಪಲ್ ನಂ.29/57/4)** ವಿಸ್ತೀರ್ಣ 3 ಎಕರೆ 36 ಗುಂಟೆಗಳು, ಅಂಜನಾಪುರ ಗ್ರಾಮ, ಉತ್ತರಹಳ್ಳಿ ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕಿನಲ್ಲಿದೆ ಮತ್ತು ಚಕ್ಕುಬಂದಿ: **ಪೂರ್ವಕ್ಕೆ:** ಶ್ರೀ ಕೃಷ್ಣಪ್ಪರವರ ಆಸ್ತಿ, ಪ್ರಸ್ತುತ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ; **ಪಶ್ಚಿಮಕ್ಕೆ:** ಕೃಷ್ಣಪ್ಪ ರವರಿಗೆ ಸೇರಿದ ಸರ್ವೆ ನಂ.57/4 ರ ಉಳಿದ ಭಾಗ, ಪ್ರಸ್ತುತ ಎಚ್.ಕೆ.ಶಕುಂತಲಾ ರವರ ಹೆಸರಿನಲ್ಲಿದೆ, ಪ್ರಸ್ತುತ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ; **ಉತ್ತರಕ್ಕೆ :** ಕಂಚಿ ವರದಪ್ಪರವರ ಜಮೀನು ಮತ್ತು ಹನುಮಂತದೇವರ ಇನಾಮತಿ ಜಮೀನು, ಪ್ರಸ್ತುತ ವಾಟರ್ ಡ್ರೈನ್ ಮತ್ತು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ; **ದಕ್ಷಿಣಕ್ಕೆ:** ಖಾಸಗಿ ಆಸ್ತಿ. **ಷೆಡ್ಯೂಲ್ ಬಿ: 695 ಚದರ ಅಡಿ** ಅವಿಭಾಜಿತ ಪಾಲು ಷೆಡ್ಯೂಲ್ ಎ ಆಸ್ತಿಯಲ್ಲಿದೆ, ಷೆಡ್ಯೂಲ್ ಬಿ ನಲ್ಲಿ ಹೆಚ್ಚು ಸಂಪೂರ್ಣವಾಗಿ ವಿವರಿಸಲಾಗಿದೆ ಮತ್ತು ಮೂರು ಬೆಡ್‌ರೂಮ್ ಹೊಂದಿರುವ ಅಪಾರ್ಟ್‌ಮೆಂಟ್ **ನಂ.802, 8ನೇ ಮಹಡಿ, ಬ್ಲಾಕ್ ಜಾಡೆ** ಅನ್ನು ಷೆಡ್ಯೂಲ್ 'ಎ' ಭಾಗದಲ್ಲಿ ನಿರ್ಮಿಸಲಾಗುವುದು, 1,618.15 ಚದರ ಅಡಿಗಳ ಕಾರ್ಪೆಟ್ ಪ್ರದೇಶವನ್ನು ಹೊಂದಿರುವ ಆಸ್ತಿ (PRM/KA/RERA/1251/310/PR/180917/002010) ಯೋಜನೆಯ ಭಾಗವಾಗಿ **"MAANGLAYA PROSPER SIGNATURE BLOCK"** ಎಂದು ಹೆಸರಿಸಲಾಗಿದೆ, ಮತ್ತು ವಿನ್ಯಾಸಗೊಳಿಸಲಾಗಿದೆ. ಚಕ್ಕುಬಂದಿ: **ಪೂರ್ವಕ್ಕೆ:** ಲಾಬಿ, **ಪಶ್ಚಿಮಕ್ಕೆ:** ಓಪನ್ ಸ್ಪೇಸ್, **ಉತ್ತರಕ್ಕೆ :** ಫ್ಲಾಟ್ ಸಂಖ್ಯೆ ಜೆ 803, **ದಕ್ಷಿಣಕ್ಕೆ :** ಓಪನ್ ಸ್ಪೇಸ್.	ದಿನಾಂಕ: 22.06.2026 ಮಧ್ಯಾಹ್ನ 12.00 ರಿಂದ 12.30ರ ವರೆಗೆ -------- ಭೌತಿಕವಾಗಿ	ರೂ 91,60,000/- (ರೂಪಾಯಿ ತೊಂಭತ್ತೊಂದು ಲಕ್ಷದ ಅರವತ್ತು ಸಾವಿರ ಮಾತ್ರ) -------- ರೂ.9,16,000/- (ರೂಪಾಯಿ ಒಂಭತ್ತು ಲಕ್ಷದ ಹದಿನಾರು ಸಾವಿರ ಮಾತ್ರ)
2	ಶ್ರೀ ಹಸ್ಸನ್ ಸಲೀಮ್ (ಸಾಲಗಾರರು)	ಸಾಲದ ಖಾತೆ ಸಂಖ್ಯೆ 617922965 ರೂ.18,27,764/- (ರೂಪಾಯಿ ಹದಿನೆಂಟು ಲಕ್ಷದ ಇಪ್ಪತ್ತೇಳು ಸಾವಿರದ ಏಳುನೂರ ಅರವತ್ತನಾಲ್ಕು ಮಾತ್ರ) ದಿನಾಂಕ 31.05.2018 ರಂದು ಇದ್ದಂತೆ	**'ದಿ ಗ್ರೀನ್ಸ್'** ಎಂದು ಕರೆಯಲ್ಪಡುವ ವಸತಿ ಸಂಕೀರ್ಣದ ಡಿ ಟವರ್‌ನ MAPLE ಬ್ಲಾಕ್‌ನ 6ನೇ ಮಹಡಿಯಲ್ಲಿರುವ ಅಪಾರ್ಟಮೆಂಟ್‌ನ ಫ್ಲಾಟ್ **ಸಂಖ್ಯೆ 604,** ಇದು ಎರಡು ಬೆಡ್ ರೂಂಗಳನ್ನು ಹೊಂದಿದ್ದು, **69.68 ಚ.ಮೀಟರ್** ಸೂಪರ್ ಬಿಲ್ಟ್ ಅಪ್ ಪ್ರದೇಶವನ್ನು ಹೊಂದಿದೆ, ಅದೇ ವಸತಿ ಸಂಕೀರ್ಣ ಜಾಗದಲ್ಲಿ ನಂ.604 ಹೊಂದಿರುವ ಒಂದು ತೆರೆದ ಕಾರ್ ಪಾರ್ಕಿಂಗ್ ಸ್ಥಳ ಮತ್ತು **28.24 ಚದರ ಮೀಟರ್** ವಿಸ್ತೀರ್ಣದ ಯುಡಿಎಸ್ [ಕಟ್ಟಡ ನಿರ್ಮಿಸಲಾದ ಭೂಮಿಯಲ್ಲಿ ಅವಿಭಾಜಿತ ಪಾಲು ಹಕ್ಕು ಶೀರ್ಷಿಕೆ ಮತ್ತು ಹಿತಾಸಕ್ತಿಯನ್ನು ಹೊಂದಿದೆ] ಇದು ಕರ್ಪೂರ್ ಗ್ರಾಮದ ಸರ್ವೆ ನಂ. 33,35/3,35/4,174 ಮತ್ತು ಬಿದರಗೆರೆ ಗ್ರಾಮ, ಕಸಬಾ ಹೋಬಳಿ, ಆನೇಕಲ್ ತಾಲ್ಲೂಕು, ಬೆಂಗಳೂರಿನ ಸರ್ವೆ ನಂ.224,184/5 ಮತ್ತು 189 ಹೊಂದಿರುವ ಭೂಮಿಯಲ್ಲಿ ನಿರ್ಮಿಸಲಾಗಿದೆ.	ದಿನಾಂಕ: 22.06.2026 ಮಧ್ಯಾಹ್ನ 12 ರಿಂದ 12.30ರ ವರೆಗೆ -------- ಭೌತಿಕವಾಗಿ	ರೂ.20,70,000/- [ರೂಪಾಯಿ ಇಪ್ಪತ್ತು ಲಕ್ಷದ ಎಪ್ಪತ್ತು ಸಾವಿರ ಮಾತ್ರ] -------- ರೂ.2,07,000/- [ರೂಪಾಯಿ ಎರಡು ಲಕ್ಷದ ಏಳು ಸಾವಿರ ಮಾತ್ರ]
3	ಶ್ರೀ ವೆಂಕಟೇಶ್ ಎಸ್ (ಸಾಲಗಾರರು)	ಸಾಲ ಖಾತೆ ಸಂಖ್ಯೆ: 614778967 ರೂ.8,71,028/- (ರೂಪಾಯಿ ಎಂಟು ಲಕ್ಷದ ಎಪ್ಪತ್ತೊಂದು ಸಾವಿರದ ಇಪ್ಪತ್ತೆಂಟು ಮಾತ್ರ) ದಿನಾಂಕ 16.09.2025 ರಂದು ಇದ್ದಂತೆ	ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಸ್ಥಿರಾಸ್ತಿಯ ವಸತಿ ಅಪಾರ್ಟ್‌ಮೆಂಟ್ ಫ್ಲಾಟ್ **ನಂ.303-ಬಿ5,** 3ನೇ ಮಹಡಿಯ ಬ್ಲಾಕ್ ಬಿ5 ಆಲೂರು ಲೇಔಟ್‌ನಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಅಭಿವೃದ್ಧಿಪಡಿಸಿದ ಬಿಡಿಎ ಫ್ಲಾಟ್‌ಗಳು, ಇದು **44 ಚ.ಮೀಟರ್ಸ್** (473.44 ಚದರ ಅಡಿ) ಸೂಪರ್ ಬಿಲ್ಟ್ ಅಪ್ ಪ್ರದೇಶವನ್ನು ಮತ್ತು 40 ಚದರ ಮೀಟರ್ (430.4 ಚದರ ಅಡಿ) ಕಾರ್ಪೆಟ್ ಪ್ರದೇಶವನ್ನು ಹೊಂದಿದೆ ಮತ್ತು ಇದು ಸರ್ವೆ ನಂ.113, ಯಲಹಂಕದ ಗ್ರಾಮ, ಆಲೂರು, ಯಲಹಂಕ, ಬೆಂಗಳೂರಿನಲ್ಲಿದೆ.	ದಿನಾಂಕ: 22.06.2026 ಮಧ್ಯಾಹ್ನ 12 ರಿಂದ 12.30ರ ವರೆಗೆ -------- ಭೌತಿಕವಾಗಿ	ರೂ.11,70,000/- [ರೂಪಾಯಿ ಹನ್ನೊಂದು ಲಕ್ಷದ ಎಪ್ಪತ್ತು ಸಾವಿರ ಮಾತ್ರ] -------- ರೂ.1,17,000/- [ರೂಪಾಯಿ ಒಂದು ಲಕ್ಷದ ಹದಿನೇಳು ಸಾವಿರ ಮಾತ್ರ]
4	ಶ್ರೀ ದಾಸ್ ಸುಜೋಯ್ (ಸಾಲಗಾರರು)	ಸಾಲ ಖಾತೆ ಸಂಖ್ಯೆ 1) 629860479 ರೂ.24,62,255/- 2) 630168479 ರೂ. 85,676/- 3) 657416477 ರೂ.2,66,106/- ಒಟ್ಟು ಮೊತ್ತ ರೂ.28,14,037/- (ರೂಪಾಯಿ ಇಪ್ಪತ್ತೆಂಟು ಲಕ್ಷದ ಹದಿನಾಲ್ಕು ಸಾವಿರದ ಮೂವತ್ತೇಳು ಮಾತ್ರ) ದಿನಾಂಕ 31.05.2025ರಂದು ಇದ್ದಂತೆ.	**ಷೆಡ್ಯೂಲ್ ಎ:** (1) ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಸ್ಥಿರಾಸ್ತಿಯನ್ನು ಒಳಗೊಂಡಿರುವ ಮಡಿವಾಳ (ಬಂಡಾಪುರ) ಗ್ರಾಮ, ಮರಸೂರು ಅಂಚೆ, ಕಸಬಾ ಹೋಬಳಿ, ಆನೇಕಲ್ ತಾಲ್ಲೂಕು, ಬೆಂಗಳೂರು ಜಿಲ್ಲೆಯ ಸರ್ವೆ ಸಂಖ್ಯೆ 168 ಸಂಪೂರ್ಣವಾಗಿ ಎರಡು ಎಕರೆಗಳಷ್ಟು ವಿಸ್ತೀರ್ಣವನ್ನು ಹೊಂದಿದೆ ಮತ್ತು ಈ ಕೆಳಗಿನಂತೆ ಚಕ್ಕುಬಂದಿ; **ಪೂರ್ವಕ್ಕೆ:** ರಸ್ತೆ; **ಪಶ್ಚಿಮಕ್ಕೆ:** ಖಾಸಗಿ ಆಸ್ತಿ; **ಉತ್ತರಕ್ಕೆ:** ಸರ್ವೆ ಸಂಖ್ಯೆ 169; **ದಕ್ಷಿಣಕ್ಕೆ:** ಭೂಮಿಯ ಉಳಿದ ಭಾಗ ಸರ್ವೆ ಸಂಖ್ಯೆ 168. (2) ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಸ್ಥಿರಾಸ್ತಿಯನ್ನು ಒಳಗೊಂಡಿರುವ ಬೆಂಗಳೂರು ಜಿಲ್ಲೆಯ ಆನೇಕಲ್ ತಾಲ್ಲೂಕಿನ ಕಸಬಾ ಹೋಬಳಿಯ ಮರಸೂರ್ ಪೋಸ್ಟ್‌ನ ಮಡಿವಾಳ (ಬಂಡಾಪುರ) ಗ್ರಾಮದ ಸರ್ವೆ ಸಂಖ್ಯೆ 169 ಒಟ್ಟು 31 ಗುಂಟೆ ಅಳತೆ (ಯೋಜನೆಗೆ ಬಳಸಲಾದ ಕೇವಲ 18 ಗುಂಟೆಗಳು) ಹೊಂದಿದೆ ಮತ್ತು ಈ ಕೆಳಗಿನಂತೆ ಚಕ್ಕುಬಂದಿ: **ಪೂರ್ವಕ್ಕೆ:** ರಸ್ತೆ **ಪಶ್ಚಿಮಕ್ಕೆ:** ಖಾಸಗಿ ಆಸ್ತಿ; **ಉತ್ತರಕ್ಕೆ:** ಸರ್ವೆ ಸಂಖ್ಯೆ 169 ರಲ್ಲಿ ಉಳಿದಿರುವ ಭೂಮಿಯ ಭಾಗ; **ದಕ್ಷಿಣಕ್ಕೆ:** ಸರ್ವೆ ಸಂಖ್ಯೆ 168 ರಲ್ಲಿ ಗೌರಮ್ಮ ಅವರ ಭೂಮಿಯ ಉಳಿದ ಭಾಗ. **ಷೆಡ್ಯೂಲ್ ಬಿ:** ಪಶ್ಚಿಮ ದಿಕ್ಕಿನ, **"ಸಿಪಾನಿ ಜಾರ್ಡಿನ್"** ಎಂದು ಕರೆಯಲ್ಪಡುವ ವಸತಿ ಅಪಾರ್ಟ್‌ಮೆಂಟ್ ಸಂಕೀರ್ಣದ ಬ್ಲಾಕ್ "ಸಿ" ನ ಮೊದಲನೇ ಮಹಡಿಯಲ್ಲಿರುವ ಅಪಾರ್ಟ್‌ಮೆಂಟ್ ಸಂಖ್ಯೆ 109, ಷೆಡ್ಯೂಲ್ "ಎ" ಆಸ್ತಿಯಲ್ಲಿ ನಿರ್ಮಿಸಲಾಗಿದೆ, ಇದು **65.49 ಚದರ ಮೀಟರ್** ಕಾರ್ಪೆಟ್ ಪ್ರದೇಶ (705 ಚದರ ಅಡಿ) ಮತ್ತು **85.93 ಚದರ ಮೀಟರ್** (925 ಚದರ ಅಡಿ) ಸೂಪರ್ ಬಿಲ್ಟ್-ಅಪ್ ಪ್ರದೇಶವನ್ನು ಹೊಂದಿದೆ, ಎರಡು ಮಲಗುವ ಕೋಣೆಗಳು, ಹಾಲ್, ಅಡುಗೆಮನೆ, ಬಾಲ್ಕನಿಗಳು ಮತ್ತು ಶೌಚಾಲಯಗಳು ಮತ್ತು 3.25 ಚದರ ಮೀಟರ್ (35 ಚದರ ಅಡಿ) ಉದ್ಯಾನ ಪ್ರದೇಶ ಮತ್ತು 40.17 ಚದರ ಮೀಟರ್ (432.39 ಚದರ ಅಡಿ) ಅವಿಭಾಜಿತ ಪಾಲು, ಶೀರ್ಷಿಕೆ ಮತ್ತು ಹಿತಾಸಕ್ತಿಯನ್ನು, ಷೆಡ್ಯೂಲ್ ಎ ಆಸ್ತಿಯಲ್ಲಿ ಒಳಗೊಂಡಿರುವ ಭೂಮಿಯಲ್ಲಿ ಒಳಗೊಂಡಿದೆ, ಸ್ಟಿಲ್ಟ್ ಮಹಡಿಯಲ್ಲಿ **ಒಂದು ಮುಚ್ಚಿದ ಕಾರ್ ಪಾರ್ಕಿಂಗ್** ಸ್ಥಳ ಮತ್ತು ಪ್ಯಾಸೇಜ್‌ಗಳು, ಲಾಬಿಗಳು, ಲಿಫ್ಟ್‌ಗಳು, ಮೆಟ್ಟಿಲುಗಳು ಮತ್ತು ಇತರ ಸಾಮಾನ್ಯ ಸೌಲಭ್ಯಗಳಂತಹ ಸಾಮಾನ್ಯ ಪ್ರದೇಶಗಳಲ್ಲಿ ಅನುಪಾತದ ಆಸಕ್ತಿಯನ್ನು ಹೊಂದಿದೆ. ಪಿಐಡಿ ಸಂಖ್ಯೆ **150200101800622575.**	ದಿನಾಂಕ: 22.06.2026 ಮಧ್ಯಾಹ್ನ 12 ರಿಂದ 12.30ರ ವರೆಗೆ -------- ಭೌತಿಕವಾಗಿ	ರೂ.31,50,000/- (ರೂಪಾಯಿ ಮೂವತ್ತೊಂದು ಲಕ್ಷದ ಐವತ್ತು ಸಾವಿರ ಮಾತ್ರ) -------- ರೂ.3,15,000/- (ರೂಪಾಯಿ ಮೂರು ಲಕ್ಷದ ಹದಿನೈದು ಸಾವಿರ ಮಾತ್ರ)
5	ಶ್ರೀ. ದಾಸ್ ಧನೇಶ್ (ಸಾಲಗಾರರು) ಶ್ರೀಮತಿ ಗೋಪಾಲಕೃಷ್ಣನ್ ರೇಷ್ಮಾ (ಸಹ-ಸಾಲಗಾರರು)	ಸಾಲ ಖಾತೆ ಸಂಖ್ಯೆ 666799574 ರೂ.59,99,705/- (ರೂಪಾಯಿ ಐವತ್ತೊಂಭತ್ತು ಲಕ್ಷದ ತೊಂಭತ್ತೊಂಭತ್ತು ಸಾವಿರದ ಏಳುನೂರ ಐದು ಮಾತ್ರ) ದಿನಾಂಕ 31.05.2025 ರಂದು ಇದ್ದಂತೆ.	**ಷೆಡ್ಯೂಲ್ ಆಸ್ತಿ:** ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಪರಿವರ್ತಿತ ಆಸ್ತಿಯ ಇ-ಖಾತಾ ನಂ.150200102500420023 (ಹಳೆಯ ವಿ.ಪಿ. ಖಾತಾ ಸಂಖ್ಯೆ 2296/ 111/1 111/2 153 152 160 164), ಸರ್ವೆ ನಂ.152ರ ವಿಸ್ತೀರ್ಣ 25 ಗುಂಟೆಗಳು, ಸರ್ವೆ ನಂ.153ರ ವಿಸ್ತೀರ್ಣ 1 ಎಕರೆ, ಸರ್ವೆ ನಂ. 160ರ ವಿಸ್ತೀರ್ಣ 1 ಎಕರೆ 10 ಗುಂಟೆಗಳು, ಸರ್ವೆ ನಂ.111/1 ರ ವಿಸ್ತೀರ್ಣ 5 ಎಕರೆ 24 ಗುಂಟೆಗಳು, ಸರ್ವೆ ನಂ. 111/2ರ ವಿಸ್ತೀರ್ಣ 2 ಎಕರೆ 12 ಗುಂಟೆಗಳು, ಇದು ಸುರಗಜಕ್ಕನಹಳ್ಳಿ ಗ್ರಾಮ, ಕಸಬಾ ಹೋಬಳಿ, ಆನೇಕಲ್ ತಾಲ್ಲೂಕಿನಲ್ಲಿದೆ, ಮತ್ತು ಸರ್ವೆ ನಂ.164ರ ವಿಸ್ತೀರ್ಣ 20 ಗುಂಟೆಗಳು ಸಿಡಿ ಹೊಸಕೋಟೆ ಗ್ರಾಮ, ಕಸಬಾ ಹೋಬಳಿ, ಆನೇಕಲ್ ತಾಲ್ಲೂಕಿನಲ್ಲಿದೆ, ಒಟ್ಟು ವಿಸ್ತೀರ್ಣ 11 ಎಕರೆಗಳು 11 ಗುಂಟೆಗಳು. ಚಕ್ಕುಬಂದಿ: **ಪೂರ್ವಕ್ಕೆ:** ಹೊನ್ನಕಳಸಾಪುರ ಮತ್ತು ಸಿಡಿ ಹೊಸಕೋಟೆ ಗ್ರಾಮಗಳ ಗಡಿ, **ಪಶ್ಚಿಮಕ್ಕೆ:** ಸರ್ವೆ ನಂ.111/1 ರ ಉಳಿದ ಭಾಗ ಮತ್ತು ಸರ್ವೆ ನಂ.21 ರ ಉಳಿದ ಭಾಗ, **ಉತ್ತರಕ್ಕೆ:** ಸರ್ವೆ ನಂ. 21 ಮತ್ತು ಸರ್ವೆ ನಂ.55 ರ ಉಳಿದ ಭಾಗ, **ದಕ್ಷಿಣಕ್ಕೆ:** ರಸ್ತೆ. **ಷೆಡ್ಯೂಲ್ ಎ: ಐಟಂ ನಂ.1 (ಸರ್ವೆ ನಂ.111/2):** ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಪರಿವರ್ತಿತ ಭೂಮಿಯ ಜಿಲ್ಲೆಯ ಸರ್ವೆ ನಂ.111/2, ಸುರಗಜಕ್ಕನಹಳ್ಳಿ ಗ್ರಾಮ, ಕಸಬಾ ಹೋಬಳಿ, ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆಯಲ್ಲಿದೆ, ವಿಸ್ತೀರ್ಣ 2 ಎಕರೆ ಪಿ12 ಗುಂಟೆಗಳು (ALN (A) (K&A)/SR/148,149, 270/2007-08 ದಿನಾಂಕ 26.02.2008 ರಂದು ಅಧಿಕೃತ ಮೆಮೊರಾಂಡಮ್‌ನಲ್ಲಿ ಪರಿವರ್ತಿಸಲಾಗಿದೆ. ಮತ್ತು ಚಕ್ಕುಬಂದಿ: ಪೂರ್ವಕ್ಕೆ :ಗೋಶಾಲಪ್ಪ ಮತ್ತು ರಾಮಯ್ಯನವರ ಜಮೀನು, ಪ್ರಸ್ತುತ ಮದ್ದೂರಪ್ಪನವರ ಜಮೀನು, ಪಶ್ಚಿಮಕ್ಕೆ:ರಾಮಸ್ವಾಮಿಯವರ ಜಮೀನು, ಉತ್ತರಕ್ಕೆ : ಕೆಂಚಪ್ಪನವರ ಜಮೀನು: ಹಿಂದೆ ದೊಡ್ಡಚಿನ್ನಯ್ಯನವರ ಜಮೀನು, ಪ್ರಸ್ತುತ ಮುನಿತಾಯಮ್ಮನವರ ಜಮೀನು. **ಐಟಂ ನಂ.2 (ಸರ್ವೆ ನಂ.160):** ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಪರಿವರ್ತಿತ ಭೂಮಿಯ ಸರ್ವೆ ನಂ.160, ಸುರಗಜಕ್ಕನಹಳ್ಳಿ ಗ್ರಾಮ, ಕಸಬಾ ಹೋಬಳಿ, ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆಯಲ್ಲಿದೆ, ವಿಸ್ತೀರ್ಣ 1 ಎಕರೆ 10 ಗುಂಟೆಗಳು (ಅಧಿಕೃತ ಜ್ಞಾಪನ ಸಂಖ್ಯೆ ALN (A) (K & A) SR/61/2014-15 ದಿನಾಂಕ 10/11/2014 ರಂದು ಪರಿವರ್ತಿಸಲಾಗಿದೆ ಮತ್ತು ಚಕ್ಕುಬಂದಿ: ಪೂರ್ವಕ್ಕೆ: ಸಿದಿಹೊಸಕೋಟೆ ಗ್ರಾಮದ ಗಡಿ ಮತ್ತು ಶ್ರೀ ಸಿ. ಅಜಯ್ ಕುಮಾರ್‌ರವರ ಭೂಮಿ, ಪಶ್ಚಿಮಕ್ಕೆ: ಸರ್ವೆ ನಂ.152, ಉತ್ತರಕ್ಕೆ: ಸರ್ವೆ ನಂ.21 ರ ಉಳಿದ ಭಾಗ, ದಕ್ಷಿಣಕ್ಕೆ: ಸರ್ವೆ ನಂ.111/2 ಶ್ರೀ ಸಿ. ಅಜಯ್ ಕುಮಾರ್ ರವರಿಗೆ ಸೇರಿದೆ. **ಷೆಡ್ಯೂಲ್ ಬಿ:** ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಆಸ್ತಿಯು ಹಂಚಿಕೆಯಾದ ನಂ.149, ಪಿಐಡಿ ನಂ.150200102500420534, ಖಾತಾ ನಂ.2493/149 ಹೊಂದಿರುವ ಲೇಔಟ್‌ನ್ನು **"ಸಿಕೆ ಆದಿತ್ಯ"** ಎಂದು ಕರೆಯಲಾಗುವುದು (ಆನೇಕಲ್ ಯೋಜನಾ ಪ್ರಾಧಿಕಾರ ಸಂಖ್ಯೆ.APA/LAO/112/14-15 ದಿನಾಂಕ 20/08/2016 ರಿಂದ ಅನುಮೋದಿಸಲಾದ ಲೇಔಟ್ ಯೋಜನೆ ಮತ್ತು ಬಿಡುಗಡೆ ಆದೇಶ ಸಂಖ್ಯೆ. STRRPA/TP/LAO/01/2017-18 ದಿನಾಂಕ 14/06/2017 ರಂದು ಸ್ಯಾಟಲೈಟ್ ಟೌನ್ ರಿಂಗ್ ರೋಡ್ ಯೋಜನಾ ಪ್ರಾಧಿಕಾರದಿಂದ ಹೊರಡಿಸಲಾಗಿದೆ) ಮತ್ತು ವಿಲೀನ ಮತ್ತು ವಿಭಜನೆ ಸಂಖ್ಯೆ.STRRPA/TP/Amalgamation & Bifurcation/03 /2021-22 (ಸ್ಯಾಟಲೈಟ್ ಟೌನ್ ರಿಂಗ್ ರೋಡ್ ಯೋಜನಾ ಪ್ರಾಧಿಕಾರದಿಂದ ಹೊರಡಿಸಲಾಗಿದೆ) ದಿನಾಂಕ 24.08.2021 ರಂದು, ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ : 12.19 ಮೀಟರ್ ಅಥವಾ 40 ಅಡಿ, ಮತ್ತು ಉತ್ತರದಿಂದ ದಕ್ಷಿಣಕ್ಕೆ: 12.19 ಮೀಟರ್ ಅಥವಾ 40 ಅಡಿ, ಒಟ್ಟು 148.60 ಚದರ ಮೀಟರ್ ಅಥವಾ 1600 ಚದರ ಅಡಿ, ಇದು ಸುರಗಜಕ್ಕನಹಳ್ಳಿ ಗ್ರಾಮ, ಕಸಬಾ ಹೋಬಳಿ, ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆಯ ಷೆಡ್ಯೂಲ್ ಎ ಆಸ್ತಿಯಲ್ಲಿ ನಿರ್ಮಿಸಲಾಗಿದೆ. ಚಕ್ಕುಬಂದಿ: **ಪೂರ್ವಕ್ಕೆ:** ನಿವೇಶನ ಸಂಖ್ಯೆ 141 ಮತ್ತು 142, **ಪಶ್ಚಿಮಕ್ಕೆ:** 9 ಮೀಟರ್ ಅಗಲದ ರಸ್ತೆ, **ಉತ್ತರಕ್ಕೆ:** ನಿವೇಶನ ಸಂಖ್ಯೆ 148, **ದಕ್ಷಿಣಕ್ಕೆ:** ನಿವೇಶನ ಸಂಖ್ಯೆ. 150.	ದಿನಾಂಕ: 22.06.2026 ಮಧ್ಯಾಹ್ನ 12 ರಿಂದ 12.30ರ ವರೆಗೆ -------- ಭೌತಿಕವಾಗಿ	ರೂ. 1,11,60,000/- (ರೂಪಾಯಿ ಒಂದು ಕೋಟಿ ಹನ್ನೊಂದು ಲಕ್ಷದ ಅರವತ್ತು ಸಾವಿರ ಮಾತ್ರ) -------- ರೂ. 11,16,000/- (ರೂಪಾಯಿ ಹನ್ನೊಂದು ಲಕ್ಷದ ಹದಿನಾರು ಸಾವಿರ ಮಾತ್ರ)
6	ಮಿಸ್. ಮಮತಾ ಸಂತೋಷಿಮಾ ಎ ಜಿ (ಸಾಲಗಾರರು)	ಸಾಲದ ಖಾತೆ ಸಂಖ್ಯೆ (1) 653831034 : ರೂ.26,45,761/- (2) 656938647 : ರೂ.30,002/- ಒಟ್ಟು ಮೊತ್ತ : ರೂ.26,75,763/- (ರೂಪಾಯಿ ಇಪ್ಪತ್ತಾರು ಲಕ್ಷದ ಎಪ್ಪತ್ತೈದು ಸಾವಿರದ ಏಳುನೂರ ಅರವತ್ತ ಮೂರು ಮಾತ್ರ) ದಿನಾಂಕ 29.02.2024 ರಂದು ಇದ್ದಂತೆ	**ಷೆಡ್ಯೂಲ್ ಎ:** ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ವಾಸಯೋಗ್ಯ ಪರಿವರ್ತಿತ ಆಸ್ತಿಯ ಸರ್ವೆ ನಂ.120/3, ಸುರಧೇನುಪುರ ಗ್ರಾಮ, ಹೆಸರುಘಟ್ಟ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕಿನಲ್ಲಿದೆ, ವಿಸ್ತೀರ್ಣ 8. ಗುಂಟೆಗಳು ವೈಡ್ ಕನ್ವರ್ಷನ್ ಎಂಡೋರ್ಸ್‌ಮೆಂಟ್ ಸಂಖ್ಯೆ ALN: (N.A.H)SR/9 2010-11 ದಿನಾಂಕ 30-07-2010 ರ ಷೆಡ್ಯೂಲ್ ಎ ನಲ್ಲಿ ಸಂಪೂರ್ಣವಾಗಿ ವಿವರಿಸಲಾಗಿದೆ. ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು ಉಪ-ರಿಜಿಸ್ಟ್ರಾರ್ ಕಛೇರಿಯಲ್ಲಿ ನೋಂದಾಯಿಸಲಾದ ನೋಂದಾಯಿತ ಮಾರಾಟ ಪತ್ರದ ಅಡಿಯಲ್ಲಿ ಡೆವಲಪರ್ ಖರೀದಿಸಿದ ಷೆಡ್ಯೂಲ್-ಎ ಆಸ್ತಿ ಎಂದು ಇಲ್ಲಿ ಮತ್ತು ಮುಂದೆ ಉಲ್ಲೇಖಿಸಲಾಗಿದೆ, ದಿನಾಂಕ 23/11/2011ರಂದು BIAPPA Vide TP-03CC-177/ 2011-12 ರಿಂದ ಕಟ್ಟಡದ ಯೋಜನೆಯನ್ನು ಮಂಜೂರು ಮಾಡಲಾಗಿದೆ. 8784 ಚದರ ಅಡಿ ವಾಸಯೋಗ್ಯ ಅಪಾರ್ಟ್‌ಮೆಂಟ್ ಷೆಡ್ಯೂಲ್-ಎ ಆಸ್ತಿಯಲ್ಲಿ ನಿರ್ಮಿಸಲಾಗಿದೆ ಮತ್ತು ಚಕ್ಕುಬಂದಿ: **ಪೂರ್ವಕ್ಕೆ:** ಮುನಿತಿಮ್ಮನವರ ಜಮೀನು, **ಪಶ್ಚಿಮಕ್ಕೆ:** ಚನ್ನಪ್ಪನವರ ಜಮೀನು, **ಉತ್ತರಕ್ಕೆ:** ಮಾಲೀಕರ ಉಳಿದ ಜಮೀನು, **ದಕ್ಷಿಣಕ್ಕೆ:** ರಸ್ತೆ. **ಷೆಡ್ಯೂಲ್ ಬಿ: ಪೂರ್ವಕ್ಕೆ:** ತೆರೆದ ಸ್ಥಳ, **ಪಶ್ಚಿಮಕ್ಕೆ:** ಯೂನಿಟ್-1 (ಫ್ಲಾಟ್ ನಂ.ಎಫ್-001), **ಉತ್ತರಕ್ಕೆ:** ತೆರೆದ ಸ್ಥಳ, **ದಕ್ಷಿಣಕ್ಕೆ:** ಯೂನಿಟ್-3 (ಫ್ಲಾಟ್ ನಂ.ಎಫ್-003), **391.00 ಚದರ ಅಡಿ** ಅವಿಭಾಜಿತ ಪಾಲು, ಹಕ್ಕು ಶೀರ್ಷಿಕೆ ಮತ್ತು ಹಿತಾಸಕ್ತಿಯನ್ನು ಷೆಡ್ಯೂಲ್ ಎ ಆಸ್ತಿಯಲ್ಲಿ ಹೊಂದಿದೆ, ಜೊತೆಗೆ ಒಂದು ವಸತಿ ಅಪಾರ್ಟ್‌ಮೆಂಟ್ / ಫ್ಲಾಟ್ ಹೊಂದಿರುವ ನಂ. ಎಫ್-002 (1 ಬಿಹೆಚ್‌ಕೆ) ಜೊತೆಗೆ ಮೊದಲನೇ ಮಹಡಿಯಲ್ಲಿ **729.50 ಚದರ ಅಡಿ. ಸೂಪರ್ ಬಿಲ್ಟ್-ಅಪ್ ಪ್ರದೇಶ** ಹಾಗೂ **ಕಾರ್ ಪಾರ್ಕಿಂಗ್** ಪ್ರದೇಶವನ್ನು ಹೊಂದಿದೆ.	ದಿನಾಂಕ: 22.06.2026 ಮಧ್ಯಾಹ್ನ 12 ರಿಂದ 12.30ರ ವರೆಗೆ -------- ಭೌತಿಕವಾಗಿ	ರೂ.25,24,500/- [ರೂಪಾಯಿ ಇಪ್ಪತ್ತೈದು ಲಕ್ಷದ ಇಪ್ಪತ್ತನಾಲ್ಕು ಸಾವಿರದ ಐದುನೂರು ಮಾತ್ರ] -------- ರೂ.2,52,450/- [ರೂಪಾಯಿ ಎರಡು ಲಕ್ಷದ ಐವತ್ತೆರಡು ಸಾವಿರದ ನಾಲ್ಕುನೂರ ಐವತ್ತು ಮಾತ್ರ]

1. ಪರಿವೀಕ್ಷಣೆಯ ದಿನಾಂಕ ಮತ್ತು ಸಮಯ: 05.06.2026 ಮತ್ತು 12.06.2026 ರಂದು ಬೆಳಿಗ್ಗೆ 11 ರಿಂದ ಸಂಜೆ 4 ರವರೆಗೆ.
2. ಕನಿಷ್ಠ ಬಿಡ್ ಹೆಚ್ಚಳದ ಮೊತ್ತ: ರೂ. 30,000/-
3. ಇಎಂಡಿ ಮೊತ್ತ ಸಲ್ಲಿಸಲು ಕೊನೆಯ ದಿನಾಂಕ: 18.06.2026 ರಂದು ಸಂಜೆ 5.00 ಗಂಟೆಯೊಳಗೆ.

ಜೊತೆಗೆ ಬಡ್ಡಿ ಪ್ರಾಸಂಗಿಕ ಖರ್ಚುಗಳು, ವೆಚ್ಚಗಳು, ಪ್ರಭಾರಗಳು ಇತ್ಯಾದಿಯನ್ನು ಸದರಿ ನೋಟೀಸಿನಲ್ಲಿ ತಿಳಿಸಿರುವ ದಿನಾಂಕದ ಒಳಗೆ ಪಾವತಿ ಮಾಡುವುದಕ್ಕೆ ಒಳಪಟ್ಟಿರುತ್ತದೆ.

ಆನ್‌ಲೈನ್ ಹರಾಜನ್ನು ನಮ್ಮ ಹರಾಜು ಸಂಸ್ಥೆ ಮೆ॥ ವ್ಯಾಲ್ಯೂಟ್ರಸ್ಟ್ ಕ್ಯಾಪಿಟಲ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್‌ನ ವೆಬ್‌ಸೈಟ್ https://biddeal.in ನಲ್ಲಿ ನಡೆಸಲಾಗುತ್ತದೆ,
ಆಸ್ತಿಯ ಪರಿಶೀಲನೆಗೆ ಸಂಬಂಧಿಸಿದ ಯಾವುದೇ ಸಹಾಯಕ್ಕಾಗಿ, ಅಥವಾ ಬಿಡ್ ದಾಖಲೆಯನ್ನು ಪಡೆಯಲು ಮತ್ತು ಯಾವುದೇ ಇತರ ಪ್ರಶ್ನೆಗಳಿಗಾಗಿ, ದಯವಿಟ್ಟು ಹೆಚ್‌ಡಿಎಫ್‌ಸಿ ಬ್ಯಾಂಕ್ ಲಿಮಿಟೆಡ್‌ನ ಶ್ರೀ.ಯೋಗೇಶ್.ಎನ್/ ಶ್ರೀ.ಶ್ರೀಧರ್ ಚಿನ್ನಿ, ಹೆಚ್‌ಡಿಎಫ್‌ಸಿ ಬ್ಯಾಂಕ್ ಲಿಮಿಟೆಡ್‌ನ ನೌಕರರು ಟೆಲಿ ಫೋನ್‌ನಂ. 080-41182283, 080-41182126/9449080072/7795853045 ಇವರ ಮೂಲಕ ಪಡೆಯಬಹುದು.

ಹೆಚ್‌ಡಿಎಫ್‌ಸಿ ಬ್ಯಾಂಕ್ ಲಿಮಿಟೆಡ್‌ನ ಅಧಿಕೃತ ಅಧಿಕಾರಿಯವರ ಜ್ಞಾನ ಮತ್ತು ಮಾಹಿತಿಯ ಪ್ರಕಾರ ಮೇಲೆ ನಮೂದಿಸಿರುವ ಸ್ಥಿರಾಸ್ತಿ ಸ್ವತ್ತುಗಳನ್ನು/ಭದ್ರತಾ ಆಸ್ತಿಗಳನ್ನು ಬೇರೆ ಯಾವುದೇ ಋಣಭಾರ ಇರುವುದಿಲ್ಲ. ಇದು ಕ್ರಮಸಂಖ್ಯೆ 3 ರಿಂದ 6 ರ ಆಸ್ತಿಗೆ ಮಾತ್ರ ಅನ್ವಯಿಸುತ್ತದೆ.

ಎ) ಮಾರಾಟ ವಹಿವಾಟನ್ನು ಪೂರ್ಣಗೊಳಿಸಲು ಅನ್ವಯವಾಗುವ ಬಿಲ್ಡರ್ ಬಾಕಿಗಳು, ತೆರಿಗೆ ಮತ್ತು ಖಾತಾ ಶುಲ್ಕಗಳಿವೆ (ಫ್ಲಾಟ್ ಸಂಖ್ಯೆ. 802, 8ನೇ ಮಹಡಿ, Maangalya Prosper Signature ಬ್ಲಾಕ್ – ಇದು ಕ್ರಮಸಂಖ್ಯೆ 1 ರ ಆಸ್ತಿಗೆ ಮಾತ್ರ ಅನ್ವಯಿಸುತ್ತದೆ. ಬಿ) ಮಾರಾಟ ಒಪ್ಪಂದದ ಆಧಾರದ ಮೇಲೆ ಅಡಮಾನ ಇಡಲಾದ ಆಸ್ತಿ, ಬಿಲ್ಡರ್‌ಗೆ ಪಾವತಿಸಬೇಕಾದ ಬಾಕಿಗಳು ಮತ್ತು ದಿ ಗ್ರೀನ್ಸ್ ಎಂದು ಕರೆಯಲ್ಪಡುವ ವಾಸಯೋಗ್ಯ ಕಾಂಪ್ಲೆಕ್ಸ್‌ನ ಡಿ ಟವರ್‌ನಲ್ಲಿರುವ maple ಬ್ಲಾಕ್‌ನ 6ನೇ ಮಹಡಿಯಲ್ಲಿರುವ ಫ್ಲಾಟ್ ಸಂಖ್ಯೆ. 604 ಗೆ ಒಳಪಟ್ಟಿರುವ ಬಾಕಿಗಳಿವೆ, ಇದು ಕ್ರಮ ಸಂಖ್ಯೆ.2 ರ ಆಸ್ತಿಗೆ ಮಾತ್ರ ಅನ್ವಯಿಸುತ್ತದೆ.

ದಿನಾಂಕ: 06.05.2026
ಸ್ಥಳ: ಬೆಂಗಳೂರು


ಹೆಚ್‌ಡಿಎಫ್‌ಸಿ ಬ್ಯಾಂಕ್ ಲಿಮಿಟೆಡ್ ಪರವಾಗಿ
ಸಹಿ/- ಅಧಿಕೃತ ಅಧಿಕಾರಿ, ಹೆಚ್‌ಡಿಎಫ್‌ಸಿ ಬ್ಯಾಂಕ್ ಲಿ., ಅಡಿಯಲ್ಲಿ ಸರ್ಫೇಸಿ ಕಾಯ್ದೆ 2002ರ ಅಡಿಯಲ್ಲಿ

ರಾಜ್ಯದಲ್ಲಿ ತಾಪಮಾನ ಡಿಗ್ರಿ ಸೆಲ್ಸಿಯಸ್‌ಗಳಲ್ಲಿ

	ಬೀದರ್	ಕಲಬುರಗಿ	ರಾಯಚೂರು	ವಿಜಯಪುರ	ಗದಗ
ಗರಿಷ್ಠ	43.0	41.1	40.0	39.5	38.0
ಕನಿಷ್ಠ	21.6	27.0	25.4	22.6	21.8

ಕನ್ನಡಪ್ರಭ
ಬುಧವಾರ 6.05.2026

ಆಳ್ವಾಸ್‌ನಲ್ಲಿ ಈ ವರ್ಷದಿಂದಲೇ ಎಂಬಿಬಿಎಸ್: ಡಾ.ಮೋಹನ ಆಳ್ವ



ಮೂಡುಬಿದಿರೆ: ಮುಂದಿನ ಶೈಕ್ಷಣಿಕ ವಿಸ್ತರಣೆಯ ಭಾಗವಾಗಿ ಮೂಡುಬಿದಿರೆ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನವು ಈ ಶೈಕ್ಷಣಿಕ ವರ್ಷದಿಂದಲೇ ವೈದ್ಯಕೀಯ ಶಿಕ್ಷಣ (ಎಂಬಿಬಿಎಸ್) ಕೋರ್ಸ್ ಪ್ರಾರಂಭಿಸಲಿದೆ ಎಂದು ಸಂಸ್ಥೆಯ ಅಧ್ಯಕ್ಷ ಡಾ. ಎಂ.ಮೋಹನ ಆಳ್ವ ತಿಳಿಸಿದರು. ಮಂಗಳವಾರ ಸುದ್ದಿಗಾರರ ಜೊತೆ ಮಾತನಾಡಿ, ಸಂಸ್ಥೆಯ ಶೈಕ್ಷಣಿಕ ಬೆಳವಣಿಗೆ ಕುರಿತು ಸಂಪೂರ್ಣ ಮಾಹಿತಿ ಹಂಚಿಕೊಂಡರು. ವೈದ್ಯಕೀಯ ಕ್ಷೇತ್ರದ ಮಹತ್ವವನ್ನು ತಮ್ಮ ಸ್ವಂತ ಅನುಭವದ ಮೂಲಕ ಆಳ್ವ ಅವರು ವಿವರಿಸಿದರು. ವೈದ್ಯಕೀಯ ಕ್ಷೇತ್ರದಲ್ಲಿ ಮಾನವೀಯ ಸ್ಪರ್ಶ ಅತ್ಯಂತ ಮುಖ್ಯ ಎಂದು ಅಭಿಪ್ರಾಯಪಟ್ಟ ಡಾ. ಮೋಹನ ಆಳ್ವ ಅವರು, ಹೊಸ ಕೋರ್ಸ್‌ನ ಆರಂಭದ ಬಗ್ಗೆ ಅಧಿಕೃತವಾಗಿ ಘೋಷಣೆ ಮಾಡಿದರು.

ವಿಡಿಯೋ ಕಾಲ್‌ನಲ್ಲಿ ಮಗುವನ್ನು ತೋರಿಸದ್ದಕ್ಕೆ ಅತ್ತೆಗೆ ಚಾಕು ಹಾಕಿದ!

ಬೆಳಗಾವಿ: ವಿಡಿಯೋ ಕಾಲ್ ಮಾಡಿ ಮಗು ತೋರಿಸಲಿಲ್ಲ ಎಂದು ಹೆಂಡತಿ ಮನೆಗೆ ಬಂದು ಅತ್ತೆಗೆ ಅಳಿಯ ಚಾಕು ಇರಿದ ಘಟನೆ ಬೆಳಗಾವಿ ಜಿಲ್ಲೆಯ ಸವದತ್ತಿ ತಾಲೂಕಿನ ಆಲದಕಟ್ಟಿ ಗ್ರಾಮದಲ್ಲಿ ನಡೆದಿದೆ. ಘಟನೆಗೆ ಸಂಬಂಧಿಸಿದಂತೆ ಆರೋಪಿಯನ್ನು ಪೊಲೀಸರು ಬಂಧಿಸಿದ್ದಾರೆ. ಮಹಾದೇವಿ ಕರಿಗಾರ (45) ಗಂಭೀರವಾಗಿ ಗಾಯಗೊಂಡ ಮಹಿಳೆ. ಅರವಿಂದ ಗವಳಿ (26) ಬಂಧಿತ ಆರೋಪಿ. ಅರವಿಂದ ದಂಪತಿಗೆ ಇತ್ತೀಚೆಗೆ ಹೆಣ್ಣು ಮಗುವಾಗಿತ್ತು. ಪತ್ನಿ ತವರು ಮನೆಯಲ್ಲಿ ಇದ್ದಳು. ಈ ವೇಳೆ ಪತ್ನಿಗೆ ಪದೇಪದೇ ವಿಡಿಯೋ ಕಾಲ್ ಮಾಡಿ ಮಗುವನ್ನು ತೋರಿಸುವಂತೆ ಅರವಿಂದ ಒತ್ತಾಯಿಸುತ್ತಿದ್ದ. ಈ ವಿಚಾರವಾಗಿ ಜಗಳ ನಡೆದಿದೆ ಎನ್ನಲಾಗಿದೆ. ಇದರಿಂದ ಕೋಪಗೊಂಡ ಅರವಿಂದ, ಪತ್ನಿ ಇದ್ದ ಮನೆಗೆ ಬಂದು ಅತ್ತೆಗೆ ಚಾಕುವಿನಿಂದ ಇರಿದಿದ್ದಾನೆ. ಮಹಾದೇವಿಗೆ ಬೆಳಗಾವಿಯ ಬಿಮ್ಸ್‌ನ ಐಸಿಯುನಲ್ಲಿ ಚಿಕಿತ್ಸೆ ಮುಂದುವರಿದಿದೆ.

ಕೆಎಸ್ಆರ್‌ಟಿಸಿ ಪಲ್ಲಕ್ಕಿ ಬಸ್‌ಗೆ ಬೆಂಕಿ: 13 ಮಂದಿ ಪ್ರಯಾಣಿಕರು ಪಾರು



ರಾಣೆಬೆನ್ನೂರು(ಹಾವೇರಿ): ಬೆಂಗಳೂರಿನಿಂದ ಗದಗ ಕಡೆಗೆ ತೆರಳುತ್ತಿದ್ದ ಕೆಎಸ್ಆರ್‌ಟಿಸಿ ಪಲ್ಲಕ್ಕಿ ಬಸ್‌ಗೆ ಬೆಂಕಿ ತಗುಲಿ ಸಂಪೂರ್ಣ ಸುಟ್ಟು ಭಸ್ಮವಾದ ಘಟನೆ ಮಂಗಳವಾರ ರಾಣಿಬೆನ್ನೂರು ತಾಲೂಕಿನ ದೇವರಗುಡ್ಡ ಬಳಿ ಹೊನ್ನಾಳಿ-ಗದಗ ರಸ್ತೆಯಲ್ಲಿ ಸಂಭವಿಸಿದೆ. ಚಾಲಕನ ಸಮಯ ಪ್ರಜ್ಞೆಯಿಂದ ಬಸ್‌ನಲ್ಲಿ ಪ್ರಯಾಣಿಸುತ್ತಿದ್ದ ಎಲ್ಲಾ 13 ಪ್ರಯಾಣಿಕರು ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಬಸ್‌ನ ಚಕ್ರದಹತ್ತಿರ ಬೆಂಕಿಕಾಣಿಸಿಕೊಳ್ಳುತ್ತಿದ್ದಂತೆಯೇ ಚಾಲಕ ಎಲ್ಲಾ ಪ್ರಯಾಣಿಕರನ್ನು ಜಾಗೃತಗೊಳಿಸಿ ಬಸ್‌ನಿಂದ ಕೆಳಕ್ಕಿಳಿಸಿದರು.

ಶಾಸಕ ಪೊನ್ನಣ್ಣ ಪುತ್ರಿಯರ ವಿರುದ್ಧ ಅವಹೇಳನಕಾರಿ ಸಂದೇಶ: ದೂರು

ಬೆಂಗಳೂರು: ವಾಟ್ಸ್ಆ್ಯಪ್ ಗ್ರೂಪ್‌ವೊಂದರಲ್ಲಿ ಸಿಎಂರ ಕಾನೂನು ಸಲಹೆಗಾರ, ಶಾಸಕ ಪೊನ್ನಣ್ಣ ಅವರ ಪುತ್ರಿಯರ ವಿರುದ್ಧ ಅವಹೇಳನಕಾರಿ ಮತ್ತು ಪ್ರಚೋದನಾಕಾರಿ ಸಂದೇಶ ಹಾಕಿದ್ದ ವ್ಯಕ್ತಿ ವಿರುದ್ಧ ಹೈಗ್ರೌಂಡ್ಸ್ ಪೊಲೀಸ್ ಠಾಣೆಯಲ್ಲಿ ಎಫ್ಐಆರ್‌ದಾಖಲಾಗಿದೆ. ಕೆಪಿಸಿಸಿ ಪದಾಧಿಕಾರಿ ಬಿ.ಎನ್. ಆನಂದ್ ಎಂಬುವರು ನೀಡಿದ ದೂರಿನನ್ವಯ ದೊರೆ ಎಂಬಾತನ ವಿರುದ್ಧ ಪ್ರಕರಣ ದಾಖಲಿಸಿ ತನಿಖೆ ಕೈಗೊಳ್ಳಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಕೊಡಗಿನ ಸಮಸ್ಯೆಗಳು ಎಂಬ ವಾಟ್ಸ್ಆ್ಯಪ್ ಗ್ರೂಪಿನಲ್ಲಿ ಏ.29 ರಂದು ಕನ್ನಿಗುಂಡ ಹಮ್ಮಿ ಎಂಬುವರು ಕೆಲ ಸಮಸ್ಯೆಗಳನ್ನು ಗ್ರೂಪ್‌ನಲ್ಲಿ ಹಾಕಿದ್ದರು. ಇದಕ್ಕೆ ಗ್ರೂಪ್‌ನಲ್ಲಿಯೇ ಪ್ರತಿಕ್ರಿಯಿಸಿದ ದೊರೆ ಎಂಬ ವ್ಯಕ್ತಿಯು 'ಪೊನ್ನಣ್ಣ ಅವರಿಗೆ ಇಬ್ಬರು ಹೆಣ್ಣು ಮಕ್ಕಳಿದ್ದು, ಕಾದು ನೋಡಿ ಕರ್ಮ ರಿಟರ್ನ್ ಆಗಲಿದೆ' ಎಂದು ಅವಹೇಳನಕಾರಿ ಹಾಗೂ ಪ್ರಚೋದನಕಾರಿ ಸಂದೇಶವನ್ನು ಹಾಕಿದ್ದರು.

ಶೃಂಗೇರಿ ಮರು ಎಣಿಕೇಲಿ ಓಟ್ ಡಕಾಯಿತಿ: ಸಿಎಂ

ಸಿಬ್ಬಂದಿ ನೆರವಿನಿಂದ ಅಂಚೆ ಮತ ಚೀಟಿ ತಿದ್ದಿದ್ದಾರೆ | ಕಾಂಗ್ರೆಸ್‌ನ ರಾಜೇಗೌಡರ 255 ಮತ ಅನೂರ್ಜಿತಗೊಳಿಸಲಾಗಿದೆ: ಸಿದ್ದು ಆರೋಪ

2023ರಲ್ಲಿ ಮತ ಎಣಿಕೆ ನಡೆದಾಗ ಈ ಮತಗಳು ಸರಿಯಾಗೇ ಇದ್ದವು | ಅವು ಈಗ ಹೇಗೆ ಅನೂರ್ಜಿತ ಆಗಲು ಸಾಧ್ಯ: ಸಿದ್ದರಾಮಯ್ಯ ಪ್ರಶ್ನೆ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

'ಶೃಂಗೇರಿ ಕ್ಷೇತ್ರದ ಅಂಚೆ ಮತ ಮರು ಎಣಿಕೆಯಲ್ಲಿ ದೇಶದಲ್ಲೇ ಗಂಭೀರ ಎನ್ನಬಹುದಾದ ಕ್ರಿಮಿನಲ್ ಷಡ್ಯಂತ್ರ ನಡೆದಿದೆ. ಇದು ವೋಟ್ ಚೋರಿ ಅಲ್ಲ ವೋಟ್ ಡಕಾಯಿತಿ. ಬಿಜೆಪಿಯವರು ಸಿಬ್ಬಂದಿ ಸಹಾಯದಿಂದ ಅಂಚೆ ಮತ ಚೀಟಿ ತಿದ್ದಿ ಟಿ.ಡಿ.ರಾಜೇಗೌಡರಿಗೆ ಬಿದ್ದಿದ್ದ 255 ಮತ ಅನೂರ್ಜಿತಗೊಳಿಸಿದ್ದಾರೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಗಂಭೀರ ಆರೋಪ ಮಾಡಿದ್ದಾರೆ.



ಮಂಗಳವಾರ ಸುದ್ದಿಗೋಷ್ಠಿ ನಡೆಸಿದ ಅವರು, '2023ರ ಚುನಾವಣೆ ವೇಳೆಯಲ್ಲೇ ಮತ ಎಣಿಕೆ ಬಳಿಕ ಮತಪತ್ರ ಹಾಗೂ ದಾಖಲೆಗಳನ್ನು ಸಾಗಿಸುವಾಗ ಸಿಬ್ಬಂದಿಯೇ ಮತ ತಿದ್ದಿದ್ದಾರೆ. ಅಂಚೆ ಮತ ಮರು ಎಣಿಕೆ ವೇಳೆ ರಾಜೇಗೌಡರಿಗೆ ಚಲಾವಣೆಯಾಗಿದ್ದ 569 ಅಂಚೆ ಮತಗಳಲ್ಲಿ 255 ಮತಗಳನ್ನು ಅನೂರ್ಜಿತಗೊಳಿಸಲಾಗಿದೆ. 2023ರ ಮತ ಎಣಿಕೆ ವೇಳೆ ಈ ಮತಪತ್ರಗಳನ್ನು ಬಿಜೆಪಿ ಏಜೆಂಟ್ ನೋಡಿ ಸರಿ ಇದೆ ಎಂದು ಸಹಿ ಮಾಡಿದ್ದಾರೆ. ಅಂಥ ಮತಗಳು ಈಗ ಹೇಗೆ ಅನೂರ್ಜಿತಗೊಂಡವು?' ಎಂದು ಸಿಎಂ ಪ್ರಶ್ನಿಸಿದ್ದಾರೆ.

ಮತಪತ್ರದಲ್ಲಿ ತಪ್ಪಾಗಿ ಇಂಕ್ ಗುರುತು ಮಾಡಲಾಗಿದೆ ಎಂಬ ಕಾರಣ ನೀಡಿ ರಾಜೇಗೌಡರಿಗೆ ಚಲಾವಣೆ ಆಗಿರುವ ಮತಗಳನ್ನೇ ಅನೂರ್ಜಿತಗೊಳಿಸಲಾಗಿದೆ. ಇದನ್ನು ಚುನಾವಣಾ ಅಧಿಕಾರಿಗಳು ಫೋರೆನ್ಸಿಕ್ ಲ್ಯಾಬ್‌ಗೆ ಕಳುಹಿಸಬೇಕಿತ್ತು. ಈ ರೀತಿ ಆಗಿರುವುದು ಕೋರ್ಟ್‌ನ ಗಮನಕ್ಕಾದರೂ ತರಬೇಕಿತ್ತು. ಮತ ಎಣಿಕೆ ಬಗ್ಗೆ ನಮ್ಮ ಚುನಾವಣಾ ಏಜೆಂಟರು ಆಕ್ಷೇಪ ಎತ್ತಿದ್ದು ಸಹಿ ಹಾಕಿಲ್ಲ. ಆದರೂ, ಜಿಲ್ಲಾಧಿಕಾರಿಗಳು ಹಾಗೂ ರಿಟರ್ನಿಂಗ್ ಅಧಿಕಾರಿಗಳು ಮೇಲಿನ ಒತ್ತಡದಿಂದ ತರಾತುರಿಯಲ್ಲಿ ಫಲಿತಾಂಶ ಘೋಷಿಸಿದ್ದಾರೆ. ಇದರ ವಿರುದ್ಧ ಎಫ್ಐಆರ್ ದಾಖಲಿಸಿದ್ದು, ಕಾನೂನು ಹೋರಾಟ ಮುಂದುವರೆಸುತ್ತೇವೆ ಎಂದು ಸಿದ್ದರಾಮಯ್ಯ ಹೇಳಿದ್ದಾರೆ.

ಸಿಎಂ ಪ್ರಕಾರ ಷಡ್ಯಂತ್ರ ಹೇಗೆ?: ಷಡ್ಯಂತ್ರ ಕುರಿತು ವಿವರಣೆ ನೀಡಿದ ಸಿದ್ದರಾಮಯ್ಯ, ರಾಜೇಗೌಡ ಅವರು 201 ಮತಗಳ ಅಂತರದಿಂದ 2023ರಲ್ಲಿ ಗೆದ್ದಿದ್ದರು. ಅವರ ವಿರುದ್ಧ ಬಿಜೆಪಿಯ ಜೀವರಾಜ್ ಕೋರ್ಟ್ ಮೊರೆ ಹೋಗಿದ್ದು, ನ್ಯಾಯಾಲಯವು ಮಾ.6 ರಂದು ಅಂಚೆ ಮತ ಪತ್ರ ಮಾತ್ರ ಮರು ಎಣಿಕೆ ಮಾಡುವಂತೆ ಆದೇಶ ಮಾಡಿತ್ತು. ಇದಕ್ಕೂ ಮೊದಲು 2023ರಲ್ಲಿ ರಾಜೇಗೌಡರಿಗೆ 59,171 ಮತ, ಜೀವರಾಜ್ ಅವರಿಗೆ 58,970 ಮತ ಬಂದಿದ್ದವು. ಈ ಪೈಕಿ ರಾಜೇಗೌಡರಿಗೆ ಇವಿಎಂ ಮೂಲಕ 58,602 ಹಾಗೂ ಅಂಚೆ ಮತ 569 ಬಂದಿದ್ದು, ಡಿ.ಎನ್.ಜೀವರಾಜ್ ಅವರಿಗೆ 58,278 ಇವಿಎಂ ಮತ ಹಾಗೂ ಅಂಚೆ ಮತ 692 ಬಂದಿದ್ದವು.

ರಾಜೇಗೌಡರನ್ನು ವಿಜಯಿ ಎಂದು ಘೋಷಿಸುವ ಮೊದಲು ಅಂಚೆ ಮತಗಳೆಲ್ಲ ಊರ್ಜಿತ ಮತಗಳು ಎಂದು ರಿಟರ್ನಿಂಗ್ ಅಧಿಕಾರಿ, ಸಹಾಯಕ ರಿಟರ್ನಿಂಗ್ ಅಧಿಕಾರಿ, ಏಜೆಂಟರು ತೀರ್ಮಾನಿಸಿದ್ದರು. ಆದರೂ ಇದನ್ನು ಮತ್ತೆ ವಿವಾದ ಮಾಡಲಾಯಿತು ಎಂದು ಜೀವರಾಜ್ ಹಾಗೂ ಬಿಜೆಪಿ ವಿರುದ್ಧ ಸಿದ್ದರಾಮಯ್ಯ ಹರಿಹಾಯ್ದರು.

ಇಷ್ಟೇ ಮತದಿಂದ ಗೆಲ್ಲುತ್ತೇನೆಂದು ಜೀವರಾಜ್ ಹೇಳಿದ್ದರು: ಡಿಸಿಎಂ

ಜೀವರಾಜ್ ಅವರು ಅಂಚೆ ಮತಗಳ ಮರು ಎಣಿಕೆಗೆ ಮಾತ್ರ ನ್ಯಾಯಾಲಯ ಮೊರೆ ಹೋಗಿದ್ದು ಯಾಕೆ? ಮತಗಳ ಮರುಎಣಿಕೆಗೆ ಮೊದಲೇ ಜೀವರಾಜ್ ಅವರು 52 ಮತಗಳಿಂದಲೇ ಗೆಲ್ಲುತ್ತೇನೆ ಎಂದು ಸಹಚರರಿಗೆ ಹೇಳಿದ್ದಾರೆ. ಬೆಟ್ಟಿಂಗ್ ಕಟ್ಟಲೂ ಕುಮ್ಮಕ್ಕು ನೀಡಿದ್ದಾರೆ. ಹಿಂದೆ ಮತ ಎಣಿಕೆ ವೇಳೆ ಪ್ರತಿ ಮತವನ್ನೂ ಏಜೆಂಟರಿಗೆ ತೋರಿಸಿ ವಿಡಿಯೋ ಮಾಡಿರುತ್ತಾರೆ. ಆಗ ಸರಿಯಿದ್ದ ಮತ ಈಗ ಅನೂರ್ಜಿತ ಎಂದರೆ ಸುಮ್ಮನೆ ಕೂರಬೇಕೆ? ಹೀಗಾಗಿ ಎಫ್ಐಆರ್ ದಾಖಲಿಸಿದ್ದೇವೆ. ಇದನ್ನು ಪ್ರಶ್ನಿಸಿ ತರಾತುರಿಯಲ್ಲಿ ಅವರು ನ್ಯಾಯಾಲಯಕ್ಕೆ ಯಾಕೆ ಹೋದರು? ಇದನ್ನು ಇಲ್ಲಿಗೆ ಬಿಡುವುದಿಲ್ಲ. ದೇಶದಲ್ಲೇ ಅತಿ ಗಂಭೀರ ಅಪರಾಧ ಕೃತ್ಯದ ವಿರುದ್ಧ ಹೋರಾಡುತ್ತೇವೆ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಸುದ್ದಿ ಸಿಂಚನ

ಮಕ್ಕಳ ಮೇಲೆ ದೌರ್ಜನ್ಯ ಆರೋಪ: ವಚನ ಶ್ರೀಗೆ ನಿರೀಕ್ಷಣಾ ಜಾಮೀನು

ಹರಿಹರ: ಇಲ್ಲಿನ ವೀರಶೈವ ಲಿಂಗಾಯತ ಪಂಚಮಸಾಲಿ ಪೀಠದ ಪೀಠಾಧಿಪತಿ ಶ್ರೀ ವಚನಾನಂದ ಸ್ವಾಮೀಜಿ ಅವರಿಗೆ ಮಕ್ಕಳ ದುರ್ಬಳಕೆ ಹಾಗೂ ದೌರ್ಜನ್ಯದ ಆರೋಪಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ಜಿಲ್ಲಾ ನ್ಯಾಯಾಲಯವು ನಿರೀಕ್ಷಣಾ ಜಾಮೀನು ಮಂಜೂರು ಮಾಡಿದೆ. ಮಠದ ಆಂತರಿಕ ವಿವಾದಗಳ ನಡುವೆಯೇ ಕೇಳಿಬಂದಿದ್ದ ಈ ಗಂಭೀರ ಆರೋಪದ ಹಿನ್ನೆಲೆಯಲ್ಲಿ ಶ್ರೀಗಳ ಪರವಾಗಿ ಏ.21ರಂದು ಜಿಲ್ಲಾ ನ್ಯಾಯಾಲಯದಲ್ಲಿ ನಿರೀಕ್ಷಣಾ ಜಾಮೀನಿಗಾಗಿ ಅರ್ಜಿ ಸಲ್ಲಿಕೆ ಆಗಿತ್ತು. ಅರ್ಜಿ ವಿಚಾರಣೆ ನಡೆಸಿದ ಕೋರ್ಟ್, ಸರ್ಕಾರಿ ಅಭಿಯೋಜಕರ ಆಕ್ಷೇಪಣೆ ಹಾಗೂ ಪ್ರತಿವಾದಗಳನ್ನು ಆಲಿಸಿದ ನಂತರ ಶ್ರೀಗಳಿಗೆ ನಿರೀಕ್ಷಣಾ ಜಾಮೀನು ನೀಡಿ ಆದೇಶ ಹೊರಡಿಸಿದ್ದು, ಶ್ರೀಗಳಿಗೆ ತಾತ್ಕಾಲಿಕ ಸಮಾಧಾನ ಸಿಕ್ಕಂತಾಗಿದೆ.



ಪಂಚಮಸಾಲಿ ಪೀಠದಲ್ಲಿ ಮೇ 31ರವರೆಗೆ ಸಭೆ, ಸಮಾರಂಭ ನಿಷೇಧ

ಹರಿಹರ: ಪಂಚಮಸಾಲಿ ಪೀಠದ ಟ್ರಸ್ಟಿಗಳು ಹಾಗೂ ವಚನಾನಂದ ಶ್ರೀಗಳ ಬೆಂಬಲಿಗರ ನಡುವಿನ ಸಂಘರ್ಷ ತಾರಕಕ್ಕೇರಿರುವ ಹಿನ್ನೆಲೆಯಲ್ಲಿ ಮಠದ ಆವರಣದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವ ದೃಷ್ಟಿಯಿಂದ ದಾವಣಗೆರೆ ಜಿಲ್ಲಾಧಿಕಾರಿ ಸೋಮವಾರ ನಿಷೇಧಾಜ್ಞೆ ಜಾರಿಗೊಳಿಸಿದ್ದಾರೆ. ಮೇ 31ರವರೆಗೆ ಪೀಠದ ಆವರಣದಲ್ಲಿ ಯಾವುದೇ ಸಭೆ- ಸಮಾರಂಭ ಹಾಗೂ ಸುಗೋಷ್ಠಿಗಳನ್ನು ನಡೆಸದಂತೆ ನಿಷೇಧಾಜ್ಞೆ ಜಾರಿ ಗೊಳಿಸಿ ಡೀಸಿ ಗಂಗಾಧರ ಸ್ವಾಮಿ ಆದೇಶಿಸಿದ್ದಾರೆ. ಈ ನಿಷೇಧಾಜ್ಞೆಯು ಮಠದ ದೈನಂದಿನ ಧಾರ್ಮಿಕ ಪೂಜಾ ವಿಧಾನಗಳಿಗೆ ಅಡ್ಡಿ ಆಗುವುದಿಲ್ಲ ಎಂದು ಸ್ಪಷ್ಟಪಡಿಸಲಾಗಿದೆ.

ಕರ್ತವ್ಯದ ವೇಳೆ ಗುಂಡು ಹಾರಿಸಿಕೊಂಡು ಕೊಡಗಿನ ಯೋಧ ಆತ್ಮಹತ್ಯೆ

ಸೋಮವಾರಪೇಟೆ(ಕೊಡಗು): ಜಮ್ಮು ಕಾಶ್ಮೀರದಲ್ಲಿ ಕೊಡಗು ಮೂಲದ ಸಿಆರ್‌ಪಿಎಫ್ ಯೋಧರೊಬ್ಬರು ಕರ್ತವ್ಯದ ವೇಳೆ ಗುಂಡು ಹಾರಿಸಿಕೊಂಡು ಆತ್ಮಹತ್ಯೆಗೆ ಶರಣಾಗಿರುವ ಘಟನೆ ಸೋಮವಾರ ನಡೆದಿದೆ. ಸೋಮವಾರಪೇಟೆ ತಾಲೂಕಿನ ಯಡವಾರೆ ಗ್ರಾಮದ ಕೆ.ಜೆ. ನವೀನ್ ಕುಮಾರ್‌ಮೃತ ಯೋಧ. ಆತ್ಮಹತ್ಯೆಗೆ ಕಾರಣ ತಿಳಿದುಬಂದಿಲ್ಲ.



2 ಗಡಿ ಜಿಲ್ಲೆಗಳಲ್ಲಿ ಮಳೆ: ರೈತರಲ್ಲಿ ಮಂದಹಾಸ

ಮಡಿಕೇರಿ/ಚಾಮರಾಜನಗರ: ಬಿಸಿಲಿನಿಂದ ಬಳಲಿದ್ದ ಜನತೆಗೆ ರಾಜ್ಯದ ಗಡಿ ಜಿಲ್ಲೆಗಳಾದ ಕೊಡಗು ಮತ್ತು ಚಾಮರಾಜನಗರದ ಹಲವೆಡೆ ಮಳೆಯ ಸಿಂಚನವಾಗಿದ್ದು ಕೃಷಿ ಚಟುವಟಿಕೆಗಳು ಗರಿಗೆದರಿವೆ. ಇದರಿಂದ ರೈತರಲ್ಲಿ ಸಂತಸ ಮೂಡಿಸಿದೆ. ಕೊಡಗು ಜಿಲ್ಲೆಯ ವಿವಿಧ ಕಡೆಗಳಲ್ಲಿ ಮಂಗಳವಾರ ಮಳೆಯಾಗಿದೆ. ಮಡಿಕೇರಿಯಲ್ಲಿ ರಾತ್ರಿ ಕೆಲ ಕಾಲ ಭರ್ಜರಿ, ಉಳಿದಂತೆ ಸಿದ್ದಾಪುರ, ಸುಂಟಿಕೊಪ್ಪ ಸೇರಿದಂತೆ ಹಲವು ಕಡೆಗಳಲ್ಲಿ ಬಿಸಿಲಿನಿಂದ ಕಂಗೆಟ್ಟಿದ್ದ ಜನತೆಗೆ ಮಳೆ ತಂಪು ನೀಡಿದೆ. ಇನ್ನು ಚಾಮರಾಜನಗರ ತಾಲೂಕಿನಲ್ಲಿ ಗಾಳಿ ಸಹಿತ ಮಳೆಯಾಗಿದೆ. ಹಲವು ಮರಗಳು ಧರೆಗೆ ಉರುಳಿದ ಬಗ್ಗೆ ವರದಿಯಾಗಿದೆ.

ಜೀವರಾಜ್ ವಿರುದ್ಧ ತನಿಖೆಗೆ 2 ದಿನ ಕೋರ್ಟ್ ತಡೆ

ರಾಜಕೀಯ ಒತ್ತಡದಿಂದ ಎಫ್ಐಆರ್ | ಪೊಲೀಸರು ಒತ್ತಡಕ್ಕೆ ಮಣಿಯಬಾರದು: ಹೈಕೋರ್ಟ್

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಅಂಚೆ ಮತಗಳ ಮರು ಎಣಿಕೆಯಲ್ಲಿ ಮತಗಳನ್ನು ತಿರುಚಿದ ಆರೋಪ ಸಂಬಂಧ ಶೃಂಗೇರಿ ಬಿಜೆಪಿ ಶಾಸಕರಾಗಿ ಆಯ್ಕೆಯಾಗಿರುವ ಡಿ.ಎನ್. ಜೀವರಾಜ್ ವಿರುದ್ಧ ಚಿಕ್ಕಮಗಳೂರು ಟೌನ್ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಎಫ್ಐಆರ್‌ಗೆ ಹೈಕೋರ್ಟ್ ಎರಡು ದಿನಗಳ ತಾತ್ಕಾಲಿಕ ತಡೆಯಾಜ್ಞೆ ನೀಡಿ ಮಂಗಳವಾರ ಮಧ್ಯಂತರ ಆದೇಶ ಮಾಡಿದೆ.


ಅಲ್ಲದೇ, ಪ್ರಕರಣದಲ್ಲಿ ರಾಜಕೀಯ ಒತ್ತಡಕ್ಕೆ ಮಣಿದು ಎಫ್ಐಆರ್ ದಾಖಲಿಸಲಾಗಿದೆ. ಪೊಲೀಸರು ರಾಜಕೀಯ ಒತ್ತಡಗಳಿಗೆ ಮಣಿದು ಕೆಲಸ ಮಾಡಬಾರದು ಎಂದು ನ್ಯಾಯಾಲಯವು ರಾಜ್ಯ ಸರ್ಕಾರ ಹಾಗೂ ಪೊಲೀಸರ ವಿರುದ್ಧ ತೀಕ್ಷ್ಣವಾಗಿ ನುಡಿದಿದೆ.

ಮತ ತಿರುಚಿದ ಆರೋಪ ಮೇಲೆ ಕಾಂಗ್ರೆಸ್ ಏಜೆಂಟ್ ಸುಧೀರ್ ಮುರೊಳ್ಳಿ ದೂರಿನ ಆಧಾರದಲ್ಲಿ ಚಿಕ್ಕಮಗಳೂರು ಟೌನ್ ಠಾಣೆಯಲ್ಲಿ ದಾಖಲಾಗಿರುವ ಪ್ರಕರಣ ರದ್ದತಿ ಕೋರಿ ಜೀವರಾಜ್ ಸಲ್ಲಿಸಿರುವ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ವಿ.ಶ್ರೀಶಾನಂದ ಅವರ ರಜಾಕಾಲೀನ ಏಕಸದಸ್ಯ ಪೀಠ ಹೀಗೆ ಅಸಮಾಧಾನ ವ್ಯಕ್ತಪಡಿಸಿತು.

ಜೊತೆಗೆ, ಅರ್ಜಿ ಸಂಬಂಧ ಸರ್ಕಾರ (ಚಿಕ್ಕಮಗಳೂರು ಟೌನ್ ಠಾಣಾ ಪೊಲೀಸರು) ಮತ್ತು ದೂರುದಾರ ಸುಧೀರ್ ಮುರೊಳ್ಳಿಗೆ ನೋಟಿಸ್ ಜಾರಿಗೊಳಿಸಿತು. ಹಾಗೆಯೇ, ಇದೇ ಪ್ರಕರಣ ಸಂಬಂಧ ತಮ್ಮ ವಿರುದ್ಧದ ಎಫ್ಐಆರ್‌ಗೆ ತಡೆ ಕೋರಿ 2023ರ ಮೇ ನಲ್ಲಿ ಚಿಕ್ಕಮಗಳೂರು ಜಿಲ್ಲಾಧಿಕಾರಿಯಾಗಿದ್ದ ರಮೇಶ್ ಸಲ್ಲಿಸಿರುವ ಅರ್ಜಿಯಲ್ಲೂ ಇದೇ ಆದೇಶ ಮಾಡಲಾಗುವುದು ಎಂದು ಮೌಖಿಕವಾಗಿ ತಿಳಿಸಿದ ಪೀಠ, ವಿಚಾರಣೆಯನ್ನು 7ಕ್ಕೆ ಮುಂದೂಡಿತು.

ಇದಕ್ಕೂ ಮುನ್ನ ಅರ್ಜಿದಾರ ಡಿ.ಎನ್. ಜೀವರಾಜ್ ಪರ 2023ರ ಮೇ 13ರಂದು ನಡೆದಿದೆ ಎನ್ನಲಾದ ಆರೋಪ ಆಧರಿಸಿ ಈಗ ಪ್ರಕರಣ ದಾಖಲಿಸಲಾಗಿದೆ. ಆಡಳಿತರೂಢ ಪಕ್ಷದ ಅಭ್ಯರ್ಥಿ ಸೋತ ಹಿನ್ನೆಲೆಯಲ್ಲಿ ಈ ಪ್ರಕರಣ ದಾಖಲಿಸಲಾಗಿದೆ. ಇಲ್ಲಿ ರಾಜಕೀಯ ದುರುದ್ದೇಶವಿದೆ ಎಂದು ಆಕ್ಷೇಪಿಸಿದರು.

ಪ್ರಮಾಣ ವಚನಕ್ಕೆ ವಿಳಂಬ: ರಾಜ್ಯಪಾಲರಿಗೆ ದೂರು



ಬೆಂಗಳೂರು: ಶೃಂಗೇರಿ ಶಾಸಕ ಡಿ.ಎನ್.ಜೀವರಾಜ್ ಅವರಿಗೆ ಸ್ಪೀಕರ್‌ಯು.ಟಿ.ಖಾದರ್‌ಪ್ರಮಾಣವಚನ ಬೋಧಿಸಲು ತಡ ಮಾಡುತ್ತಿದ್ದಾರೆ. ಆದ್ದರಿಂದ ತಾವೇ ನೇರವಾಗಿ ಪ್ರಮಾಣವಚನ ಬೋಧಿಸುವಂತೆ ವಿಧಾನಸಭೆ ಪ್ರತಿಪಕ್ಷದ ನಾಯಕ ಆರ್. ಅಶೋಕ್ ಅವರು ರಾಜ್ಯಪಾಲರಿಗೆ ದೂರು ನೀಡಿ ಆಗ್ರಹಿಸಿದ್ದಾರೆ. ಮಂಗಳವಾರ ಜೀವರಾಜ್ ಜತೆ ಲೋಕಭವನಕ್ಕೆ ತೆರಳಿ ರಾಜ್ಯಪಾಲ ಗೆಹಲೋತ್ ಅವರಿಗೆ ಅಶೋಕ್ ದೂರು ಸಲ್ಲಿಸಿದರು.

ಅಧಿಕಾರಿಗಳಿಗೆ ಡಕಾಯಿತರು ಪದ ಬಳಕೆ: ಅಶೋಕ್ ಕಿಡಿ

ಅವರ ಅಧಿಕಾರಿಗಳನ್ನೇ ಸಿಎಂ ಹೀಗೆ ಕರೆದಿದ್ದಾರೆ
ಕಾಂಗ್ರೆಸ್ ಸರ್ಕಾರವೇ ಡಕಾಯಿತಿ ಸರ್ಕಾರ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಅಧಿಕಾರಿಗಳ ಬಗ್ಗೆ ಡಕಾಯಿತರು ಪದ ಬಳಸಿರುವ ಸಿದ್ದರಾಮಯ್ಯ ಅವರಿಗೆ ನಾಚಿಕೆಯಾಗಬೇಕು. ಅವರೇ ನೇಮಿಸಿದ ಅಧಿಕಾರಿಗಳನ್ನು ಡಕಾಯಿತರು ಎಂದ ಮೇಲೆ ಅವರ ಸರ್ಕಾರವೂ ಡಕಾಯಿತಿ ಸರ್ಕಾರವೇ ಆಗಿದೆ ಎಂದು ವಿಧಾನಸಭೆಯ ಪ್ರತಿಪಕ್ಷದ ನಾಯಕ ಆರ್.ಅಶೋಕ್ ತಿರುಗೇಟು ನೀಡಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿ, ಜೀವರಾಜ್ ಅವರ ವಿರುದ್ಧದ ದೂರಿಗೆ ಸಂಬಂಧಿಸಿ ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ಛೀಮಾರಿ ಹಾಕಿದೆ. ಕಾಂಗ್ರೆಸ್‌ನವರೇ ದೊಡ್ಡ ಡಕಾಯಿತಿ ಮಾಡುತ್ತಾರೆ. ಮತ ಎಣಿಕೆ ವೇಳೆ ಚುನಾವಣಾಧಿಕಾರಿಗೆ ಸಿದ್ದರಾಮಯ್ಯ ಅಥವಾ ಡಿ.ಕೆ.ಶಿವಕುಮಾರ್ ಕರೆ ಮಾಡಿ ಒತ್ತಡ ಹೇರಿದ್ದಾರೆಯೇ ಎಂಬುದರ ಬಗ್ಗೆ ಸಿಬಿಐ ತನಿಖೆ ಆಗಬೇಕಿದೆ ಎಂದರು.

